ತೆಗೆದುಕೊಳ್ಳುವುದಕ್ಕೆ ಬೇರೆ ಮಂತ್ರಿಗಳೂ ಸಹ ಇಲ್ಲ. ಆದ್ದರಿಂದ ಅವರ ಒಂದು ಬಿಲ್‌ನ್ನು ಈಗ ತೆಗೆದುಕೊಳ್ಳೋಣ.

8. ಶಾಸನ ರಚನೆ

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ (ತಿದ್ದಪಡಿ) ವಿಧೇಯಕ 2006 ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು.

ಅಧ್ಯಕ್ಷರು; ಈಗ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕ 2006 ನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳುವ ಬಗ್ಗೆ ಈಗ ಮಂತ್ರಿಗಳು ವಿವರಣೆ ನೀಡುವುದು.

ಶ್ರೀ ಡಿ. ಹೆಚ್. ಶಂಕರ ಮೂರ್ತಿ (ಉನ್ನತ ಶಿಕ್ಷಣ ಸಚಿವರು) ಮಾನ್ಯ ಅಧ್ಯಕ್ಷರೆ, ಸದರಿ ವಿಧೇಯಕವನ್ನು ಈ ಮನೆಯಲ್ಲಿ ಪಾಸ್‌ಮಾಡಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇದನ್ನು ನಾನು ಇವತ್ತು ಕೇಳುತ್ತಿಲ್ಲ. ರಾಷ್ಟ್ರಪತಿಗಳ ಭಾಷಣದ ಬಗ್ಗೆ ಚರ್ಚೆ ಪ್ರಾರಂಭವಾದ ದಿವಸದಿಂದ ಇದನ್ನು ನಾನು ಪ್ರಸ್ತಾಪ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ಇದರೊಳಗೆ ಇರತಕ್ಕಂಥ ಉದ್ದೇಶ ಏನೆಂದರೆ ಹೈಕೋರ್ಟ ಮತ್ತು ಸುಪ್ರಿಂ ಕೋರ್ಟಿನ ಆದೇಶದ ಅನ್ವಯ ಈ ಒಂದು ಬಿಲ್‌ನ್ನು ನಾವು ಮಂಡಿಸಬೇಕಾಗಿದೆ. ಈ ಬಿಲ್‌ನ್ನು ತಾವು ಈ ಸದನದಲ್ಲಿ ಪಾಸ್ ಮಾಡಿಕೊಟ್ಟರೆ ನಾಳೆ ಇದನ್ನು ವಿಧಾನಪರಿಷತ್‌ಗೆ ತೆಗೆದುಕೊಂಡು ಹೋಗುತ್ತೇನೆ. ಏಕೆಂದರೆ ನಾಳೆ ಕೋನೆ ದಿವಸವಾಗಿದೆ ಇಲ್ಲದಿದ್ದರೆ ಹೈ ಕೋರ್ಟ್‌ನ ಆದೇಶಕ್ಕೆ ನಾವೆಲ್ಲರೂ ಸೇರಿ ವಿರುದ್ಧವಾಗಿದ್ದೇವೆ ಎನ್ನತಕ್ಕಂಥ ಭಾವನೆ ಬರುತ್ತದೆ. ದಯಮಾಡಿ ಇದರ ಬಗ್ಗೆ ಚರ್ಚೆ ಮಾಡೋಣ. ಮತ್ತೆ ಈ ಬಿಲ್ ಬಗ್ಗೆ ತಮಗೆ ಇರತಕ್ಕಂಥ ಅನುಮಾನಗಳ ಬಗ್ಗೆ ಮತ್ತು ತಾವು ಕೇಳತಕ್ಕಂಥ ಪ್ರಶ್ನೆಗಳಿಗೆ ಸಮಾಜಾಯಿಷಿ ಕೊಡುತ್ತೇನೆಂಬ ನಂಬಿಕೆ ನನಗೆ ಇದೆ. ಇದಕ್ಕೆ ಸಹ ಪ್ರಯತ್ನ ಮಾಡುತ್ತೇನೆ. ದಯಾಮಡಿ ಈ ಬಿಲ್‌ನ್ನು ಪಾಸ್ ಮಾಡಿಕೊಟ್ಟರೆ ಇದನ್ನು ಮೇಲ್ಮನೆಗೆ ತೆಗೆದುಕೊಂಡು ಹೋಗುವುದಕ್ಕೆ ಅನುಕೂಲವಾಗುತ್ತದೆ. ಏಕೆಂದರೆ ಈ ಬಿಲ್‌ನ್ನು ಇಲ್ಲಿ ಮಂಡನೆ ಮಾಡಲಾಗಿದೆ.

ಶ್ರೀ ಕೆ.ಆರ್. ರಮೇಶ್ ಕುಮಾರ್; ಮಾನ್ಯ ಶಂಕರಮೂರ್ತಿಯವರೇ ತಾವು ಒಂದು ನಿಮಿಷ ಯಿಲ್ಡ್ ಆಗಿ. ಪ್ರತಿದಿವಸದ ಅಜೆಂಡಾದಲ್ಲಿ ಇದು ಇರುತ್ತದೆ. ಆದರೆ We have not been going by Agenda ನಾವು ಕೂಡ ಇದರ ಪ್ರಿಪೇರ್ ಆಗಿ ಬರಬೇಕಾಗುತ್ತದೆ. ಆದ್ದರಿಂದ ಬೇರೆ ಬಿಲ್‌ಗಳನ್ನು ತೆಗೆದುಕೊಳ್ಳಿ. ಅವೆಲ್ಲವನ್ನು ನಾವು ಪಾಸ್ ಮಾಡಿಕೊಡುತ್ತೇವೆ. ಇದನ್ನು ನಾಳೆ ತೆಗೆದುಕೊಂಡರೆ ಒಳ್ಳೆಯದು.

ಅಧ್ಯಕ್ಷರು; ಬಹಳ ಜನ ಸಚಿವರು ಇಲ್ಲ ಆದ್ದರಿಂದ ಇದನ್ನು ತೆಗೆದುಕೊಳ್ಳೋಣ.

ಶ್ರೀ ಡಿ.ಹೆಚ್. ಶಂಕರಮೂರ್ತಿ; ನಾನು ಮಾತನಾಡುವುದಕ್ಕೆ ಬಿಡುವುದಿಲ್ಲವೆಂದರೆ ಹೇಗೆ?

ಅಧ್ಯಕ್ಷರು; ಮಾನ್ಯ ರಮೇಶ್ ಕುಮಾರ್‌ರವರೆ ಬೇರೆ ಮಂತ್ರಿಗಳು ಈಗ ಇಲ್ಲ. ಆದ್ದರಿಂದ ಇದನ್ನು ತೆಗೆದುಕೊಳ್ಳೋಣ,

ಶ್ರೀ ಕೆ.ಆರ್. ರಮೇಶ್ ಕುಮಾರ್; ಬೇರೆ ಬಿಲ್‌ಗಳನ್ನು ಈಗ ತೆಗೆದುಕೊಳ್ಳಿ ಅವುಗಳನ್ನು ನಾವು ಪಾಸ್ ಮಾಡಿಕೊಡುವುದಕ್ಕೆ ತಯಾರಿದ್ದೇವೆ. ಪ್ರತಿದಿವಸ ಅಜೆಂಡಾದಲ್ಲಿ ಎಲ್ಲಾ ಬಿಲ್‌ಗಳು ಇರುತ್ತದೆ. ಆದ್ದರಿಂದ ಇವುಗಳಲ್ಲಿ ಯಾವುದು ಓದುವುದು ಯಾವುದು ಬಿಡುವುದು? ಕೆಲವು ಫ್ರೆಂಡ್‌ಗಳು ನೋಟ್ಸ್ ಅದು– ಇದು ಕೊಟ್ಟಿದ್ದಾರೆ, ಆದ್ದರಿಂದ ನಾಳೆ ಬೆಳಿಗ್ಗೆ ತೆಗೆದುಕೊಳ್ಳಿ. ಪಾಸ್ ಮಾಡಿಕೊಡುತ್ತೇವೆ.

ಶ್ರೀ ಡಿ. ಹೆಚ್. ಶಂಕರಮೂರ್ತಿ; ಇವತ್ತು ಇಲ್ಲಿ ಪಾಸ್ ಮಾಡಿಕೊಟ್ಟರೆ ನಾಳೆ ದಿವಸ ವಿಧಾನಪರಿಷತ್‌ಗೆ ತೆಗೆದುಕೊಂಡು ಹೋಗುತ್ತೇನೆ.

ಶ್ರೀ ಬಸವರಾಜ್ ರಾಯರೆಡ್ಡಿ ; ಮಾನ್ಯ ರಮೇಶಕುಮಾರ್‌ರವರು ಹೇಳತಕ್ಕಂಥದ್ದು ಸರಿಯಿದೆ. ಇಲ್ಲಿ ಇವತ್ತು ಇನ್ನು ಸಾಕಷ್ಟು ಬಿಲ್ ಇದೆ. ಆದ್ದರಿಂದ ಅವುಗಳೆಲ್ಲವನ್ನು ಈಗ ತೆಗೆದುಕೊಳ್ಳಿ. ಸಿಇಟಿ ಬಿಲ್ ಬಹಳ ಮುಖ್ಯವಾಗಿದುವುದರಿಂದ ನಾಳೆ ಬೆಳಿಗ್ಗೆ ತೆಗೆದುಕೊಳ್ಳಲಿ. ಸಾಯಂಕಾಲದೊಳಗೆ ಪಾಸ್ ಮಾಡಿಕೊಡೋಣ. ಏಕೆಂದರೆ ಇದರ ಬಗ್ಗೆ ಸಾಕಷ್ಟು ಚರ್ಚೆ ಆಗಬೇಕಾಗಿದೆ.

ಶ್ರೀ ವಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು); ಮಾನ್ಯ ಅಧ್ಯಕ್ಷರ ಕೊಠಡಿಯಲ್ಲಿ ಚರ್ಚೆಯಾದಾಗ ಇದರ ಬಗ್ಗೆ ಕೂಡ ಸಾಕಷ್ಟು ಚರ್ಚೆಯಾಯಿತು. ಮತ್ತೆ ಈ ಬಿಲ್‌ನ ಮಹತ್ವ ಆ ಭಾಗದಲ್ಲಿ ಇರತಕ್ಕಂಥ ಹಿರಿಯ ಸದ್ಯಸ್ಯರಿಗೂ ಸಹ ಗೊತ್ತಿದೆ. ನಾಳೆ ಬೆಳಿಗ್ಗೆ ಆದ್ಯತೇ ಕೊಟ್ಟು ಈ ಬಿಲ್‌ನ್ನು ತೆಗೆದುಕೊಂಡು ಪಾಸ್ ಮಾಡಿಕೊಡುತ್ತೇವೆಂದು ಮಾತು ಕೊಟ್ಟಿದ್ದಾರೆ. ಉಳಿದ ಎಲ್ಲಾ ಬಿಲ್‌ಗಳಿಗೆ ಒಂದು– ಎರಡು ನಿಮಿಷ ಕೂಡ ಆಗುವುದಿಲ್ಲ. ಪಾಸ್ ಮಾಡಿಕೊಳ್ಳಿ ಎಂದು ಸಹ ಹೇಳಿದ್ದಾರೆ. ಆದ್ದರಿಂದ ನಾಳೆ ಬೆಳಿಗ್ಗೆ ಇದನ್ನು ಮೊದಲೇ ಪ್ರಸ್ತಾಪ ಮಾಡಿ ಆನಂತರ ಇಲ್ಲಿಂದ ಆ ಮನೆಗೆ ಹೋಗಲಿ.

ಶ್ರೀ ಡಿ. ಹೆಚ್. ಶಂಕರಮೂರ್ತಿ; ಇಲ್ಲಿ ಮುಗಿಸಿ ನಾಳೆ ಅಲ್ಲಿಗೆ ತೆಗೆದುಕೊಂಡು ಹೋಗಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ; ನಾಳೆ ಮೊದಲೇ ನಿಮ್ಮ ಬಿಲ್ ತೆಗೆದುಕೊಳ್ಳುತ್ತಾರೆ. ಇಲ್ಲಿ ಪಾಸ್ ಆದಮೇಲೆ ಅಲ್ಲಿಗೆ ತೆಗೆದುಕೊಂಡು ಹೋಗಬಹುದು.

ಶ್ರೀ ಡಿ.ಹೆಚ್. ಶಂಕರಮೂರ್ತಿ; 15 ದಿವಸದಿಂದ ಈ ಬಿಲ್ ಲಿಸ್ಟ್ ಆಗುತ್ತಿದೆ. ಇವತ್ತು ಕೂಡ ಲಿಸ್ಟ್ ಆಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ; ನಾಳೆ ಬೆಳ್ಳಿಗ್ಗೆ ತೆಗೆದುಕೊಳ್ಳುತ್ತಾರೆ. ಈಗ ಬೇರೆಯದು ತೆಗೆದುಕೊಳ್ಳಿ.

SRI K.R. RAMESH KUMAR; That is exactly the problem. 15 ದಿವಸದಿಂದ ಲಿಸ್ಟ್ ಆಗುತ್ತಿದೆ. ಮತ್ತೆ ಬಿಸಿನೆಸ್ ನಮ್ಮ ಅಜೆಂಡಾ ಪ್ರಕಾರ ನಡೆಯುತ್ತಿಲ್ಲ. ಇಲ್ಲಿರಕ್ಕಂಥ ಬೇರೆ ಬಿಲ್ಸ್ ಬಗ್ಗೆ ನಮ್ಮ ಪಾರ್ಟಿಸಿಪೇಟ್ ಅಗತ್ಯತೆ ಇಲ್ಲ. ಆದರೆ ಈ ಬಿಲ್ ಬಗ್ಗೆ ನಾವು ಪಾರ್ಟಿಸಿಪೇಟ್ ಮಾಡಬೇಕಾಗುತ್ತದೆ. ಮತ್ತೆ ನಮ್ಮ ವ್ಯೂಸ್‌ನ್ನು ಆಫರ್ ಮಾಡಬೇಕಾಗುತ್ತದೆ. ಆದ್ದರಿಂದ ಬೇರೆ ಇರತಕ್ಕಂಥ inconsequential ಬಿಲ್‌ಗಳನ್ನು ಪಾಸ್ ಮಾಡೋಣ. ಈ ಬಿಲ್‌ನ್ನು ನಾಳೆ ಬೆಳಿಗ್ಗೆ ತೆಗೆದುಕೊಂಡು ಪ್ರಶ್ನೋತ್ತರವನ್ನು ಆ ನಂತರ ತೆಗೆದುಕೊಳ್ಳಬಹುದು. ನಾಳೆ ಈ ಬಿಲ್ ಖಂಡಿತ ಬರುತ್ತದೆಂದು ಗೊತ್ತಿರುವುದರಿಂದ ರಾತ್ರಿ ಇದರ ಬಗ್ಗೆ ಸ್ವಲ್ಪ ಗ್ಲಾನ್ಸ್ ಮಾಡಿಕೊಂಡು ಬಂದಿರುತ್ತೇವೆ. Please enable us also to participate that is exactly what we have been telling.

ಶ್ರೀ ಬಿ.ಎಸ್. ಯಡಿಯೂರಪ್ಪ; ಎಲ್ಲರೂ ಏಕೆ ಎದ್ದೇಳುತ್ತಿರೂ ಎಂಬುದು ಗೊತ್ತಾಗುತ್ತಿಲ್ಲ.

ಅಧ್ಯಕ್ಷರು: ವೃತ್ತಿ ಶಿಕ್ಷಣಕ್ಕೆ ಸಂಬಂಧಪಟ್ಟಂಥ ಬಿಲ್‌ನ್ನು ಆಮೇಲೆ ತೆಗೆದುಕೊಳ್ಳೊಣ. ಮಾನ್ಯ ಡಿ.ಹೆಚ್. ಶಂಕರಮೂರ್ತಿಯವರ ಇಲಾಖೆಗೆ ಸಂಬಂಧಪಟ್ಟಂತೆ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯ (ತಿದ್ದುಪಡಿ) ವಿಧೇಯಕ 2006 ತೆಗೆದುಕೊಳ್ಳೋಣ.

ಶ್ರೀ ಡಿ.ಹೆಚ್. ಶಂಕರಮೂರ್ತಿ (ಉನ್ನತ ಶಿಕ್ಷಣ ಸಚಿವರು): ಮಾನ್ಯ ಅಧ್ಯಕ್ಷರೆ 2006ನೇ ಸಾಲಿನ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು. (ಅನುಬಂಧ-2)

ಶ್ರೀ ಡಿ.ಹೆಚ್. ಶಂಕರಮೂರ್ತಿ (ಉನ್ನತ ಶಿಕ್ಷಣ ಸಚಿವರು) ಮಾನ್ಯ ಅಧ್ಯಕ್ಷರೆ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಅಧಿನಿಯಮ 74ರದ್ದು ಜಾರಿಗೆ ಬರುವತನಕ ಕರ್ನಾಟಕ ರಾಜ್ಯದಲ್ಲಿ ಎಲ್ಲಾ ಇಂಜಿನಿಯರಿಂಗ್

ಕಾಲೇಜ್‌ಗಳು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯ ಅಧಿನಿಯಮ 76ರ ಅಡಿಯಲ್ಲಿ ನಿಯಂತ್ರಿಸಲ್ಪಡುತ್ತಿದ್ದವು. ಈ ಇಂಜಿನಿಯರಿಂಗ್ ಕಾಲೇಜುಗಳಿಗೆ ಇಂಜಿನಿಯರಿಂಗ್ ತಂತ್ರಜ್ಞಾನ ಮತ್ತು ಸಂಬಂಧಪಟ್ಟ ವಿಜ್ಞಾನಗಳಲ್ಲಿ ಪದವಿ ಮತ್ತು ಸ್ನಾತಕೊತ್ತರ ಪದವಿ ಹಾಗೂ ಸಂಶೋಧನೆ ವ್ಯಾಸಂಗದ ಕ್ರಮಗಳನ್ನು ನಡೆಸುತ್ತಿದ್ದರು. ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯ ಅಧಿನಿಯಮ 2000ರಲ್ಲಿ 64ನೇ ಪ್ರಕರಣಕ್ಕೆ ಅನುಗುಣವಾಗಿ ವಿಶ್ವವಿದ್ಯಾಲಯಗಳು ರಾಜ್ಯಸರ್ಕಾರದ ಪೂರ್ವ ಸಹಮತಿ ಪಡೆದು ಒಂದು ಸಂಯೋಜನೆಗೊಂಡು ಕಾಲೇಜು ಅಂದರೆ, ಅವರಿಗೊಂದು ಸ್ವಾಯತ್ತತೆ ಕೊಡಬೇಕಾಗಿತ್ತು . ವಿಭಾಗ ಅಥವಾ ಘಟಕವನ್ನು ಯಾವುದೇ ವ್ಯಾಸಂಗ ಕ್ರಮಕ್ಕಾಗಿ ರಚಿಸಲಾದ ಪದವಿ ನಿಯಮಗಳನ್ನು ನಿರ್ದಿಷ್ಟ ಪಡಿಸಬಹುದಾದ ಪ್ರಕ್ರಿಯೆಯನ್ನು ಅನುಸರಿಸಿದ ತರುವಾಯ ಮತ್ತು ಅಂಥ ಷರತ್ತುಗಳಿಗೆ ಒಳಪಟ್ಟು ಶಿಕ್ಷಣ ಗುಣಮಟ್ಟವನ್ನು ಸುಧಾರಿಸುವ ಹಾಗೂ ಸುಸಂಗತ ವ್ಯಾಸಂಗ ಕ್ರಮವನ್ನು ಪ್ರಾರಂಭಿಸುವ ದೃಷ್ಟಿಯಿಂದ ನಿರ್ಧಿಷ್ಟಪಡಿಬಹುದಾದಂಥ ಅವಧಿಗೆ ಸ್ವಾಯತ್ತ ಕಾಲೇಜುಗಳೆಂದು ನಾಮಂಕಿತಗೊಳಿಸಬಹುದು. ಆದರೆ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯಕ್ಕೆ ಸಂಯೋಜನೆಗೊಂಡ ಕಾಲೇಜುಗಳಿಗೆ ಸ್ವಾಯತ್ತ ಕಾಲೇಜುಗಳು ಸ್ಥಾನಮಾನ ನೀಡುವಂಥ ಯಾವುದೇ ಉಪಬಂಧ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಅಧಿನಿಯಮದಲ್ಲಿ ಇಲ್ಲ. ಆದುದರಿಂದ ಉತ್ತಮ ಕಾಲೇಜುಗಳ ತಮ್ಮದೇ ವ್ಯಾಸಂಗ ಕ್ರಮ ಹಾಗೂ ಪಠ್ಯ ವಿಧಾನ ರೂಪಿಸಿಕೊಂಡು ಅವುಗಳ ಶೈಕ್ಷಣಿಕ ಗುಣಮಟ್ಟವನ್ನು ಸುಧಾರಿಸಿಕೊಳ್ಳಲು ಸ್ವಾಂತಂತ್ರ್ಯ ಒದಗಿಸುವಂತೆ ಮಾಡುವುದಕ್ಕಾಗಿ ಇದೇ ಬಗೆಯ ಒಂದು ಉಪಬಂಧವನ್ನು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಅಧಿ ನಿಯಮದಲ್ಲಿ ಸೇರಿಸಿಕೊಳ್ಳಬೇಕಾದ ಅಗತ್ಯತೆ ಇದೆ. ಡೀಮ್ಡ್ ಯೂನಿವರ್ಸಿಟಿ ಮಾಡುವುದಕ್ಕೆ ಅವರಿಗೊಂದು ಪವರ್ ಕೊಡುತ್ತಿದ್ದೇವಷ್ಟೆ. ಇದನ್ನು ಕೋಡಲೇ ಬೇಕಾಗಿತ್ತು. ಅಂದರೆ ಇರತಕ್ಕಂಥ ಕಾನೂನಿನಲ್ಲಿ ಕೊಡುವುದಕ್ಕೆ ಅವಕಾಶ ಇರಲಿಲ್ಲ. ಆದ್ದರಿಂದ ಅವರಿಗೆ ಕೊಡುವುದಕ್ಕಾಗಿ ಒಂದು ಅವಕಾಶ ಕೊಡಬೇಕೆಂದು ಕೇಳುತ್ತಿದ್ದೇನೆ. ಇದನ್ನು ಮಾಡುವುದರಿಂದ ಏನು ಲಾಭವಾಗುತ್ತದೆಂದರೆ, ವಿಶ್ವಬ್ಯಾಂಕ್ ಯೋಜನೆಗಳಿಗೆ ಆಯ್ಕೆಗೊಂಡು ಶಿಕ್ಷಣ ಸಂಸ್ಥೆಗಳಿಗೆ ಸ್ವಯತ್ತತೆ ನೀಡಬೇಕೆಂದು ವಿಶ್ವಬ್ಯಾಂಕ್ ಸಹ ಹೇಳಿದೆ. ಕೆಲವು ಯೂನಿವರ್ಸಿಟಿಗಳಿಗೆ ವಿಶ್ವಬ್ಯಾಂಕ್‌ನಿಂದ ಕೂಡ ಹಣ ಬರುತ್ತಿದೆ. ಆದ್ದರಿಂದ ಈ ರೀತಿಯಾದ ಒಂದು ಸ್ವಾಯತ್ತತೆ ಕೊಡಬೇಕಾಗಿದೆ ಇದಕ್ಕೊಂದು ಸ್ಮಾಲ್ ಟಿಕ್ನಿಕಲ್ ಟರ್ಮ್ ಅಷ್ಟೆ. ಬಹಳ ದೊಡ್ಡ ಅಧಿಕಾರವೇನು ಅಲ್ಲ. ಒಂದು ಟೆಕ್ನಕಲ್ ಆಗಿ ಇದನ್ನು ಕೊಡಬೇಕಾಗಿದೆ.

ಶ್ರೀ ಕೆ.ಆರ್. ರಮೇಶ್ ಕುಮಾರ್. ಆ ರೀತಿಯಲ್ಲಿ It has a Commercial Angale also. ಇವರದೊಂದು ಅಟಾಮನಸ್ ಆಗಬೇಕು ಮತ್ತೆ ಫಾರಿನ್ ಯೂನಿವರ್ಸಿಟಿಸ್ ಜೊತೆ ಟೈಅಫ್ ಮಾಡಿಕೊಳ್ಳಬೇಕು.

ಶ್ರೀ ಡಿ. ಹೆಚ್. ಶಂಕರ ಮೂರ್ತಿ; ತಾಂತ್ರಿಕವಾಗಿರತಕ್ಕಂಥ ಒಂದು ಸಣ್ಣ ಅಮೆಂಟ್‌ಮೆಂಟ್ ಆಗಿದೆ. ಬಹಳ ದೊಡ್ಡ ವ್ಯತ್ಯಾಸ ಆಗುವಂಥದ್ದು ಏನಿಲ್ಲ. ಮತ್ತೆ ಈ ತಾಂತ್ರಿಕ ವಿಶ್ವವಿದ್ಯಾಲಯಕ್ಕೆ ಒಂದು ಸ್ವಾಯತ್ತತೆ ಕೊಡತಕ್ಕಂಥ ಅಧಿಕಾರ ಅವರಿಗೆ ಕೊಡುವುದಕ್ಕಾಗಿ ಈ ಬಿಲ್ ತರಲಾಗಿದೆ. ಒರಿಜನಲ್ ಬಿಲ್‌ನಲ್ಲಿ ಈ ಒಂದು ಅವಕಾಶ ಇರಲಿಲ್ಲ. ಆದ್ದರಿಂದ ಇದನ್ನು ಮಾಡಿಕೊಡಿ ಎಂದು ಒಂದು ಸಣ್ಣ ತಿದ್ದುಪಡಿ ತರಲಾಗಿದೆ. ಬಹಳ ದೊಡ್ಡ ಅಥವಾ ಪೂರ್ತಿ ಅಮೂಲಾಗ್ರ ಬದಲಾವಣೆ ಮಾಡತಕ್ಕಂಥದ್ದು ಏನಿಲ್ಲ. ಮತ್ತೆ ಬೇರೆನ್ನು ಹೊಸದೇನು ಇಲ್ಲ. ಒಂದು ಸಣ್ಣ ತಾಂತ್ರಿಕ ತಿದ್ದುಪಡಿಯನ್ನು ತರತಕ್ಕಂಥ ಬಿಲ್ ಇದಾಗಿದೆ. ದಯಮಾಡಿ ಇದನ್ನು ಪಾಸ್ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿರ್ಡಲ್); ಮಾನ್ಯ ಅಧ್ಯಕ್ಷರೆ ಮಾನ್ಯ ಸಚಿವರು ಇದೊಂದು ಸಣ್ಣ ಬಿಲ್ ಎಂದು ಪ್ರಸ್ತಾಪ ಮಾಡಿದ್ದಾರೆ. ಇದು ಹೇಗಿದೆ. ಎಂದರೆ ದೊಡ್ಡ ವಿಧಾನಸೌಧಕ್ಕೆ ಸಣ್ಣ ಕೀಲಿ ಹೊರಗಡೆ ಇದ್ದ ಹಾಗೆ. ಅಂದರೆ ವಿಧಾನಸೌಧದಷ್ಟೆ. ದೊಡ್ಡ ಕೀಲಿ ಏನು ಇರುವುದಿಲ್ಲ. ಕೀಲಿ ಇರುವುದೇ ಚಿಕ್ಕದು. ಆದರೆ ಎಲ್ಲವೂ ಅದರಲ್ಲಿರುತ್ತದೆ. ಅಂದರೆ ಕೀಲಿ ತೆಗೆದರೆ ಒಳಗಡೆ ಬರುವುದಕ್ಕೆ ಸಾಧ್ಯಾವಾಗುತ್ತದೆ. ಇಲ್ಲದಿದ್ದರೆ ಇಲ್ಲ ಈ ರೀತಿಯಾಗಿ ಇದು ಚಿಕ್ಕ ತಿದ್ದುಪಡಿ ಆಗಿದ್ದರೂ ಕೂಡ ನಾಳೆ ದಿವಸ ಏನಾಗುತ್ತದೆಂದರೆ ತನ್ನದೇ ರೂಲ್ಸ್ ರೆಗ್ಯುಲೇಷನ್‌ಗಳನ್ನು ಅಟಾನಮಿನವರು ಮಾಡಿಕೊಂಡು ತಮಗೆ ಬೇಕಾದಂಥ ಅಡ್ಮಿಷನ್ ಮತ್ತು ಅದಕ್ಕೆ ಬೇಕಾಗಿರತಕ್ಕಂಥ ನಾರ್ಮ್ಸ್ ಹಾಕಿಕೊಂಡು ಕೆಲಸ ಮಾಡತಕ್ಕಂಥದ್ದು ಆಗುತ್ತದೆ. ಆಗ ಸರ್ಕಾರದ್ದು ನಡೆಯುವುದಿಲ್ಲ ಮತ್ತು ಯಾವ ಯೂನಿವರ್ಸಿಟೀಗಳು ವಿಶ್ವೇಶ್ವರಯ್ಯ ಯೂನಿವರ್ಸಿಟಿ ತನಗೆ ಬೇಕಾದವರಿಗೆ ಸ್ವಾಂತಂತ್ರ್ಯಯವನ್ನು ಕೊಟ್ಟರೆ ಅಟಾನಮಿ ಕೊಟ್ಟ ಕೂಡ ಈ ಸರ್ಕಾರದಿಂದ ಹೋದಂಥ ಯಾವುದೇ ಆದೇಶವನ್ನು ಅವರು ತೆಗೆದುಕೊಳ್ಳಬೇಕಾದಂಥಾದ್ದು. ಇಲ್ಲ. They can refuse also.

ಈಗ ರಿಸೆರ್ವೇಶನ್ ನಮ್ಮಲ್ಲಿ ಇದೆ. ರೋಸ್ಟರ್ ಪದ್ದತಿ ಇದೆ. ಆಡ್ಮಿಷನ್‌ಗೊಸ್ಕರ ನಾವು ರೂಲ್ಸ್ ಮಾಡುತ್ತೇವೆ. ಫೀಸ್‌ಗೋಸ್ಕರ ರೂಲ್ಸ್ ಮಾಡುತ್ತೇವೆ. ಇದೆಲ್ಲವೂ ಕೂಡ ನಮ್ಮಲ್ಲಿ ಇದ್ದಾಗ ನಾಳೆ ಅಟಾನಮಿ ಆದಾಗ ಏನಾಗುತ್ತದೆ? ಈಗಾಗಲೇ ತಮಗೆ ಗೊತ್ತಿದೆ. ನಾವು ಮಣಿಪಾಲ್‌ಗೆ ಅಟಾನಮಿ

ಕೊಟ್ಟಿದ್ದೇವೆ. ಅಲ್ಲಿ ಎಷ್ಟರಮಟ್ಟಿಗೆ ಸರ್ಕಾರದ್ದು ನಡೆಯುತ್ತದೆ. ಎಷ್ಟರಮಟ್ಟಿಗೆ ಅಲ್ಲಿ ಬಡ ವಿದ್ಯಾರ್ಥಿಗಳಿಗೆ ಸೀಟ್ ಸಿಗುತ್ತವೆ. ಎಷ್ಟರಮಟ್ಟಿಗೆ ಮಧ್ಯಮವರ್ಗದ ಮಕ್ಕಳಿಗೆ ಸೀಟು ಸಿಗುತ್ತವೆ, ಎಂಬುದು ಎಲ್ಲರಿಗೂ ಗೊತ್ತಿದೆ. ಅದಕ್ಕೆ ನೀವು ನಾಳೆ ಅಟಾನಮಿ ಎಂದು ಮಾಡಿದರೆ (ಡೀಮ್ಡ್ ಯೂನಿವರ್ಸಿಯಂತೆ) ನಾಳೆ ಸರ್ಕಾರದ ಹಿಡಿತವೂ ತಪ್ಪುತ್ತದೆ. ಸಮಾಜಕ್ಕೆ ಅವರ ಕೊಡುಗೆ ಇರಬೇಕು. ವಿದ್ಯಾಸಂಸ್ಥೆಗಳಿದ್ದು ಅಥವಾ ಯಾವ ಉದ್ದೇಶಕ್ಕಾಗಿ ಅವರು ಇಂಜಿನೀಯರಿಂಗ್ ಕಾಲೇಜುಗಳನ್ನು ತೆರೆದಿದ್ದಾರೋ ಆ ಉದ್ದೇಶ ಕೂಡ ಪೂರ್ತಿಯಾಗುವುದಿಲ್ಲ. ಆ ಸಮಾಜಕ್ಕೆ ಅದು ತಲುಪುವುದಿಲ್ಲ. ಓನ್ಲಿ ಕಮಿಷಿಯನ್ ಎಸ್ಟಾಬ್ಲಿಷಮೆಂಟ್ ಆದಂತೆ ಆಗುತ್ತದೆ. ಎಲ್ಲರೂ ಅಟಾನಮಸ್ ಮಾಡಿಕೊಂಡು ಬರುವುದು ನಾವು ಸ್ವಂತಂತ್ರರಾಗಿದ್ದೇವೆ ನಮಗೆ ನೀವು ಎಲ್ಲರೂ ಯಾರೂ ಕೇಳಬೇಡಿ ನಮ್ಮ ಮನಸ್ಸು ಬಂದಂತೆ ಮಾಡುತ್ತೇವೆ ಎನ್ನುವಂಥದ್ದು ಬರುತ್ತದೆ. ಕೊನೆಗೆ ನೀವೇ ಸರ್ಕಾರದ ಬಡ ವಿದ್ಯಾರ್ಥಿಗೆ ಸಹಾಯ ಮಾಡಬೇಕೆಂದೂ ಕೂಡ ನಿಮ್ಮ ಮಾತನ್ನು ಕೇಳುವಂಥ ಸ್ಥಿತಿಯಲ್ಲಿ ಅವರು ಇರುವುದಿಲ್ಲ. ಈ ಸ್ವಾಂತಂತ್ರ್ಯಯವನ್ನು ನೀವು ವಿಶ್ವೇಶ್ವರಯ್ಯ ಯೂನಿವರ್ಸಿಟಿಗೆ ಕೊಟ್ಟರೆ ಅವರು in turn ಕಾಲೇಜಿಗಳಿಗೆ ಅವರು ಅಟಾನಮಿ ಎಂದು ಡಿಕ್ಲೇರ್ ಮಾಡಿದರೆ ಎಲ್ಲಾ ಕಾಲೇಜುಗಳು ಒಂದೊಂದಾಗಿ ಸಂಪೂರ್ಣವಾದಂಥ ಸ್ವಾಂತಂತ್ರ್ಯವನ್ನು ಪಡೆದುಳ್ಳುತ್ತೇವೆ. ನಾವು ಸಾಮಾಜಿಕವಾದ ನ್ಯಾಯವನ್ನು ಕೊಡಬೇಕೆಂದು ಏನು ಪದ್ಧತಿ ಇಟ್ಟುಕೊಂಡಿದ್ದೇವೆ ಅದ್ಕಾಕ್ಕಗಿಯೇ ಈ ಪ್ರೋಫಷನಲ್ ಕಾಲೇಜುಗಳಿಗೆ ಇಷ್ಟು ಬಡಿದಾಡುತ್ತಿದ್ದೇವೆ. ಕಾನೂನು ಮಾಡುವುದಕ್ಕೆ ಕಮಿಟಿ ಮಾಡುತ್ತಿದ್ದೇವೆ. ಫೀಸ್‌ಗೊಸ್ಕರ ಸುಪ್ರೀಂ ಕೋರ್ಟ ವರೆಗೆ ಹೋಗಿ ಹೋರಾಟವನ್ನು ಮಾಡುತ್ತಿದ್ದೇವೆ. ಆಂದರೆ ಸಾಮಾಜಿಕ ನ್ಯಾಯ ಸಿಗಲಿ ಎನ್ನುವ ದೃಷ್ಟಿಯಿಂದ ನಾವು ಮಾಡುವುದು. ಅದಕ್ಕಾಗಿ ನಿಮ್ಮ ಬಿಲ್‌ನ್ನು ಏಕೆ ಮುಂದಕ್ಕೆ ಹಾಕಿ ಎಂದು ಹೇಳುತ್ತಿದ್ದೇನೆಂದರೆ, ಇದೇ ದೃಷ್ಟಿಯಿಂದ. ಯಾವ ರೂಪದಲ್ಲಿ ಬಡ ಮಕ್ಕಳಿಗೆ ಸಹಾಯ ಮಡಬೇಕು. ಮೆರಿಟ್ ಇರತಕ್ಕಂಥ ಬಡ ಮಕ್ಕಳಿಗೆ ಯಾವ ರೀತಿಯಾದಂಥ ಹೇಗೆ ಸಹಾಯ ಮಾಡಬೇಕು. ಎನ್ನತಕ್ಕಂಥ ದೃಷ್ಟಿಕೋನವನ್ನು ಇಟ್ಟುಕೊಂಡು ಆ ಬಿಲ್‌ನ್ನು ಚರ್ಚೆ ಮಾಡಬೇಕು. ಎನ್ನುವ ದೃಷ್ಟಿಯಿಂದ ಇದನ್ನು ಮುಂದಕ್ಕೆ ಹಾಕಬೇಕು. ನೀವು ಅವರಿಗೆ ಸ್ವಾಂತ್ರತ್ರ್ಯವನ್ನು ಕೊಟ್ಟರೆ ಪ್ರತಿಯೊಂದು ಕಾಲೇಜುಗಳಿಗೆ ಅಟಾನಮಿ ಮಾಡತಕ್ಕಂಥದ್ದು. ಆದರೆ ಖಂಡಿತವಾಗಿ ನಾನು ಹೇಳುತ್ತೇನೆ. ನಾವೇ ಕೊಡಲಿ ಹಾಕಿಕೊಂಡಂತೆ ಆಗುತ್ತದೆ. ಇದರಿಂದ ನಮಗೆ ಅನ್ಯಾಯವಾಗುತ್ತದೆ. ಸಮಾಜಕ್ಕೆ ನಾವು ಏನು ಒಂದು ವಾಗ್ದಾನವನ್ನು ಕೊಟ್ಟಿದ್ದೇವೆ. ಅದನ್ನು ಈಡೇರಿಸುವುದು ಇದರಿಂದ

ಸ್ಸಾಧ್ಯವಾಗುವುದಿಲ್ಲ. ಬಡ ಮಕ್ಕಳಿಗೆ ನಾವು ಪ್ರೋಫೆಷನ್ ಕಾಲೇಜಿನಲ್ಲಿ ಮುಂದೆ ಸೀಟುಗಳನ್ನು ಕೊಡುತ್ತೇವೆ ಎಂದು ಏನು ಹೇಳುತ್ತೇವೆ. ಅದು ಆಗುವುದಿಲ್ಲ. ನಾಳೆ ದುಡ್ಡು ಇದ್ದವರು ಬರುತ್ತಾರೆ, ಎನ್‌ಆರ್‌ಎ ಸ್ಟೂಡೆಂಟ್ಸ್ ಬರುತ್ತಾರೆ ಇಲ್ಲವೆಂದರೆ ನೇಪಾಳ ಜೊತೆ ಟೈ ಮಾಡಿಕೊಳ್ಳುವುದು. ಮೇಲಿಷಿಯಾ ಜೊತೆ ಟೈ ಮಾಡಿಕೊಳ್ಳುವುದು ಸಿಂಗಾಪೂರ ಜೊತೆ ಟೈ ಮಾಡಿಕೊಳ್ಳುವುದು ಇವೆಲ್ಲಾ ಆಗುತ್ತದೆ ಈಗ ಆಸ್ಟ್ರೇಲಿಯಾ ಕಂಟ್ರೇಯರವರು ಯುರೋಪಿಯನ್ ಕಂಟ್ರೇಯವರು ಇಲ್ಲಿಗೆ ಬಂದು ಇಂಟ್‌ವ್ಯೂ ಮಾಡುತ್ತಿದ್ದಾರೆ. ನೀವು ನಡೆಯಿರಿ ನಮ್ಮ ಕಡೆ ಎಲ್ಲರೂ ವಿದ್ಯಾಭ್ಯಾಸಕ್ಕಾಗಿ ಎಂದು ಹೇಗೆ ಅವರನ್ನು ಇಲ್ಲಿಂದ ಕರೆದು ಕೊಂಡು ಹೋಗುತ್ತಿದ್ದಾರೋ ಆದೇ ರೀತಿಯಾಗಿ ನಾವು ಕೂಡ ಅಲ್ಲಿಂದ ಅಟಾನಮಿಸ್ ಆಗಿರುವಂಥ ಕಾಲೇಜುಗಳಿಗೆ ಕರೆದುಕೊಂಡು ಬರುವಂಥದ್ದು ಅಥವಾ ಮೆರಿಟ್ ಹೆಸರಿನ ಮೇಲೆ ಹಣದ ಹೆಸರಿನ ಮೇಲೆ, ಹೆಚ್ಚಿನ ಫೀಸ್ ಹೆಸರಿನ ಮೇಲೆ, ನಾವು ಇರುವ ಹಕ್ಕನ್ನು ಬೇರೆಯವರಿಗೆ ಕೊಡುತ್ತೇವೆಯೇ ಹೊರತಾಗಿ ಯಾವ ಸಮಾಜಕ್ಕೆ ಯಾವ ರಾಜ್ಯಕ್ಕೆ ಅನುಕೂಲವಾಗಬೇಕು ಎನ್ನುವ ಕಾನೂನನ್ನು ನಾವು ಮಾಡಿದ್ದೇವೆ ಅಥವಾ ಕಾಲೇಜುಗಳನ್ನು ಕೊಟ್ಟಿದ್ದೇವೆ ಆ ಉದ್ದೇಶ ಪೂರ್ತಿಯಾಗುವುದಿಲ್ಲ. ಅದಕ್ಕಾಗಿ ನೀವು ದಯವಿಟ್ಟು ಸಣ್ಣ ತಿದ್ದುಪಡಿ ಇದೆ ಇದು ಅಟಾಮನಿಸ್ ಕೊಡತಕ್ಕಂದ್ದು ಏನು ಇಲ್ಲ ಇದರಲ್ಲಿ ಚಿಕ್ಕದು, ಏನು ಎಂದು ಹೇಳುತ್ತಿದ್ದೀರಿ ಅದು ಸರಿಯಲ್ಲ. ಚಿಕ್ಕದು ಎಂದರೆ ಇದೊಂದು ಬಾವಿ ಬೀಗ ತೆಗೆದಂತೆ ಬೀಗ ತೆಗೆದ ಕೊಡಲೇ ಎಲ್ಲರೂ ಹೇಗೆ ಒಳಗಡೆ ಬರುತ್ತಾರೋ ವಿಧಾನಸೌಧದ ಒಳಗಡೆ ಮುಂಜಾನೆ 10 ಗಂಟೆಗೆ ಆ ರೀತಿ ಅಟಾನಮಿಸ್ ಎಂದು ನೀವು ಒಂದು ಸಲ ಮಾಡಿದರೆ ನಾಳೆ ನೀವು ಅಧಿಕಾರದಲ್ಲಿ ಇರುವುದಿಲ್ಲ. ಮತ್ತೊಬ್ಬರು ಬರುತ್ತಾರೆ. ನಾವಿದ್ದೇವೆ ಈಗ ನೀವು ಬಂದಿದ್ದೀರಿ ನಾಳೆ ಏನಾಗುತ್ತದೆಂದರೆ ಇನ್‌ಪ್ಲೂಯೆನ್ಸ್ ಮೇಲೆ ಬಂದು ಈ ಯುನಿವರ್ಸಿಟಿಗಳು ತಮಗೆ ಬೇಕಾದಂಥ ಕಾಲೇಜುಗಳಿಗೆ ಅಟಾನಮಿಸ್ ಕೊಟ್ಟು ಈ ಒಂದು ಸಿಸ್ಟಮ್‌ನ್ನು ಹಾಳು ಮಾಡುತಾರೆ. ಮತ್ತು ಸೋಷಿಯಲ್ ಜಸ್ಟೀಸ್ ಸಿಗುವುದಿಲ್ಲ. ನಾವು ಏನು ಮಾತನಾಡುತ್ತಿದ್ದೇವೆ. ಮಾತನಾಡಿಕೊಳ್ಳಬೇಕು ಅಷ್ಟೇ ಹೊರತಾಗಿ. ನ್ಯಾಯವಾಗಿ ಬಡ ವಿದ್ಯಾರ್ಥಿಗಳಿಗೆ ಮತ್ತು ಮೆರಿಟ್ ಹುಡಗರಿಗೆ ಅನ್ಯಾಯವಾಗುತ್ತದೆ ಎನ್ನುವ ಮಾತನ್ನು ತಮಗೆ ಗಮನಕ್ಕೆ ತರುತ್ತಿದ್ದೇನೆ. ಅದಕ್ಕೆ ದಯವಿಟ್ಟು ತಾವು ಬಿಲ್ಸ್ ಅನ್ನು ವಿತ್‌ಡ್ರಾ ಮಾಡಿಕೊಳ್ಳಬೇಕೆಂದು ನಾನು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಎ. ಕೃಷ್ಣಪ್ಪ; (ವರ್ತೂರು) ಮಾನ್ಯ ಅಧ್ಯಕ್ಷರೆ Syllabus, They Can Have Their Own Syllabus. ಅಂದರೆ ಫಾರಿನ್ ಯೂನಿವರ್ಸಿಟಿಗಳಿಗೆ ಮ್ಯಾಚ್

ಆಗುವಂಥ ಸಿಲಬಸ್‌ಗಳು ಏನಾದರೂ ಇವರು ಅಳವಡಿಸಿಕೊಂಡರೆ It Defeats The National Interest And The State Interest. ಹೇಗೆಂದರೆ ಈಗ ವೆಸ್ಟ್ರರ್ನ್ ಕಂಟ್ರೀಸ್‌ಗಳಲ್ಲಿ ಎಲ್ಲ ದುಬಾರಿಯಾಗಿದೆ. They want Medical Education Tourism and Education in India ಅದನ್ನು ನೋಡಿ ಹೊರರಾಷ್ಟ್ರಗಳವರು ಇಲ್ಲಿ ಬರುತ್ತಿದ್ದಾರೆ, Then, automatically the Opportunities for Our own Children with in the state of Karnataka, with in the Country, our Childen may get suiting to the latest Technology of the World Global, They may have own Sayllabus.

ಏಕೆಂದರೆ ನಾವು ಸಂಪೂರ್ಣವಾದ ಸ್ವಾಂತಂತ್ರ್ಯವನ್ನು ಅವರಿಗೆ ತಿದ್ದುಪಡಿಯಲ್ಲಿ ಕೊಡುತ್ತಿದ್ದೇವೆ. ಹಾಗಾಗಿ ನ್ಯಾಷನಲ್ ಇಂಟ್ರೆಸ್ಟ್‌ಗೆ ಬೇಕಾದಂಥ ಸಿಲಬಸ್ ಏನಿದೆ, ಅದು ಇಲ್ಲದೆ ಹೋಗಬಹುದು. ನೀವು ಕೋಶ್ಚನ್ ಮಾಡುವುದಕ್ಕಾಗುವುದಿಲ್ಲ. ಹಾಗೇಯೇ Investment in Dollars, and Pounds, ಅದನ್ನು As attraction points to unversitiles They may ultimately go against the State Interest and National Interest.

ಇಂತಹ ಒಂದು ವಿಚಾರವನ್ನು ಇದರಲ್ಲಿ ಅಳವಡಿಸಿರುವುದರಿಂದ ಈಗಾಗಲೇ ನಾವು ಎಲ್ಲೆಲ್ಲಿ ಡೀಮ್ಡ್ ಯುನಿವರ್ಸಿಟಿಗಳನ್ನು ಕೊಟ್ಟಿದ್ದೇವೆ, They have developed their own fashion their own fancy, curbing the interest of Our own children.

ಗ್ರಾಮೀಣ ಪ್ರದೇಶದಿಂದ ಬಂದಂಥ ಮಕ್ಕಳಿಗೆ ಇನ್‌ಫ್ರಾಸ್ಟ್ರಕ್ಚರ್ ದರ್ಶನವೇ ಇಲ್ಲದೆ ಇವತ್ತು 17–23 ಪರ್ಸೆಂಟ್ ಸಿಇಟಿಯಲ್ಲಿ ಈ ಪ್ರೋಫೆಷನ್‌ನಲ್ ಅವರಿಗೆ ಸೀಟ್ ಸಿಗುತ್ತಿರುವುದು. ಸಪೋಜ್ ಇದನ್ನು ಮಾಡಿಬಿಟ್ಟರೆ ಸಂಪೂರ್ಣವಾಗಿ ಅದುಲ್ಜೇರೋಆಗಿ ಬಿಡುತ್ತದೆ. ಆದ್ದರಿಂದ ಇದು ಸಣ್ಣ ಬಿಲ್ ಅಲ್ಲ. ಅದಕ್ಕೆಲ್ಲಾ ಅವಕಾಶಗಳನ್ನು ನಾವು ಕೊಡುವುದಿಲ್ಲ. still Government will have discretion Government will have all paramount powers, ಅಂಥ ಇದ್ದರೆ We request Hon'ble Ministers to spell out, what are the powers that this Government is going to enjoy ? If that is so, we can re-thinking on this ಓವರ್‌ಆಲ್ ನೀವು ಬ್ಲೇನ್ ಚೆಕ್ ಬರೆದುಕೊಟ್ಟರೆ, ಮುಂದೆ ಆಗುವಂಥ ಅನಾಹುತಗಳು ಬಹಳ ಆಗುತ್ತವೆ. Our state interest can be defeated in days to come.

ಆದ್ದರಿಂದ ಇದನ್ನು ರೀಕನ್ಸಿಡರ್ ಮಾಡಿ ಅದಕ್ಕೆ ಏನು ಎಷ್ಟು ನಿಬಂಧನೆಗಳನ್ನು ಹಾಕುತ್ತೀರಿ ಅಷ್ಟನ್ನು ನೀವು ಹೌಸ್‌ನಲ್ಲಿ Spell out ಮಾಡಿದರೆ,

Weather that is going to be point for consideration ಅಂಥ ಹೇಳಿ House can give its valuable thinking,

ಶ್ರೀ ಜೆ.ಸಿ ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) ಮಾನ್ಯ ಅಧ್ಯಕ್ಷರೆ ನಾನು ಸ್ವಲ್ಪ ಡಿಫರ್ ಆಗುತ್ತೇನೆ. This bill is just to provide Academic Autonomy.

ಇದರಲ್ಲಿ ಅಡ್ಮಿಷನ್ ಆಗಲಿ ಫೀಸ್‌ಸ್ಟ್ರಕ್ಚರ್ ಆಗಲಿ, Control of the university ಆಗಲಿ ಹೋಗುತ್ತದೆಂದಾಗಲಿ ಅವರ ಹೇಳಿಕೆ ಪ್ರಕಾರ ಆನಿಸಿಲ್ಲ. ಈ ಯುನಿವರ್ಸಿಟೀಸ್ ಇದ್ದದ್ದು ಟೆಕ್ನಿಕಲ್ ಯುನಿವರ್ಸಿಟಿ ಆಯಿತು. ಕರ್ನಾಟಕ ಯುನಿವರ್ಸಿಟಿಯಲ್ಲಿ ಪ್ರಾವಿಷನ್ ಇತ್ತು. ನೀವು ಅಟಾನಮಸ್ ಕಾಲೇಜಿಗೆ ಪರ್ಮಿಟ್ ಮಾಡಬಹುದು. ಎಂದು whereas In this part ಬೆಂಗಳೂರು ಮೈಸೂರು ಪಾರ್ಟಿನಲ್ಲಿ ಏನು ವಿಶ್ವೇಶ್ವರಯ್ಯ ಯುನಿರ್ವಟಿ ಇದೆ ಇಲ್ಲಿ ಪ್ರಾವಿಷನ್ ಇರಲಿಲ್ಲ. ಟೆಕ್ನಿಕಲ್ ಯುನಿವರ್ಸಿಟಿಯವರಿಗೆ ಅಟಾನಮಿ ಕೊಡಲಿಕ್ಕೆ ಯಾವುದಾದರೂ ಕಾಲೇಜಿಗೆ this autonomy is to give. ನೀವು ಅಕಾಡೆಮಿಕ್ ಸಿಲಬಸ್ ಕೊಡಲಿಕ್ಕೆ ಹೊಸ ಕೋರ್ಸ್ ಮಾಡಿಕೊಳ್ಳಲಿಕ್ಕೆ ಎಕ್ಸಾಮಿನೇಷನ್ ಮಾಡಿಕೊಳ್ಳಲಿಕ್ಕೆ ವ್ಯಾಲ್ಯುಯೇಷನ್ ಮಾಡಿಕೊಳ್ಳುವುದಕ್ಕೆ ಬಹುಶಃ ಸಿಮಿತವಾಗಿ ಈ ಬಿಲ್ ಇದೆ ಎಂದು ನಾನು ಭಾವಿಸುತ್ತೇನೆ. ಅದರಲ್ಲಿ ಅಡ್ಮಿಷನ್ ಆಗಲಿ ನಿಮ್ಮ ಸಿಇಟಿ ಆಗಲಿ ಅಥವಾ ಬೇರೆ ಯಾವುದರೂ ಆಗಿರಲಿ ಬಿಲ್‌ನಲ್ಲಿ ಅಡಕವಾಗಿಲ್ಲ, ಈಗ ಒಂದು ಕಾಲೇಜಿನವರು ಒಂದು ವರ್ಸ್ ಮಾಡಿಕೊಳ್ಳುತ್ತೇವೆ, ಹೊಸದಾಗಿ ಇಂಟ್ರಡ್ಯೂಸ್ ಮಾಡಿಕೊಳ್ಳತ್ತೇವೆ ಸಿಲಬಸ್ ಇಟ್ಟುಕೊಳ್ಳುತ್ತೇವೆ ನಾವು ಪರೀಕ್ಷೆ ಮಾಡಿಕೊಳ್ಳುತ್ತೇವೆ ನಾವು ನಮ್ಮದೇ ಆದ ವ್ಯಾಲ್ಯುಯೇಶನ್ ಸಿಸ್ಟಮ್ ಇಟ್ಟುಕೊಳ್ಳುತ್ತೇವೆಂದಾಗ ರಾಜ್ಯದಲ್ಲಿ ಕೆಲವು ಭಾಗದಲ್ಲಿ ಕೊಟ್ಟು ಆಗಿ ಬಿಟ್ಟರೆ ಈ ಭಾಗದಲ್ಲಿ ಕೊಡುವುದಕ್ಕೆ ಆಡಚಣೆಯಾಗುತ್ತದೆಂದು ಅವರು ಈ ಬಿಲ್‌ನಲ್ಲಿ ಹೇಳುವುದು. ಅವರ ಬಿಲ್‌ನಲ್ಲಿ ಇರುವ ಉದ್ದೇಶ. ಈ ಬಾಗದಲ್ಲಿ ಕೊಡುವುದು ವಿಶ್ವೇಶ್ವರಯ್ಯ ಯುನಿವರ್ಸಿಟಿ ಏನಿದೆ ಆ ಯುನಿವರ್ಸಿಟಿಯ ಸ್ಟ್ಯಾಟ್ಯೂಟ್‌ನಲ್ಲಿ ಪ್ರಾವಿಷನ್ ಇಲ್ಲ. ಕರ್ನಾಟಕ ಯುನಿವರ್ಸಿಟಿನಲ್ಲಿ ಪ್ರಾವಿಷನ್ ಇದೆ. They are already empowered to give Autonomy to Colleges. Wheras. ವಿಶ್ವೇಶ್ವರಯ್ಯ ಇಂಜಿನೀಯರಿಂಗ್ ಕಾಲೇಜ್ ಲಿಮಿಟಿನಲ್ಲಿ ಪ್ರಾವಿಷನ್ ಇಲ್ಲದಿರುವುದರಿಂದ ಈ ಭಾಗಕ್ಕೆ ಬೇಕು ಎಂದು.

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ; ಮಾನ್ಯ ಅಧ್ಯಕ್ಷರೆ ನನಗೆ ಒಂದು ಕ್ಲಾರಿಫಿಕೇಶನ್ ಬೇಕು. ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಕಾಲೇಜಿಗೆ, All Engineering Colleges Affiated ಕರ್ನಾಟಕ ಯುನಿವರ್ಸಿಟಿ ಎಂದು ಏನು ಈಗ ಸಪರೇಟಾಗಿ ಇಲ್ಲ.

ಯಾವಾಗ All Engineering College are affhliated to Visveswariah University, How can it be different form Karnataka University. ಎರಡನೆದಾಗಿ ಹೇಳುವುದಾದರೆ ಒಂದು ಸಾರಿ ನೀವು ಹೇಳಿದಹಾಗೆ ಅವರ ಸಿಲಬಸ್ ಅವರಿಗೆ ಬೇಕಾಗಿರುವಂತಹ ಡಿಪಾರ್ಟ್‌ಮೆಂಟ್ ಓಪನ್ ಮಾಡುವುದು, ಇವೆಲ್ಲವನ್ನೂ ಕೂಡ ನ್ಯಾಚುರಲಿ ಅದರ ಜೊತೆಯಲ್ಲಿಯೇ ರೆಕ್ರೂಟಮೆಂಟ್, ಅಡ್ಮಿಷನ್ಸ್ ಇವೆಲ್ಲವೂ ಕೂಡ ಬರುತ್ತದೆ. Anyway, you tell your opinion. I don't want to interrupt.

ಶ್ರೀ ಜಿ.ಸಿ.ಮಾಧುಸ್ವಾಮಿ; ನನ್ನ ರೀಡಿಂಗನ್ನು ನಾನು ಹೇಳುತ್ತೇನೆ. ವಿಶ್ವೇಶ್ವರಯ್ಯ ಟೆಕ್ನಿಕಲ್ ಯೂನಿವರ್ಸಿಟಿ ಆಗುವ ಹಿಂದೆ ಏನು ಯೂನಿವರ್ಸಿಟಿಗಳು ಇತ್ತು, ಅವರು ಏನು ಟೆಕ್ನಿಕಲ್ ಕೋರ್ಸುಗಳನ್ನು ಮೇಲೆ ಹಿಡಿತವನ್ನು ಇಟ್ಟುಕೊಂಡಿದ್ದರು, ಕರ್ನಾಟಕ ಯೂನಿರ್ವಸಿಟಿಯಲ್ಲಿ ಪ್ರಾವಿಜನ್ ಇತ್ತು. ಅಟಾನಮಸ್ ಕಾಲೇಜನ್ನಾಗಿ ಡಿಕ್ಲೇರ್ ಮಾಡುವುದಕ್ಕೆ ಈ ಕಡೆ ಇರುವಂತಹ ಯೂನಿರ್ವಸಿಟಿಗಳಿಗೆ ಇಲ್ಲದೆ ಹೋಗಿರುವುದರಿಂದ ಈ ಸ್ಟ್ಯಾಟುಟರಿಗೆ ಒಂದು ಅಮೆಂಡೆಮೆಂಡ್ ಬೇಕಾಗಿರುವುದನ್ನು ಬಿಟ್ಟರೆ ಬೇರೆ ಏನು ಇಲ್ಲ. ಹಾಗಾದರೆ ಈ ಭಾಗದಲ್ಲಿ ಹೊಸ ಕೋರ್ಸುಗಳನ್ನು ಮಾಡುವುದಕ್ಕೆ ಮತ್ತೊಂದು ಮಗದೊಂದಕ್ಕೆ ಆ ಕಾಲೇಜುಗಳಿಗೆ ಯೂನಿರ್ವಸಿಟಿ ಅಪ್‌ಗ್ರೇಡೆಷನ್ ಕಮಿಟಿಯವರೇ ಹೋಗಬೇಕಾಗುತ್ತದೆ. ಇವೆಲ್ಲವನ್ನು ಅವರೇ ಮಾಡಬೇಕಾಗುತ್ತದೆ. ಇದರ ಬಗ್ಗೆ ಕೋಡುತ್ತೀರಾ ಇಲ್ಲವೋ ಎಂಬ ಚರ್ಚೆಯನ್ನು ಮಾಡಬೇಕಾಗುತ್ತದೆ. ಒಂದು ಕೋರ್ಸುನ್ನು ಆರಂಭ ಮಾಡಬೇಕಾದರೆ ಸಿಲಬಸ್‌ನ್ನು ಚೆಂಜ್ ಮಾಡುವುದಕ್ಕೆ ಪರೀಕ್ಷೆ ಮಾಡುವುದಕ್ಕೆ ವ್ಯಾಲ್ಯವೇಷನ್ ಮಾಡುವುದಕ್ಕೆ ಒಂದು ಅಟಾನಮಿ ಕೇಳುತ್ತಿದ್ದಾರೆ. It is subject to the condition of the Unicersity only. University will have inherent powers over that. ಈ ಬಿಲ್‌ನಲ್ಲಿ ಎಲ್ಲಾದರೂ ಮಿಸ್ಟೇಕೆ ಅದರೆ ವಾಪಸ್ಸು ತೆಗೆದುಕೊಳ್ಳುತ್ತೇವೆಂದು ಈ ಬಿಲ್‌ನಲ್ಲಿ ಅವರು ಹೇಳಿದ್ದಾರೆ. It is guaranteed. Sate authority is guaranteed. ಬಹುಶಃ ತಪ್ಪು ಏನೂ ಆಗಲಾದರೇನೋ ಈ ಬಿಲ್ಲನ್ನು ವಾಪಸ್ಸು ಮಾಡಿದರೆ ಎಂಬುದು ನನ್ನ ಭಾವನೆ.

ಶ್ರೀ ಜಿ.ವಿ. ಶ್ರೀ ರಾಮಲಿಂಗರೆಡ್ಡಿ; (ಭಾಗೇಪಲ್ಲಿ) ಮಾನ್ಯ ಅಧ್ಯಕ್ಷರೆ ಈ ಬಿಲ್‌ಗೆ ನನ್ನ ಸಂಪೂರ್ಣವಾದಂತಹ ವಿರೋಧ ಇದೆ. ಏಕೆಂದರೆ ವಿಶ್ವಬ್ಯಾಂಕಿನ ನಿರ್ದೇಶನಗಳಿಗೆ ಅನುಗುಣವಾಗಿ ಈ ಸಿಲಬಸ್‌ನ್ನು ಅವರೇ ಸ್ವತಃ ಮಾಡಿಕೊಳ್ಳುವಂತಹ ಅವಕಾಶವನ್ನು ಕೆಲವು ಕಾಲೇಜುಗಳಿಗೆ ಸ್ವಾಯತ್ತತೆಯನ್ನು ಕೊಡುವುದು ಇದಾಗಿದೆ. ಯಾವ ಕಾಲೇಜುಗಳಿಗೆ ಇದರಲ್ಲಿ ಹೆಚ್ಚಿಗೆ ಖಾಸಗಿ ಇಂಜಿನಿಯರಿಂಗ್ ಕಾಲೇಜುಗಳವರು ಮಾಡಿಕೊಳ್ಳುವ ಬಗ್ಗೆ ಅವಕಾಶವಾಗುತ್ತದೆ. ಅದರ ಅರ್ಥವೇನೆಂದರೆ ಆಗಲೇ ಮಾನ್ಯ ಸದಸ್ಯರಾದ ಶ್ರೀ ಕೃಷ್ಣಪ್ಪನವರು ಒಂದು ವ್ಯಾಲಿಡೆ ಪಾಯಿಂಟ್‌ನ್ನು ಹೇಳಿದ್ದಾರೆ. ಯೂರೋಪಿಯನ್ ಕಂಟ್ರೀಕನಲ್ಲಿ ಅದೊಂದು ಕಂಪ್ಲೀಟ್ ಎಜುಕೇಷನ್‌ಲ್ ಕಯಾನ್ ಕ್ರೈಸಿಸ್ ಸ್ಟಾರ್ಟ್ ಆಗಿದೆ. They wanted a different system. They wanted Education which cope with their Technological Development.

ಯಾವುದು ಯೂರೋಪಿಯನ್ ಟೆಕ್ನಾಲಜಿಕಲ್ ಡೆವಲಪ್‌ಮೆಂಟ್‌ಗೆ ಕೋಪ್ ಆಪ್ ಆಗುವಂತಹ ಎಜ್ಯುಕೇಷನ್ ಬೇಕು. But, European Countries and other Countries are not in a position to provide that Education in their Country. it is a costly affair.

ಇಲ್ಲಿ ಆದರೆ ಅವರಿಗೆ ಚೀಪ್ ಆಗಿ ವರ್ಕ್ ಔಟ್ ಆಗುತ್ತದೆ. ಹಾಗಾಗಿ ಅವರಿಗೆ ಬೇಕಾಗಿರುವಂತಹ ಸಿಲಬಸ್‌ನ್ನು ಅಮೆಂಡ್‌ಮೆಂಟ್ ಮಾಡಿಕೊಂಡು ಅಲ್ಲಿ ಪೂರ್ತಿ ನಮ್ಮದೇಶದ ಹಿತಾಸಕ್ತಿಗಳಿಗೆ ಪೂರಕ ಅಲ್ಲದೆ ಇರುವಂತಹ ಸಿಲಬಸ್‌ನ್ನು ತೆಗೆದುಕೊಂಡು ಬಂದು ನಾಳೆ ಇದರಲ್ಲಿಟ್ಟು ಅವರು ಓದಿಕೊಂಡು ಅವರ ದೇಶಕ್ಕೆ ಹೋಗುತ್ತಾರೆ. ನಮ್ಮದೇಶಕ್ಕೆ ಏನು ಪ್ರಯೋಜನವಾಗುತ್ತಿಲ್ಲ. ಫೀಸ್ ಮಾತ್ರ ಕಾಲೇಜಿಗೆ ಬರುತ್ತದೆ. ಪ್ರೆವೆಂಟ್ ಕಾಲೇಜುಗಳಿಗೆ ಹಣ ಬರುತ್ತದೆ. ಅವರು ಓದಿಕೊಂಡು ಅವರ ದೇಶಕ್ಕೆ ಹೋಗುತ್ತಾರೆ. ಆ Techonological innovation, Technological Brain

ಆ ಹ್ಯೂಮನ್ ರಿಸೋರ್ಸ್‌ನಿಂದ ನಮಗೆ ಉಪಯೋಗವಾಗುವುದಿಲ್ಲ. ಹಾಗಾಗಿ ಇದು ವಿಶ್ವಬ್ಯಾಂಕಿನ ಇಂಟ್ರಸ್ಟ್‌ಗೆ ಅನುಗುಣವಾಗಿ ಮಾಡುತ್ತಿರುವಂತಹ ತಿದ್ದುಪಡಿಯೇ ಹೊರತು ನಮ್ಮ ದೇಶದ ಹಿತಾಸಕ್ತಿಗೆ ಅನುಗುಣವಾಗಿ ಮಾಡುತ್ತಿರುವಂತಹ ತಿದ್ದುಪಡಿ ಅಲ್ಲ, ಇದರಲ್ಲಿ ನ್ಯಾಷನಲ್ ಇಂಟ್ರೇಸ್ಟ್‌ನ ಪ್ರಶ್ನೆ ಇಲ್ಲ. ಇಲ್ಲಿರುವಂತಹದ್ದು ಬಿಸಿನೆಸ್ ಇಂಟರೆಸ್ಟ್ ಅಷ್ಟೇ. It is only a business interst. Not anything else. ಇದರ ಕಮರ್ಷಿಯಲ್ ಆಂಗಲ್ ಸಿಲಬಸ್ ಇಂಟರೆಸ್ಟ್ ಇಂತಹ ಒಂದು ಬಿಲ್ಲನ್ನು ಖಂಡಿತವಾಗಿಯೂ ನಾನು ಒಪ್ಪಿಕೊಳ್ಳುವುದಕ್ಕೆ ತಯಾರಿಲ್ಲ. ಯೂನಿವರ್ಸಿಟಿ ಕಂಟ್ರೋಲ್‌ನಲ್ಲಿ ಇರುತ್ತದೆಂದು

ಹೇಳುತ್ತಿದ್ದಾರೆ ಯೂನಿರ್ವಸಿಟಿ ಕಂಟ್ರೋಲ್‌ನಲ್ಲಿ ಏನಿರುತ್ತದೆ? ಸಿಲಬಸ್‌ನ್ನು ಮಾಡಿಕೊಳ್ಳಬಹುದು ಎಂದು ಆವರಿಗೆ ಪರ್ಮಿಶನ್ ಕೊಟ್ಟು ಮತ್ತೇ ನೀವು ಏನು ಕಂಟ್ರೋಲ್‌ನಲ್ಲಿ ಇಡುತ್ತೀರಿ. ಅದನ್ನು ಯಾವ ರೀತಿಯಾಗಿ ಹಿಂದಕ್ಕೆ ಪಡೆಯುತ್ತಿರಿ. ಅವರಿಗೆ ಅಟಾನಮಾಸ್ ಎಂದು ಬಿಲ್‌ನ್ನು ಅಮೆಂಡಮೆಂಟ್ ಮಾಡಿ ಅವರಿಗೆ ಅಧಿಕಾರವನ್ನು ಕೊಟ್ಟು ಮತ್ತೆ Will your University have any Authority to take back That Syllabus?

ಹೇಗೆ ಯೂನಿವರ್ಸಿಟಿ ವಾಪಸ್ಸು ತೆಗೆದುಕೊಳ್ಳುತ್ತದೆ? ಅದು ಹೇಗೆ ಸಾಧ್ಯವಾಗುತ್ತದೆ? ಇದು ದುರ್ದೈವ. ಶಂಕರಮೂರ್ತಿಯವರಂತಹ ಸದ್ವೇಶಿಯರು, ದೇಶಭಕ್ತರು ಈ ಬಿಲ್ಲನ್ನು ತರುತ್ತಾರೆಂದು ನಾನು ನೀರಿಕ್ಷೇ ಮಾಡಿರಲಿಲ್ಲ. That is why, I oppose this Bill.

ಶ್ರೀ ಎಸ್. ರಾಜೇಂದ್ರನ್; ಸನ್ಮಾನ್ಯ ಅಧ್ಯಕ್ಷರೆ, ಈಗ ಏನು ಅಟಾನಮಸ್ ಕೊಡಬೇಕೆಂದು ಬಿಲನ್ನು ತಂದಿದ್ದಾರೋ You have to see as to what is the meaning of autonomous? ಅಟಾನಮಸ್ ಎಂದರೆ Only the Education part only in the subject part. They want to give improvement to the Students. That is called autonomous .

ಅಟಾನಮಸ್‌ಗೂ ಕೂಡ ಸ್ವಲ್ಪ ರೂಲ್ಸ್ ಇದೆ. ಯೂನಿವರ್ಸಿಟಿ ಫಾಲೋ ಮಾಡಬೇಕು ಅಂತ ಈಗ ಸಬ್‌ಜಕ್ಟ್ ಇಂಪ್ರೂವ್ ಮಾಡಬೇಕಾದರೆ ಟೆಕ್ನಿಕಲ್ ಮಾಡ್ರನ್ ಟೆಕ್ನಾಲಜಿಯಲ್ಲಿ ಇಂಟ್ರಡ್ಯೂಸ್ ಮಾಡಬೇಕಾದರೆ It should be a loyal College Which given more Education in that. ಅಟಾನಮಸ್ ಅರ್ಟ್ಸ್ ಸೆಕ್ಷನ್‌ನಲ್ಲಿದೆ. ಸೈನ್ಸ್‌ನಲ್ಲಿದೆ. ಕಾಮರ್ಸ್‌ನಲ್ಲಿ ಇದೆ, ಹಾಗಾದರೆ ಅಟಮಾನಸ್ ಕೊಟ್ಟ ತಕ್ಷಣ ಫಾರೀಸ್ ಎಕಾನಮಿ ತೆಗೆದುಕೊಂಡು ಬಂದು ಕೊಡುವುದಿಲ್ಲ. Staus Of The Education, Standard Of The Education ನೋಡಬೇಕು. ಆದ್ದರಿಂದ ಇದು ವರ್ಲ್ಡ್ ಬ್ಯಾಂಕ್‌ನವರು ಮಾಡುತ್ತಾರೆ. ದುಡ್ಡು ಅವರು ಕೊಡುತ್ತಾರಲ್ಲವಾ? ಅದಕ್ಕೋಸ್ಕರ Rules and Guidenes ಅಟಾನಮಸ್ ಕಾಲೇಜಿಗೆ ಇಂಥವರಿಗೆ ಕೊಡಬೇಕೆಂದು ಇದೆ. ಅದಕ್ಕೂ ಕೂಡ ಒಂದು ರೂಲ್ ಇದೆ ಆದ್ದರಿಂದ ಈಗ ನಮಗೆ ಮಾಡ್ರನ್ ಟೆಕ್ನಾಲಜಿ ಬೇಕು. ನಾವು ಯಾವಾಗ ಭಾಷಣ ಮಾಡುವಂತಹ ಟೈಮ್‌ನಲ್ಲಿ ಏನು ಹೇಳುತ್ತೀರಿ, ಜಪಾನ್ ನೋಡಿ ಚೈನಾ ಟೆಕ್ನಾಲಜಿ ನೋಡಿ. ರಷ್ಯಾ ಟೆಕ್ನಾಲಜಿ ನೋಡಿ. ಎಂದು ಮಾತನಾಡುತ್ತೇವೆ. ಆ ಟೆಕ್ನಾಲಜಿಯನ್ನು ನಮ್ಮ ಹುಡುಗರು ಕೂಡ ಓದಲಿ. ಅವರು ರಷ್ಯಾಕ್ಕೂ ಹೋಗಲಿ. ಮತ್ತು ಇಂಡಿಯಾಕ್ಕೂ ಕೂಡ ಬರಲಿ. Give That standard to the Institution. It is standard to the Institution.

ನಾವು ಎಲ್ಲಿ ಹೋಗಿ ಟೆಕ್ನಾಕಲ್‌ನ್ನು ನೋಡಿಕೊಂಡು ಬರುತ್ತೇವೆ, ನಾವು ಡೆಲ್ಲಿಗೆ ಹೋಗುತ್ತೇವೆಯಾ? ಚೈನಾ ದೇಶಕ್ಕೆ ಹೋಗಿದ್ದೇವೆ ಎಂದು ಹೇಳುತ್ತೇವೆ. ಏತಕ್ಕೆ ಹೋಗುತ್ತೀರಿ. ಫಾರೀನ್ ದೇಶಕ್ಕೆ ಹೋಗಿ ನಾವು ಈ ಟೆಕ್ನಾಲಜಿಯನ್ನು ನೋಡಿಕೊಂಡು ಬಂದಿದ್ದೇವೆ. Let our Students study that Education. You introduce the subject and make certain rules, Regulations and Conditions.

ಒಂದು ಅಟಾನಮಸ್‌ನಲ್ಲಿ certain marks ಪ್ರೇಸಿಕ್ರೈಟ್ ಮಾಡುತ್ತಾರೆ 80 ಮಾರ್ಕ್ಸನ್ನು ತೆಗೆದುಕೊಂಡಿದ್ದರೆ ನಾವು ತೆಗೆದುಕೊಳ್ಳುತ್ತೇವೆ ಅಂತ. ಅಂತಹ ಸಂದರ್ಭದಲ್ಲಿ ಬಡವರು ಎಲ್ಲಿಗೆ ಹೋಗುತ್ತಾರೆ? ಅವರಿಗೂ ಸಹ ನೀವು ಕೊಡಲೇಬೇಕು. Even Village people also should study that. Even Schedule Caste and Schedule Tribe people also should study that.

ಅಲ್ಲಿ ಬರೀ ಊಟಿ ಕಾನ್ವೆಂಟ್‌ನಲ್ಲಿ ಓದಿರುವವನು 90 ಮಾರ್ಕ್ಸನ್ನು ತೆಗೆದುಕೊಂಡಿರುವವನಿಗೆ ಮಾತ್ರ ಅಟಾನಮಸ್ ಕಾಲೇಜಿನಲ್ಲಿ ಇರಬಾರದು, Some Autonomous Colleges Are Misusing Their Power. That Should Be Curbed.

ಅಟಾನಮಸ್ ಕೇಳುವವರು ಯಾರು ಇಲ್ಲ? ಅವರು ಹೇಳುತ್ತಾರೆ. ನಮ್ಮ ಗೈಡ್‌ಲೈನ್ ಪ್ರಕಾರ ಮಾರ್ಕ್ ತೆಗೆದುಕೊಂಡು ಬಂದಿರುವರಿಗೆ ಮಾತ್ರ ನಾವು ಸೀಟನ್ನು ಕೊಡುತೆವ್ತೆಂದರೆ 60 ಮಾರ್ಕ್ಸ್ ತೆಗೆದುಕೊಂಡಿರುವವನ ಗತಿ ಏನಾಗಬೇಕು? ಅವನಿಗೆ ಕಾರ್ಪೋರೇಷನ್ ಕಾಲೇಜಿಗೆ ಹೋಗು ಎಂದು ಹೇಳುತ್ತೀರಾ should not ಅದನ್ನು ತಾವು ಮಂತ್ರಿಯಾಗಿರುವವರು ನೀವು ಯಾವಾಗಲೂ ನೋಡುವುಕ್ಕಾಗುವುದಿಲ್ಲ. ನಿಮ್ಮ ಬ್ಯೂರೋಕಾಟ್ಸ್‌ಗಳು ಏನು ಮಾಡುತ್ತಾರೆ. Because Autonomous Management Are Superior By Commercial. They Will Purchase Your Officers. Accordingly they their Version Only . They Will Never Speak form Of SCS And STS.

ಹಾಗೆಯೇ ಐಎಎಸ್ ಸ್ಟ್ಯಾಂಡರ್‌ನಲ್ಲಿ ಐಸ್‌ಪಿಎಸ್ ಸ್ಟ್ಯಾಂಡರ್ಡ್‌ನಲ್ಲಿ ಕುಳಿತು ಕೊಂಡಿರುವವರು ಎ.ಸಿ. ರೂಮಿನಲ್ಲಿ ಈ ತರಹ ಸ್ಟ್ಯಾಂಡರ್ಡ್ ಅನ್ನು ನೋಡುತ್ತಾರೆ. ಬಡವರು ಸ್ಟ್ಯಾಂಡರ್ಡ ನೋಡುವುದಿಲ್ಲ. ಮಾತಿನಲ್ಲಿ ಬಹಳ ಚೆನ್ನಾಗಿ ಮಾತನಾಡುತ್ತಾರೆ. ನಾವು ಬಡವರ ಬಗ್ಗೆ ಎಂದು ಹೇಳುತ್ತಾರೆ. ಸ್ಟ್ಯಾಂಡರ್ಡ್ ಗೈಡಲೈನ್ಸ್‌ನ್ನು ಮಾಡುವವರು ಅವರು? ಅದನ್ನು ಮಾನಿಟರ್ ಮಾಡುವುದಕ್ಕೆ ತಮಗೆ ಕೆಪಾಸಿಟಿ ಇದ್ದರೆ You introduce this bill.

ಶ್ರೀ ಜಯಪ್ರಕಾಶ್ ಹೆಗ್ಡೆ ; (ಬ್ರಹ್ಮಾವರ) ಮಾನ್ಯ ಅಧ್ಯಕ್ಷರೆ ಈಗ ಅಟಾನಮಿ ಕೆಲವೊಂದು ಡೀಮ್ ಯೂನಿರ್ವಸಿಟಿಗೆ ಕೊಟ್ಟ ಆಗಿದೆ. ಈಗ

ಕೇವಲ ಅಕಾಡಮಿಕ್ ಅಟಾನಮಿ ಅಂತ ಹೇಳುತ್ತಾರೆ. This is the first time. ಅಕಾಡೆಮಿಕ್ ಅಟನಮಾಸ್ ಕೊಡುವುದು ಫಸ್ಟ್, ನಂತರ ಡೀಮ್ಡ್ ಯೂನಿವರ್ಸಿಟಿ ನೆಕ್ಸಟ್ ಸ್ಟೇಜ್ ಇದನ್ನು ಮಾಡುವುದನ್ನು ನೋಡಿದಾಗ ವರ್ಲ್ಡ್‌ಬ್ಯಾಂಕ್‌ನವರು ಗೈಡ್‌ಲೈನ್ ಎಂದು ಹೇಳಿದರೆ ಅಲ್ಟಮೇಟ್ಲಿ ಲಿಬರೈಜೇಷನ್‌ಗೆ ಬರುತ್ತದೆ. ನಂತರ. What is the nest stage ಅಂತ ಆಲೋಚನೆಯನ್ನು ಮಾಡಿದಾಗ ಇವತ್ತು ಅಟನಮಿಯನ್ನು ಕೊಡಿ ಅಂದರೆ ನಾಳೆ Have we reached that stage? ಯೂರೋಪಿಯನ್ ಕಂಟ್ರೀಸ್ ಬಗ್ಗೆ ಚರ್ಚೆಯನ್ನು ಮಾಡಿದೆವು. ಅಮೇರಿಕಾದಲ್ಲಿ ಇಂಗ್ಲೇಂಡ್‌ನಲ್ಲಿ ಯಾರ್‍ಯಾರ ಹತ್ತಿರ ಸಂಸ್ಥೆಗಳು ಇವೆ. ಅವೆಲ್ಲವನ್ನು ಲೆಕ್ಕ ಹಾಕಬೇಕಾಗುತ್ತದೆ. ಅಲ್ಲಿ ಏನಾಗುತ್ತದೆ?

ಅವರೇ ಒಂದು ಸಿಲಬಸ್‌ನ್ನು ಮಾಡುವುದು ಅವರೇ ಎಕ್ಸಾಮಿನೇಷನ್ ಕಂಡಕ್ಟ್ ಮಾಡುವುದು. ಅಲ್ಲವೇ? ಹೌದು this is what it is ಇದನ್ನು ಅಲೋಚನೆ ಮಾಡಿದಾಗ ಇದರ ಬಗ್ಗೆ ತಾವು ಎಕ್ಸ್‌ಪ್ಲೇಸ್‌ನ್ನು ಮಾಡಿ. I just want Clarification From the Government. ಏಕೆಂದರೆ ನನಗೆ ಅನುಮಾನಗಳಿವೆ. ನಂತರ ನೆಕ್ಸ್ಟ್ ನಮ್ಮ ಮಕ್ಕಳಿಗೆ ಅಲ್ಲಿ ಸೀಟು ಸಿಗುತ್ತದೆಯೇ? ನೆಕ್ಸ್ಟ್‌ಸ್ಟೇಜ್‌ನಲ್ಲಿ ರಿಸರ್ವೇಶನ್ ಪಾಲಿಸಿ ಈ ಇನ್‌ಸ್ಟಿಟ್ಯೂಟ್‌ಗೆ ಅಪ್ಲೈ ಆಗುತ್ತದೆಯೇ? ಅದು ಬರುವುದಿಲ್ಲ. ಇವೆಲ್ಲದರ ಬಗ್ಗೆ ಸರ್ಕಾರ ಹೇಳಬೇಕಾಗುತ್ತದೆ. ಅದೆಲ್ಲಾ ಹಿಂಡ್ರೆನ್ಸ್ ಇದ್ದರೆ ಖಂಡಿತವಾಗಿಯೂ ಇದನ್ನು ಒಪ್ಪಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ದಯವಿಟ್ಟು ಇದರ ಬಗ್ಗೆ ತಾವು ಮಾಹಿತಿಯನ್ನು ಕೊಡಬೇಕು.

ಶ್ರೀ ದಿನೇಶ್‌ಗುಂಡೂರಾವ್ (ಗಾಂಧಿನಗರ) ಮಾನ್ಯ ಅಧ್ಯಕ್ಷರೆ ಈ ಬಿಲ್ಲನ್ನು ತಂದಿರುವ ಬಗ್ಗೆ ನೋಡಿದಾಗ ಒಂದು ವಿಚಾರದ ಬಗ್ಗೆ ಈಗಾಗಲೇ ಹೇಳಿರುವಂಥದ್ದು. ಅಟಾನಮಿ ಕೊಡುವುದರಿಂದ ಏನಾದರೂ ನಮ್ಮ ರಾಜ್ಯದ ಮಕ್ಕಳಿಗೆ ರಿಸರ್ವೆಷನ್ಸ್‌ನಲ್ಲಿ ಅಡ್ಮಿಷನ್ಸ್‌ನಲ್ಲಿ ತೊಂದರೆಯಾಗುತ್ತದೆಯೇ ಅಂತ/ ಅದನ್ನು ಸಚಿವರೆ ಉತ್ತರದಲ್ಲಿ ಕೊಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಅದಕ್ಕಿಂತಲ್ಲೂ ಹೆಚ್ಚಾಗಿ ಮಾನ್ಯ ಅಧ್ಯಕ್ಷರೆ ಇವತ್ತು ಬಿಲ್ಲನ್ನು ಅಟಾನಮಿ ಕೊಡಬೇಕೆಂಬ ಉದ್ದೇಶದಿಂದ ತಂದಿದ್ದೀರಿ ಒಂದು ರೀತಿಯಲ್ಲಿ ಚರ್ಚೆಯನ್ನು ನಾವು ಮಾಡಬಹುದು. ಆದರೆ ಇಲ್ಲಿ ವಿಶ್ವಬ್ಯಾಂಕ್ ಒಂದು ಇನ್‌ಸಿಸ್ಟ್ ಮಾಡುತ್ತಾರೆಂದು ಹೇಳುತ್ತಿರುವಂತಹ ಮಾತನ್ನು ನೋಡಿದಾಗ ಯಾವ ಕಾರಣಕ್ಕೋಸ್ಕರ ವಿಶ್ವಬ್ಯಾಂಕ್ ಈ ಒಂದು ಅಟಾನಮಿ ಕೊಡಬೇಕೆಂದು

ಇನ್‌ಸಿಸ್ಟ್ ಮಾಡುತ್ತಿದ್ದಾರೆ? ಅವರ ಉದ್ದೇಶ ಏನಿದೆ? ಇದರಲ್ಲಿ What are the reasons for the World Bank saying that they should give the Autonomy to the Educational instituons ?

ಯಾವ ಕಾರಣಕ್ಕೋಸ್ಕರ ಎಂದು ವಿಶ್ವಬ್ಯಾಂಕ್ ಈ ಒತ್ತಡವನ್ನು ತರುತ್ತಿದೆ? ಆ ಒತ್ತಡದಿಂದ ತಾವೇನಾದರೂ ಈ ಬಿಲ್ಲನ್ನು ತರುತ್ತಿದ್ದಿರಾ? ಅದರ ಬೇರೆ ಕಾರಣಗಳು ಇದ್ದರೆ ಅದೊಂದನ್ನು ಹೇಳಬೇಕು.

ಈಗಾಗಲೇ ಮಾನ್ಯ ಸಚಿವರೇ ವಿಶ್ವಬ್ಯಾಂಕ್ ನಮ್ಮ ರಾಜ್ಯದಲ್ಲಿ ಇಂತಹ ಶಿಕ್ಷಣ ಸಂಸ್ಥೆಗಳಿಗೆ ಸಹಾಯ ಮಾಡಬೇಕೆಂದು ನಿರ್ಣಯ ಮಾಡಿದ್ದಾರೆಯೇ? ಅಂತಹ ಸಂಸ್ಥೆಗಳ ಹೆಸರು ನಿಮ್ಮ ಹತ್ತಿರವಿದೆಯೇ? ಅಂತಹ ಸಂಸ್ಥೇಗಳಾವುವು? ಅಥವಾ ಇನ್ನೂ ಮಾಡಬೇಕಾಗಿದೆಯೇ? ಏಕೆಂದರೆ ನನಗೆ ಬಂದಿರಕ್ಕಂಥ ಮಾಹಿತಿ ಪ್ರಕಾರ ಈಗಾಗಲೇ ಯಾರ್‍ಯಾರಿಗೆ ಕೊಡಬೇಕೆಂದು ಸಹ ನಿರ್ಣಯವಾಗಿದೆ. ಅದರ ಬಗ್ಗೆ ಒಪ್ಪಂದವಾಗಿರುವುದು. ಕೂಡ ಬಗ್ಗೆ ಮಾಹಿತಿ ಬಂದಿದೆ. ಆದ್ದರಿಂದ ಈ ಸಂಸ್ಥೆಗಳು ಖಾಸಗಿ ಸಂಸ್ಥೆಗಳೇ ಅಥವಾ ಸರ್ಕಾರಿ ಸಂಸ್ಥೆಗಳೇ? ಸರ್ಕಾರಿ ಸಂಸ್ಥೆಗಳನ್ನು ಅಟಾನಮಿ ಮಾಡಿದರೆ ಅಥಾವ ಡೀಮ್ಡ್ ಯುನಿವರ್ಸಿಟಿ ಮಾಡಿದರೆ ಅದನ್ನು ನಾವು ಒಪ್ಪಿಕೊಳ್ಳಬಹುದು ಅಥವಾ ಈ ಒಂದು ಅನುದಾನ ಕೇವಲ ಖಾಸಗಿ ಸಂಸ್ಥೆಗಳಿಗೆ ಬರುತ್ತಿದೆಯೇ? ಅದರ ಮೂಲಕ ಅವರು ಅಟಾನಮಿ ಮಾಡಿಕೊಳ್ಳಲಿಕ್ಕೆ ಪ್ರಯತ್ನವನ್ನು ಮಾಡುತ್ತೀದ್ದಾರೆಯೇ? ಇದರ ಬಗ್ಗೆ ಕೂಡ ಮಾನ್ಯ ಅಧ್ಯಕ್ಷರೇ ಸಚಿವರು ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಏಕೆಂದರೆ ಇದರಿಂದ ಅನೇಕ ವಿಚಾರಗಳಲ್ಲಿ ಮುಂದೆ ಏನೇನು ಆಗಬಹುದೆಂದು ಹಲವರು ಹೇಳಿದರು. ಅದರ ಬಗ್ಗೆ ಮತ್ತೆ ನಾನು ಪ್ರಸ್ತಾಪ ಮಾಡಲಿಕ್ಕೆ ಹೋಗುವುದಿಲ್ಲ. ಆದರೆ ಇದನ್ನು ಮಾತ್ರ ದಯವಿಟ್ಟು ತಮ್ಮ ಉತ್ತರದಲ್ಲಿ ಹೇಳಬೇಕೆಂದು ನಿರೀಕ್ಷೆ ಮಾಡುತ್ತಿದ್ದೇನೆ.

ಶ್ರೀ ಕೆ.ಶ್ರೀನಿವಾಸಗೌಡ (ಕೋಲಾರ) ಮಾನ್ಯ ಅಧ್ಯಕರೆ ವಿಶ್ವ ಬ್ಯಾಂಕ್ ಯೋಜನೆಗಳು ಈ ಡೆವಲಪ್ಡ್ ಕಂಟ್ರೀಸ್‌ಗೆ ಈಗಾಗಲೇ ನಮ್ಮ ದೇಶದ ವ್ಯವಸಾಯದ ಮೇಲೆಯೂ ಕೂಡ ಡಬ್ಲ್ಯೂಟಿ.ಓ ತಂದಿದ್ದಾರೆ. ಈಗ ಅವರ ಪ್ರೆಷರ್ ಎಜುಕೇಷನ್ ಮೇಲೆ ಕೂಡ. ಈ ಟ್ರೇಡ್ ಅರ್ಗನೈಸೇಷನ್ ತರಬೇಕೆನ್ನುವ ಚಿಂತನೆ ಇದ್ದ ಹಾಗೆ ಇದೆ. ಇದರ ಬಗ್ಗೆ ಖರ್ಗೆಯವರು ಹೇಳಿದ್ದನ್ನು ನಾನು ಒಪ್ಪುತ್ತೇನೆ. ಇದೆ ವಿಷಯದಲ್ಲಿ ಎರಡು ವರ್ಷಗಳ ಹಿಂದೆ ಜಾಖಂಡ್ ಸರ್ಕಾರದ ಡೀಮ್ಡ್ ಯುನಿರ್ವರ್ಸಿಟಿ ಎಂದು ಸುಮಾರು ನೂರಾರು ಕಾಲೇಜುಗಳನ್ನು ಮಾಡಿದರು. ಸುಪ್ರೀಂಕೋರ್ಟ್ ಅದಕ್ಕೆ ಛೀಮಾರಿ ಹಾಕಿದೆ. ಅದನು ಮಾನ್ಯ ಸಚಿವರು ತರಿಸಿಕೊಂಡು ನೋಡಿ. ಏಕೆಂದರೆ ಅದರಿಂದ

ಮುಖ್ಯಮಂತ್ರಿಗಳೇ ತಮ್ಮ ಸ್ಥಾನವನ್ನು ಕಳೆದುಕೊಳ್ಳುವಂಥ ಪರಿಸ್ಥಿತಿಗೆ ಹೋಗಿತ್ತು. ಹಾಗಾಗಿ ಸುಪ್ರಿಂಕೋರ್ಟ್‌ನವರು ಛೀಮಾರಿ ಹಾಕಿದ ನಂತರ ಸರ್ಕಾರ ಅದನ್ನು ವಿತ್‌ಡ್ರಾ ಮಾಡಿಕೊಂಡಿತು. ಅದು ಎರಡು ವರ್ಷಗಳ ಹಿಂದೆ ಆಗಿರುವುದರಿಂದ ಈ ಡೀಮ್ಡ್ ಯುನಿವರ್ಸಿಟಿ ಉದ್ದೇಶ ಇವತ್ತು ನಾಳೆ ಎಲ್ಲಾ ಸ್ವಾತಂತ್ರವನ್ನು ಅವರಿಗೆ ಕೊಟ್ಟು ಸರ್ಕಾರ ಕೈಕಟ್ಟಿ ಕುಳಿತ್ತಿರಬೇಕು. ಅಥವಾ ಕೇರಳದಲ್ಲಿ ಇದ್ದ ಹಾಗೆ 100% ಎಜುಕೇಷನ್ ನಮ್ಮಲ್ಲಿ ಇಲ್ಲ. ಇನ್ನು 68 – 69% ನಮ್ಮ ರಾಜ್ಯವಿದೆ. ಇಂಥ ಸಮಯದಲ್ಲಿ ಡೀಮ್ಡ್ ಯುನಿರ್ವರ್ಸಿಟಿ ಕೊಟ್ಟು ಅವರಿಗೆ ಎಲ್ಲಾ ಸ್ವಾಯತ್ತತೆಯನ್ನು ಕೊಡುವುದರಿಂದ ನಮಗೆ ಬಡ ನಾಡಿನ ಬಡ ಮಕ್ಕಳಿಗೆ ನಾವೇನಾದರೂ ನ್ಯಾಯವನ್ನು ಒದಗಿಸಲಿಕ್ಕಾಗಿದೆಯೇ? ಇವು ಬಹಳ ಮುಖ್ಯವಾದಂತಹ ವಿಷಯಗಳು. ಹಾಗಾಗಿ ಆ ಜಾರ್ಖಡ್ ಸರ್ಕಾರದ ಮೇಲೆ ಸುಪ್ರಿಂಕೋರ್ಟ್ ಏನು ಛೀಮಾರಿ ಹಾಕಿದೆ ಅದೇ ವಿಷಯ ನಮ್ಮ ಸರ್ಕಾರದ ಮೇಲೂ ಸಹ ಬರಬಾರದು ಎಂಬ ಉದ್ದೇದಿಂದ ನಾನು ಅದನ್ನು ತರಿಸಿ ನೋಡಿದ್ದೇನೆ. ಅದ್ದರಿಂದ ಈ ಬಿಲ್ಲನ್ನು ಇವತ್ತೇ ಮಾಡಿಬಿಟ್ಟರೆ ಏನು ಆಗುವುದಿಲ್ಲ. ಅವೆಲ್ಲಾ ನೋಡಿದ ನಂತರ ಮತ್ತೆ ಅದನ್ನು ತಂದರೆ ಅದರ ಬಗ್ಗೆ ಬಗ್ಗೆ ಚರ್ಚೆ ಮಾಡಿದರೆ ಸರಿಹೋಗಬಹುದು. ಎಂಬುದು ನನ್ನ ಭಾವನೆ. ಏಕೆಂದರೆ ಈಗಾಗಲೇ ವರ್ಲ್ಡ್ ಟ್ರೇಡ್ ಆರ್ಗನೈಸೇಷನ್‌ನಲ್ಲಿ ವ್ಯವಸಾಯಗಾರರಾದ ನಾವು ಸತ್ತಿದ್ದೇವೆ. ಇನ್ನೂ ಎಜುಕೇಷನ್ ಟ್ರೇಡ್‌ಗೆ ಆರ್ಗನೈಸೇಷನ್ ಬಂದರೆ ಮುಂದಿನ ದಿನಗಳಲ್ಲಿ ಕಷ್ಟವಾಗುತ್ತದೆ ಎನ್ನುವುದನ್ನು ಸರ್ಕಾರ ಮನದಟ್ಟು ಮಾಡಿಕೊಳ್ಳಬೇಕೆಂದು ನಾನು ತಮ್ಮ ಮೂಲಕ ಹೇಳಬಯಸುತ್ತೇನೆ.

ಅಧ್ಯಕ್ಷರು; ಮಾನ್ಯ; ಎಂ. ಬಿ, ಪಾಟೀಲ್ ಮಾತನಾಡಿ.

ಶ್ರೀ ಎಂ.ಬಿ. ಪಾಟೀಲ್ (ತಿಕೋಟಾ) ಒಂದು ಸಂಸ್ಥೆಯು ಡೀಮ್ಡ್ ಯುನಿವರ್ಸಿಟಿಗೆ ಸೇರಬೇಕಾಗಿದೆ. ಎಂದು ಸರ್ಕಾರದ ನಿರ್ಣಯ ತೆಗೆದುಕೊಂಡಿವೆ. ಆದರೆ ಇವತ್ತಿನ ಈ ಒಂದು T.M.A.Pai. ಆದ ಮೇಲೆ ಮತ್ತು ಸುಪ್ರೀಂಕೋರ್ಟಿನ ಜಡ್ಜ್‌ಮೆಂಟಿನ ಮೇಲೆ ಮತ್ತು ಅನೇಕ ಹೈಕೋರ್ಟ್‌ನ ಜಡ್ಜಮೆಂಟ್ಸ್ ಮೇಲೆ ಇವತ್ತಿನ ದಿವಸ ಈ ಡೀಮ್ಡ್ ಯುನಿವರ್ಸಿಟಿ ಏನಿವೆ ಅವಕ್ಕೆ ಸ್ಟೇಟ್ ಗವರ್ನಮೆಂಟ್‌ನ ಒಪೀನಿಯನ್ ಮಾತ್ರ ಇನ್‌ಸಿಸ್ಟ್ ಮಾಡುತ್ತಾರೆಯೇ ಹೊರತು ಎನ್.ಓ.ಸಿ. ಯನ್ನು ಕೂಡ ಒತ್ತಾಯ ಮಾಡುವಂತಹ ಪರಿಸ್ಥಿತಿ ಅವತ್ತು ಇರಲಿಲ್ಲ. ಇವತ್ತು ಡೀಮ್ಡ್ ಯುನಿವರ್ಸಿಟಿಯೆಂದರೆ ಇವತ್ತಿನ ದಿವಸ Recent judgements, T.M.A.Pai ಇರಬಹುದು ಅಥವಾ ನಮ್ಮ ಇಸ್ಲಾಮಿಕ್ ಜಡ್ಜಮೆಂಟ್ ಇರಬಹುದು,

ತದನಂತರ ಇನಾಂದಾರ್ ಜಡ್ಜಮೆಂಟಿನಲ್ಲಿ ನಮ್ಮ ಖರ್ಗೆ ಸಾಹೇಬರು ಕೆಲವೊಂದು fears ರಿಸರ್ವೇಷನ್ ಬಗ್ಗೆ ಎಕ್ಸ್‌ಪ್ರೆಸ್ ಮಾಡಿದರು. ಡೀಮ್ಡ್ ಟುಬಿ ಯುನಿವರ್ಸಿಟಿಗಳು ಸಹ ರಿಸರ್ವೇಷನ್ ಕಂಟ್ರೋಲ್‌ನ ಕೆಳಗಡೆ ಬರುತ್ತವೆ. ಒಂದೇ ಡೀಮ್ಡ್ ಯುನಿವರ್ಸಿಟಿ ಮತ್ತು ಅಟನಾಮಸ್ ಕಾಲೇಜಿನ ಬಗ್ಗೆ ಹೇಳಬೇಕೆಂದರೆ ಅನೇಕ ಡಿಗ್ರಿ ಕಾಲೇಜುಗಳು ಬೆಂಗಳೂರು ಮತ್ತು ಇನ್ನಿತರ ಕಡೆ ಅನೇಕ ಏಡೆಡ್ ಕಾಲೇಜುಗಳಿಗೆ ಅಟನಾಮಸ್ ಸ್ಟೇಟಸ್ ಅನ್ನು ಕೊಟ್ಟಿರುವುದನ್ನು ತಾವು ನೋಡಿದ್ದೀರಿ. ಇದರಲ್ಲಿ ಇವತ್ತು ಇಷ್ಟೇ ಆಗುವುದು. ಏನೆಂದರೆ ನಿಮ್ಮ ಒನ್ ಆದಂತಹ ಕರಿಕ್ಯುಲುಮ್ ಅನ್ನು ಮಾಡುತ್ತೀರಿ. ಆಮೇಲೆ ನಿಮ್ಮರೆಗ್ಯುಲೇಷನ್ಸ್ ಕೂಡ ಮಾಡುತ್ತೀರಿ. ಇದರಿಂದ ನಿಮ್ಮ ಸ್ಟಾಂಡರ್ಡ್ ಕೂಡ ಇಂಪ್ರೋವ್ ಆಗುತ್ತದೆ. ಆದರೆ ಇವತ್ತಿನ ದಿವಸ ಆ ಒಂದು ಕಂಡೀಷನ್ಸ್ ಏನಿತ್ತು. ಮೊದಲು ಎನ್.ಒ.ಸಿ.ಗೆ ಸ್ಟೇಟ್ ಗೌವರ್ನಮೆಂಟ್‌ನಿಂದ ಪರ್ಮೀಷನ್ ಬೇಕೆ ಬೇಕು ಎನ್ನುವ ಕಂಡಿಷನ್ಸ್ ಇವತ್ತಿಲ್ಲ ಮಹಾರಾಷ್ಟ್ರ ಮತ್ತು ತಮಿಳುನಾಡಿನಲ್ಲಿ ಇನ್ನಿತರ ರಾಜ್ಯಗಳಲ್ಲಿ ಡೀಮ್ಡ್ ಯುನಿವರ್ಸಿಟಿಗಳು ಆಗಿಹೋಗಿವೆ. ವಿ.ಟಿ.ಯು ಒಂದು ಸರ್ಕಾರದ ಒಂದು ಸಂಸ್ಥೆಯಾಗಿರುವುದರಿಂದ ಇಲ್ಲಿ ಡೀಮ್ಡ್ ಯುನಿವರ್ಸಿಟಿ ಸ್ಟೇಟಸ್ ಕೊಡುವುದರಿಂದ ಇಲ್ಲಿ ರಿಸವೇಷನ್‌ಗಾಗಲಿ ಇದರಿಂದ ಹೊಡೆತ ಬೀಳುವುದಿಲ್ಲ. They are also covered under the Supreme Court Judgements ಮತ್ತು ಇದರಿಂದ ಅಕಾಡೆಮಿಕ್ ಮತ್ತು ಇನ್ನಿತರ Standards ಕೂಡ ಇಂಪ್ರೋವ್ ಆಗುತ್ತದೆ. ಸೋಷಿಯಲ್ ಜಸ್ಟೀಸ್‌ನಲ್ಲಿಯೂ ಕೂಡ ಯಾವುದೇ ಅನ್ಯಾಯವಾಗುವುದಿಲ್ಲವೆಂಬುದು ನನ್ನ ಭಾವನೆಯಾಗಿದೆ. ಮತ್ತೊಂದು ವಿಷಯವೆಂದರೆ ಅನೇಕ ವಿಷಯಗಳ ಬಗ್ಗೆ ತಿಳಿದುಕೊಳ್ಳುವುದಕ್ಕೆ ಫಾರಿನ್ ಸ್ಟೂಡೆಂಟ್ಸ್ ಇಲ್ಲಿಗೆ ಬರುತ್ತಾರೆಂದು ಹೇಳಿದರು. ಆದರೆ ಇವತ್ತು ಆ ರೀತಿ ಆಗುತ್ತಿಲ್ಲ. ನ್ಯೂಜಿಲ್ಯಾಂಡ್ ಆಸ್ಟೇಲಿಯಾ ಇರಬಹುದು. ಯು.ಕೆ. ಸಿಂಗಪೂರ್ ಸಣ್ಣ ಸಣ್ಣ ದೇಶಗಳಿಂದ ಭಾರತ ದೇಶಕ್ಕೆ ಬರುತ್ತಾರೆ. ಬೆಂಗಳೂರಿಗೆ ಬರುತ್ತಾರೆ. ನಮ್ಮ ವಿದ್ಯಾರ್ಥಿಗಳನ್ನು ನಮ್ಮ ಫಾರಿನ್ ಎಕ್ಸಚೇಂಜ್ ಇವತ್ತು ಆ ದೇಶಕ್ಕೆ ಹೋಗುತ್ತಿದೆ. ಹುಡುಗರು ಇವತ್ತಿನ ದಿವಸ ಇಲ್ಲಿಗೆ ಬರುತ್ತಿಲ್ಲ. ಏಕೆಂದರೆ ಮಲೇಷಿಯಾದಲ್ಲಿ ದುಬೈನಲ್ಲಿ ಕಾಲೇಜುಗಳಾಗಿವೆ. ಎಲ್ಲಾ ಕಡೆ ಕಾಲೇಜುಗಳಿರುವುದರಿಂದ ಎನ್. ಆರ್, ಐ. ಆಗಲಿ. ಫಾರಿನರ್ಸ್ ಆಗಲಿ ಇವತ್ತಿನ ದಿವಸ ನಮ್ಮ ದೇಶಕ್ಕೆ ಬರುವ ಪರಿಸ್ಥಿತಿ ಇಲ್ಲ. ಪರಿಸ್ಥಿತಿ ಉಲ್ಟಾ ಆಗಿದೆ. ಯು.ಕೆ. ಆಸ್ಟ್ರೇಲಿಯಾ, ನ್ಯೂಜಿಲ್ಯಾಂಡ್, ಸಿಂಗಪೂರ್ ಹಾಗೂ ಇನ್ನಿತರ ಸಣ್ಣ ದೇಶಗಳಲ್ಲಿರುವ ವೇರಿಯಸ್ ಪ್ರೋಫೆಷನಲ್ ಕಾಲೇಜಸ್, ಡಿಗ್ರಿ ಕಾಲೇಜುಗಳಿಗೆ

ನಮ್ಮ ಹುಡುಗರನ್ನು ಅಲ್ಲಿಗೆ ಒಯ್ಯುತ್ತಿದ್ದಾರೆಂದು ತಮ್ಮ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್ (ಶ್ರೀನಿವಾಸಪುರ): ಮಾನ್ಯ ಅಧ್ಯಕ್ಷರೆ, ಈ ಸ್ಟೇಟ್‌ಮೆಂಟ್ ಆಫ್ ಅಬ್ಜೆಕ್ಷನ್ ಅಂಡ್ ರೀಸನ್ಸ್ ಅನ್ನು ಓದಿದಾಗ ಈ ತಾಂತ್ರಿಕ ವಿಶ್ವವಿದ್ಯಾಲಯ ಅಸ್ತಿತ್ವಕ್ಕೆ ಬರುವುದಕ್ಕೆ ಮೊದಲು ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಇದಕ್ಕೆ ಅವಕಾಶವಿತ್ತು. ನಂತರ ಇಲ್ಲ. ಅದಕ್ಕಾಗಿ ಅವಕಾಶ ಮಾಡಿಕೊಡಬೇಕೆನ್ನುವ ಕಾರಣವನ್ನು ಹೇಳಿದ್ದಾರೆ. ಹಾಗೆ ಮಾಡಿ ಎಂದು ಸರ್ಕಾರಕ್ಕೆ ಯಾರಾದರೂ ಅರ್ಜಿಯನ್ನು ಕೊಟ್ಟರೇ ಅಥವಾ ನಿಮಗೆ ನಿಮ್ಮ ಸ್ವಂತ ಅನುಭವದಿಂದ ಇದರಲ್ಲಿ ಒಂದು ಲೋಪವಿದೆ. ಇದನ್ನು ಸರಿಪಡಿಸಬೇಕೆಂದು ಅನಿಸಿತೇ? ಅಥವಾ ನಿಮ್ಮ ಸೆಕ್ರಟೇರಿ ಯೇಟ್‌ನಲ್ಲಿ ನಿಮ್ಮ ಶಿಕ್ಷಣ ಇಲಾಖೆಯಲ್ಲಿ ಇದಕ್ಕಿದ್ದಂತೆ ಜ್ಞಾನೋದಯವಾಗಿ ಇದನ್ನು ಸರಿಪಡಿಸಬೇಕೆಂಬ ಆಲೋಚನೆ ಏನಾದರೂ ಬಂತಾ? ಒಂದು ಕಾರಣ ಬೇಕಲ್ಲ? ಕಾರಣವಿಲ್ಲದೆ ಬಿಲ್ ಇಂಟ್ರಡ್ಯೂಸ್ ಆಗುವುದಿಲ್ಲ. ಮಾನ್ಯ ಎಂ.ಬಿ ಪಾಟೀಲರು ಹೇಳಿದ ಮಾತನ್ನು ನಾನು ಕೇಳಿದೆ. ಮಾನ್ಯ ಕೃಷ್ಣಪ್ಪನವರು ಹೇಳಿದ ಮಾತನ್ನು ಕೇಳಿದೆ. ನೋಡಿ ಅಧ್ಯಕ್ಷರೆ ವಿಪರ್ಯಾಸ. ಖಾಸಗಿ ಸಂಸ್ಥೆಗಳು ಪ್ರೋಫೆಷನಲ್ ಎಜುಕೇಷನ್‌ನಲ್ಲಿ pioneers ಆಗುವ ಮೊದಲು ಸರ್ಕಾರಿ ಇಂಜಿನಿಯಂಗ್ ಕಾಲೇಜಾಗಲಿ, ಮೆಡಿಕಲ್ ಕಾಲೇಜಾಗಲಿ ವಿದ್ಯಾರ್ಥಿಗಳು ಓದುತ್ತಾರೆ ಅಂದರೆ ಅದೊಂದು ದೊಡ್ಡ ಗರ್ವದ ಸಂಗತಿಯಾಗಿತ್ತು. ಒಬ್ಬ ಹುಡುಗ ವಿಶ್ವೇಶ್ವರಯ್ಯ ಇಂಜಿಯರಿಂಗ್ ಕಾಲೇಜಿನಲ್ಲಿ ಅಥವಾ ಬೆಂಗಳೂರು ಮೆಡಿಕಲ್ ಕಾಲೇಜಿನಲ್ಲಿ ಸ್ಟೂಡೆಂಟ್ ಅಂದರೆ ಅದು ಬಹಳ ದೊಡ್ಡ ಸಂಗತಿ ಹೆಮ್ಮೆಯ ವಿಚಾರವಾಗಿರುತ್ತದೆ. ಇವತ್ತು ಅದೆಲ್ಲಾ ರಿವರ್ಸ್ ಆಗಿದೆ. ಇದಕ್ಕೆ ಒಂದು ಚಿಕ್ಕ ಉದಾಹರಣೆ ಹೇಳಿಬಿಡುತ್ತೇನೆ. ನಿಮ್ಮ ಕ್ಷೇತ್ರದಿಂದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಿಂದ ಮಕ್ಕಳು ಯಾವುದೋ ಒಂದು ಕಾಂಪಿಟೇಷನ್‌ಗೆ ಇಲ್ಲಿಗೆ ಬರುತ್ತಾರೆ, ಬಾಲ್ಡವಿನ್ ಅಥವಾ ಬಿಷಪ್‌ಕಾಟನ್ ಶಾಲೆಯಿಂದಲೂ ಮಕ್ಕಳು ಬರುತ್ತಾರೆ. ಆ ಮಕ್ಕಳನ್ನು ಒಟ್ಟಿಗೆ ನೋಡಿ ಬೇರೆ ಬೇರೆ ದೇಶಗಳಿಂದ ಬಂದಿರುವ ಹಾಗೆ ಕಾಣುತ್ತಾರೆ. ಈ ವರ್ಗಭೇದ ದಿವಸದಿಂದ ದಿವಸಕ್ಕೆ ಎಷ್ಟು ವಿಸ್ತಾರವಾಗುತ್ತಾ ಹೋಗುತ್ತಿದೆಯೆಂದರೆ "Money has been playing the biggest role. Poverty is the worst disease that can attack the human being." ನಾನು ತಮಗೆ ಹೇಳುತ್ತೇನೆ. ಕ್ಯಾನ್ಸರ್ ಕಾಯಿಲೆಯನ್ನಾದರೂ ಒಂದು ವೇಳೆ ತಡೆದುಕೊಳ್ಳಬಹುದು, ಆ ಕ್ಯಾನ್ಸರ್‌ಗಿಂತ ಕ್ರೂರವಾದಂಥ ಕಾಯಿಲೆಯನ್ನು ಮನುಷ್ಯನಿಗೆ ತರುತ್ತದೆ. ಅಂದರೆ ಹೆಚ್ಚೂ

ಹೆಚ್ಚು ಬಡವರನ್ನು ಹಂಗಿಸತಕ್ಕಂಥ ಹೀಯಾಳಿಸಕತಕ್ಕಂಥ ಆಲೋಚನೆಗಳೇ ದಿನಬೆಳಗಾಗದರೆ ನಮ್ಮ ಮನಸ್ಸಿಗೆ ಬರುತ್ತವೆಯೇ ಹೊರತು ಸದಾಲೋಚನೆಗಳು ಬರುವುದೇ ಇಲ್ಲ. ಸರ್ಕಾರಿ ಸ್ವಾಮ್ಯದಲ್ಲಿರತಕ್ಕಂಥ ಶಿಕ್ಷಣಸಂಸ್ಥೆಗಳಲ್ಲಿ ಏತಕ್ಕೆ ಫಲಿತಾಂಶಗಳು ಕಡಿಮೆ ಬರುತ್ತದೆ. ಏತಕ್ಕೆ ಅವು ಅಭಿವೃದ್ಧಿಯಾಗಬಾರದು? ಅವುಗಳೇತಕ್ಕೆ ಮುಂದು ಬರಬಾರದು ಎಂಬುದರ ಕಡೆಗೆ ನಮ್ಮ ಗಮನವೇ ಇಲ್ಲ. ಅವರಿಗೆ ವೇಜ್ ಸ್ಟ್ರಕ್ಚರ್ ಎಷ್ಟು ಕೊಡುತ್ತಿದ್ದೇವೆ? ನಮ್ಮ ಹಣದಿಂದ ಎಷ್ಟು ಖರ್ಚಾಗುತ್ತಿದೆ? ಅಲ್ಲಿ ನಾವು ಏನು ಕ್ರಮವನ್ನು ತೆಗೆದುಕೊಂಡಿದ್ದೇವೆ? ಅಲ್ಲಿ ಇನ್‌ಫ್ರಾಸ್ಟ್ರಕ್ಚರ್ ಏನು ಕೊಟ್ಟಿದ್ದೇವೆ. ಎಂಬ ಬಗ್ಗೆ ನಾವು ಯೋಚನೆ ಮಾಡುವುದಿಲ್ಲ. ಈಗ ಒಂದು ಪರ್ಟಿಕ್ಯುಲರ್ 'ಎ' ಕಾಲೇಜು ಅವರಿಗೆ Deemed status ಕೊಡುತ್ತೀರಿ. ನಾಳೆ ಅವರು ಮಾಡಿಕೊಳ್ಳುತ್ತಾರೆ . That is an Hohour to them. So ಅಲ್ಲಿಗೆ ವಿದ್ಯಾರ್ಥಿಗಳು ಮೋದಲೇ ಅವರೋದಿಗೆ ಕಾಂಟ್ಯಾಕ್ಟ್ ಇಟ್ಟುಕೊಳ್ಳುತ್ತಾರೆ. ಕ್ಯಾಂಪಸ್ ಸೆಲೆಕ್ಷನ್‌ಗೆ ಬರುತ್ತಾರೆ. ಈ ಎಲ್ಲಾ advantages ಇವೆಲ್ಲಾ ಪ್ರತಿಷ್ಠತ ವರ್ಗ ಇನ್ನಷ್ಟು ಪ್ರತಿಷ್ಠಿತ ವರ್ಗವಾಗಿ ಬೆಳೆಯಲಿಕ್ಕೆ ಅವಕಾಶವಾಗುತ್ತದೆಯೇ ಹೊರತು ಯಾರು ಶೋಷಿತರಾಗಿರುತ್ತಾರೆ, ಯಾರಿಗೂ ಈಗಾಗಲೇ ನ್ಯಾಯವಾಗಿ ಸಿಗಬೇಕಾಗಿದ್ದಂತಹ ಸವಲತ್ತು ಸಿಕ್ಕಲ್ಲ. ಅವರಿಗೆ ಇದರಲ್ಲಿ ಪ್ರಯೋಜನವಾಗುವುದಿದ್ದರೆ ಮಾನ್ಯ ಮಂತ್ರಿಗಳಾದ ಮಾನ್ಯ ಶಂಕರಮೂರ್ತಿಯವರು ಕನ್‌ಷನ್ಸ್ ಮಾಡಿದರೆ ನಿಮಗೆ ಶಿರಸಾಷ್ಟಾಂಗ ನಮಸ್ಕಾರ ಮಾಡಿ ಸ್ವಾಗತ ಹೇಳುತ್ತೇನೆ. ನೀವು ಹೇಳಿದಷ್ಟು ಸುಲಭ ಏನೂ? ಅಲ್ಲಿದು ಬರೀ ಸಿಂಪಲ್ ಬಿಲ್ ಆಗಿದ್ದು ಪ್ರಾವಿಷನ್ ಕೊಡುತ್ತಿದ್ದೇವೆ. ಆದ್ದರಿಂದ ಡೀಮ್ಡ್ ಸ್ಟೇಚರ್ ಕೊಡುತ್ತೇವೆಂದು. ಏಕೆ ಬೇಕು ಅವರಿಗೆ ಡೀಮ್ಡ್ ಸ್ಟೇಚರ್? ಈಗ ಮಾಹೆಗೆ ನಾವು ಕೊಟ್ಟದ್ದೇವೆ. ಮಾನ್ಯ ಅಧ್ಯಕ್ಷರೆ ಆ ಮಾಹೆ ಸಂಸ್ಥೆಯ ಅವರಣದಲ್ಲೂ ಕೂಡ ಸಾಮಾನ್ಯ ಜನ ಯಾರೂ ಕೂಡ ಓಡಾಡುವುದಕ್ಕೆ ಆಗುವುದಿಲ್ಲ. ಅಲ್ಲಿನ ಅಟ್‌ಮಾಸ್ಪಿಯರ್ ನಿಮಗೆ ಮಣಿಪಾಲ್‌ಗೆ ಹೋದ ತಕ್ಷಣವೇ ನೀವು ಯಾವುದೋ ಒಂದು ವಿದೇಶಕ್ಕೆ ಹೋದಂತ ಭಾವನೆ ಬರುತ್ತದೆ ನಿಮಗೆ. ಕಾಲಿಗೆ ಚಪ್ಪಲಿ ಇಲ್ಲ್ದೇ ಇದ್ದವನು. ಹೊಟ್ಟೆಗೆ ಅನ್ನ ಇಲ್ಲದೇ ಇದ್ದವನು. ಹರಕಲು ಬನಿಯನ್ ಹಾಕಿಕೊಂಡುವನು. ಜೇಬಿನಲ್ಲಿ ದುಡ್ಡು ಇಲ್ಲದೇ ಇದ್ದವನು. ಯಾರ ಅಪ್ಪ ಅಮ್ಮನಿಗೆ ಬರೆಯುವುದಕ್ಕೆ ಬರುವುದಿಲ್ಲ. ಯಾವನು ಅಪಮಾನಕ್ಕೆ ಒಳಗಾಗಿ ಬಸ್ಸು ಹತ್ತಿ ರಾತ್ರಿಯಲ್ಲಿ ಪ್ರಯಾಣ ಮಾಡಿ ಅಲ್ಲಿ ಹೋಗುತ್ತಾನೆ. ಅವನಿಗೆ ಆ ಕಾಲೇಜು ನೋಡಿದ ತಕ್ಷಣ ನಡುಕ ಬರುತ್ತೆ.

(ಮಾನ್ಯ ಉಪಾಧ್ಯಕರು (ಶ್ರೀ ಎನ್ ವೈ. ಗೋಪಾಲಕೃಷ್ಣ) ರವರು. ಅಧ್ಯಕ್ಷರ ಪೀಟವನ್ನು ಅಲಂಕರಿಸಿದರು).

ಈಗ ಹಾಗಾದರೆ ಯಾವನಾದರೂ ಬಡವ ಗತಿ ಇಲ್ಲದೇ ಇರುವವನು ಮಣಿಪಾಲ್ ಆಸ್ಪತ್ರೆಗೆ ಹೋಗುತ್ತಾನೇನು ನೋಡೋಣ? ಅವನಿಗೆ ಅವಕಾಶ ಇಲ್ಲವೋ ಟ್ರೀಟ್‌ಮೆಂಟ್ ಸಿಗುತ್ತೋ ಇಲ್ಲವೋ ಅವನು ಬೌರಿಂಗ್ ಆಸ್ಪತ್ರೆಗೆ ಹೋಗಿ ಸಾಯಬೇಕು. ದಿನ ಕ್ರಮೇಣ ನಮ್ಮ ಜೀವನದ ವ್ಯವಸ್ಥೆಯನ್ನು ನಾವು ಏನು ಮಾಡುತ್ತಿದ್ದೇವೆ. ಸರ್ಕಾರಿ ಸ್ವಾಮ್ಯದಲ್ಲಿ ಸಾಮಾನ್ಯನಿಗೆ ಸಿಗುತ್ತಿದ್ದಂತಹ ಸವಲತ್ತನ್ನು ದಿವಸ ವ್ಯವಸ್ಥಿತವಾಗಿ ಕಡಿಮೆ ಮಾಡುತ್ತಾ ಹೋಗುತ್ತಿದ್ದೇವೆ. ಎಲ್ಲೋ ಒಂದು ಕಡೆಗೆ ಪರೋಕ್ಷವಾಗಿ ಪ್ರಜ್ಞಾಪೂರ್ವಕವಾಗಿ ಪ್ರತಿಷ್ಠ ವರ್ಗ ಮೆರೆಯತಕ್ಕಂಥ ರೀತಿಯಲ್ಲಿ ಬರೀ ಅವರು ಮೆರೆಯುವುದಲ್ಲ ಬಡತನವನ್ನು ಇನ್ನಷ್ಟು ಹಿಯಾಳಿಸತಕ್ಕಂಥ ರೀತಿಯಲ್ಲಿ ನಾವು ಪರಿಪಾಲನೆ ಮಾಡಿಕೊಂಡು ಹೋಗುತ್ತಿದ್ದೇವೆ. It is an ideological content behind the whole thing.

ನನ್ನ ಗೆಳೆಯರು ಹೇಳಿದರು ಶ್ರೀ ಜಯಪ್ರಕಾಶ್ ಹೆಗಡೆಯವರು. ನಮ್ಮ ಲೇಬರ್‌ಲೇಜಿಸಿನ ವಿವಿಧ ವಿಕಾರ ಸ್ವರೂಪಗಳಲ್ಲಿ ಇದೂ ಒಂದು. ಇದು ಫಸ್ಟ್, ಅವರು ಇಲ್ಲಿಗೆ ಬರುತ್ತಾರೆ. ನಾವೇ ಯುನಿವರ್ಸಿಟಿ ಸ್ಟಾರ್ಟ್ ಮಾಡುತ್ತೇವೆಂದು ಬರುತ್ತಾರೆ. ಯಾವುದಕ್ಕೆ ಬಂದಿಲ್ಲ. ಅವರು ಈಗ? ಆರ್ನಲಿಜಂಗೆ ಬಂದರು, ಇಂಡಸ್ಟ್ರೀಗೆ ಬಂದರು, ಅಗ್ರಿಕಲ್ಚರ್‌ಗೆ ಬಂದರು. ಎಜುಕೇಷನ್‌ಗೆ ಬರುತ್ತಿದ್ದಾರೆ. ಸಾರ್, ನಾವು ಯಾವ ಕಾರಣಕ್ಕೂ ಕೂಡ ದೀರ್ಘವಾಗಿ ಆಲೋಚನೆ ಮಾಡದೇ ಇಂತಹ ಸಾಹಾಸಗಳಿಗೆ ಕೈ ಹಾಕತಕ್ಕಂಥಾದ್ದು ಬಹಳ ದೊಡ್ಡ ಅಪರಾಧ ಅಂತ ಅನಿಸುತ್ತದೆ. ಯಾವುದೇ ನಮ್ಮದೇ ಆದ ಕೆಲವು ಕಾರಣಗಳಿಗೆ ನೀವು ಒಂದು ಪಕ್ಷಕ್ಕೆ ನಾವು ಒಂದು ಪಕ್ಷಕ್ಕೆ ಸೇರಿರಬಹುದು. ಆಕಸ್ಮಿಕವಾಗಿ ನಾವು ನೀವು ಇವತ್ತು ಈ ಸದನದಲ್ಲಿ ಇರಬಹುದು. ದೂರ ಆಲೋಚನೆ ಇಲ್ಲದೇ ನಮ್ಮಂತಹವರು ಇದರ ಒಳಕ್ಕೆ ಬರುವುದಕ್ಕೆ ಕಾರಣೀಭೂತನಾಗಿರತಕ್ಕಂಥ, ಯಾವ ಬಾಯಿ ಇಲ್ಲದೇ ಇರುವ ಜನ ಇದ್ದಾರೆ ಅವರ ಬಗ್ಗೆ ನಾವು ಊಹೆ ಮಾಡದೇ ಆಲೋಚನೆ ಮಾಡದೇ ಎಲ್ಲೋ ಒಂದು ಕಡೆ ಎಚ್ಚರ ತಪ್ಪಿ ನಾವು ಇಂಥಾದ್ದಕ್ಕೆ ಭಾಗೀಗಳಾದರೆ ಬಹುಶಃ ಆ ಜನರ ಶಾಪಕ್ಕೆ ನಾವು ಗುರಿಯಾಗಬೇಕಾಗುತ್ತೆ. ದಯಮಾಡಿ ದೂರಾಲೋಚನೆ ಮಾಡಿ ನಮಗೇನು ಮತ್ಸರ ಇಲ್ಲ, ನಾನು ಹೇಳತಕ್ಕಥಾದ್ದು ಇಷ್ಟೇ. ಈಗ ರೂರಲ್ ಏರಿಯಾದಲ್ಲಿರತಕ್ಕಂಥ ಯಾವುದಾದರೂ ಒಂದು ಕಾಲೇಜಿಗೆ ಡೀಮ್ಡ್ ಸ್ಟೇಚರ್ ಕೇಳುವುದಕ್ಕೆ ಹೋಗುತ್ತಾರೆ? ಇದನ್ನು ಕೇಳತಕ್ಕಂಥವರು ಎಲ್ಲರೂ ಕೂಡ ಯಾರು ಪ್ರಭಾವೀಶಾಲಿಗಳು ಆಗಿದ್ದಾರೆ. ಯಾರು ಈಗಾಗಲೇ ಈ ಕ್ಷೇತ್ರದಲ್ಲಿ ವಾಣಿಜ್ಯ ರುಚಿಯನ್ನು ನೋಡಿದ್ದಾರೆ. ಪ್ರಭಲಸ್ಥರಾಗಿದ್ದಾರೆ, ಸಾಮ್ರಾಜ್ಯವನ್ನು ಸ್ಥಾಪನೆ ಮಾಡಿಕೊಂಡಿದ್ದಾರೆ. ಅವರೇ ಇದನ್ನು ಕೇಳತಕ್ಕಂಥವರು. ನಾಳೆ,

ದಯಮಾಡಿ ದೂರ ಆಲೋಚನೆ ಮಾಡಬೇಕು. ನಾವು ವೇದಿಕೆಗಳಿಂದ ಅನೇಕ ಸಂದರ್ಭಗಳಲ್ಲಿ ಜನರಿಗೆ ಏನು ಮಾತನಾಡಿ ನಮ್ಮ ದೇಶಭಕ್ತಿ ಜನರ ಬಗ್ಗೆ ನಮಗೆ ಇರತಕ್ಕಂಥ ಉತ್ಕಟ ಪ್ರೀತಿಯನ್ನು ವ್ಯಕ್ತ ಮಾಡತಕ್ಕಂಥ ಎಲ್ಲಾ ಪ್ರಯತ್ನಗಳನ್ನು ಮಾಡುತ್ತೇವೆ ಅದರ ನಿಜ ಸ್ವರೂಪ ಬಯಲಾಗುವಂಥಾದ್ದು ಇಂತಹ ಸನ್ನಿವೇಶಗಳಲ್ಲಿ. ಇದೊಂದು ಸವಾಲು ನಿಮಗೆ ಅಂತ ಹೇಳಿ ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಅಥವಾ ಇದನ್ನು ಕೈ ಬಿಟ್ಟು ಎಲ್ಲರನ್ನು ಕರಸಿ ನಿಜವಾದ ಉದ್ದೇಶ ಅರಿತು ಸಂಪೂರ್ಣವಾಗಿ ನಮಗೆ ವಿವರಗಳನ್ನು ಕೊಟ್ಟು ಮನವರಿಕೆ ಮಾಡಿ. ನಾವು ಹೇಳುತ್ತಾ ಇರತಕ್ಕಂಥ ಅನಿಸಿಕೆಗಳು ಆಧಾರರಹಿತವಾಗಿರತಕ್ಕಂಥಾದ್ದು ಅಂತ ಹೇಳಿ ನೀವು ನಮಗೆ ಮನವರಿಕೆ ಮಾಡಿದರೆ ಖಂಡಿತ ನಾವು ನಿಮ್ಮ ಒಟ್ಟಿಗೆ ಇರುತ್ತೇವೆ. ಇಲ್ಲದೇ ಹೋದರೆ ನಮ್ಮ ಸಹಕಾರ ನಿಮಗೆ ಸಿಗುವುದಿಲ್ಲ. ಆ ಕೆಲಸ ಮಾಡಲಿಕ್ಕೆ ನಾವು ಇಲ್ಲಿಗೆ ಬಂದಿಲ್ಲ. ಎನ್ನತಕ್ಕಂಥ ಮಾತನ್ನು ಹೇಳಿ ತಮಗೆ ವಂದಿಸಿ ನಾನು. ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎ. ಕೃಷ್ಣಪ್ಪ; ಮಾನ್ಯ ಅಧ್ಯಕ್ಷರೇ ಸಾಮಾಜಿಕ ನ್ಯಾಯದ ಬಗ್ಗೆ ನಾನು ಒಂದು ಮಾತನ್ನು ಈ ಸರ್ಕಾರಕ್ಕೆ ಸರ್ಕಾರ ನಡೆಸುವವರಿಗೆ ಜ್ಞಾಪಕ ಮಾಡಬೇಕಾಗುತ್ತದೆ. ನಾನು ಸಮಾಜ ಕಲ್ಯಾಣ ಸಚಿವಾನಾಗಿದ್ದೆ. ಸುಮಾರು 17 ಸಾವಿರ ಬ್ಯಾಕ್‌ಲಾಗ್ ವೇಕೆನ್ಸಿಯನ್ನು ಭರ್ತಿ ಮಾಡಬೇಕು ಅಂತ ಹೇಳಿ ಒಂದು ದಿಟ್ಟವಾಗಿ ಹೇಳಿ ಒಂದು ದಿಟ್ಟವಾದ ತೀರ್ಮಾನವನ್ನು ಅಂದಿನ ಸರ್ಕಾರ ತೆಗೆದುಕೊಂಡಿತು. ಅದರೆ ಮಾನ್ಯ ಸಭಾಧ್ಯಕ್ಷರೇ ಎಲ್ಲಾ ಡಿಪಾರ್ಟ್‌ಮೆಂಟ್ಸ್ ಅಂದರೆ ಸುಮಾರು 200 ಡಿಪಾಟ್‌ಮೆಂಟ್ಸ್‌ಗಳು ಸಹಕಾರ ಕೊಟ್ಟರು. ಆದರೆ ಯುನಿವರ್ಸಿಟಿ ವೈಸ್ ಚಾನ್ಸಲರ್ಸ್; ಇವತ್ತು ನಾನು ವಿಧಿ ಇಲ್ಲದೇ ಈ ಮಾತನ್ನು ಈ ಸದನದಲ್ಲಿ ಹೇಳಬೇಕು. ಅವರು ಅಟ್ಟಹಾಸವನ್ನು ಪ್ರದರ್ಶನ ಮಾಡಿದರು. ನಮಗೆ ಸಹಕಾರ ಕೂಡಲೇ ಇಲ್ಲ. ಕಡೆಗೆ ಕರ್ನಾಟಕ ಸರ್ಕಾರದ ಕ್ಯಾಬಿನೇಟ್ ಅವರ ಮೇಲೆ ಕ್ರಿಮಿನಲ್ ಅಕ್ಷನ್ ತೆಗೆದುಕೊಳ್ಳುತ್ತೇವೆ. ಕ್ರಿಮಿನಲ್ ಚಾರ್ಜಸ್ ಮಾಡುತ್ತೇವೆ. ಈ ಒಂದು ಪ್ರಕ್ರಿಯೆಗೆ ಸಹಕಾರ ಕೂಡದೇ ಇದ್ದರೆ ಅಂತ ಹೇಳಿ ಕ್ಯಾಬಿನೇಟ್ ತೀರ್ಮಾನ ಮಾಡಿದ ಮೇಲೆ ಬ್ಯಾಂಕ್‌ಲಾಗ್ ವೇಕೆನ್ಸಿಯನ್ನು ಭರ್ತಿ ಮಾಡಲಿಕ್ಕೆ ಅವರು ಬಹಳ ತಡವಾಗಿ ನಮ್ಮ ಜೊತೆಯಲ್ಲಿ ಸಹಕಾರ ಮಾಡಿದರು. ಸರ್ಕಾರದ ಒಂದು ಟೋಟಲ್ ಕಂಟ್ರೋಲ್‌ರುವಂತಹ ಯುನಿವರ್ಸಿಟೀಸ್ ಈ ರೀತಿ ವರ್ತನೆ ಮಾಡಿವೆ ಅಂತ ಹೇಳಿದರೆ ನಾಳೆ ನೀವು ಅವರಿಗೆ ಎಕದಮ್ ಅಟಾನಮಸ್ ಮಾಡಿದರೆ ಸಾಮಾಜಿಕ ನ್ಯಾಯಕ್ಕೆ ನೇರವಾದಂತಹ ಪೆಟ್ಟು ಅವರ ಕಡೆಯಿಂದ ಬೀಳುವುದರಲ್ಲಿ ಯಾವ

ಸಂದೇಹವೂ ಇಲ್ಲ. ಆದರಿಂದ ದಯಮಾಡಿ ನಾವು ಇವತ್ತು ಈ ಸಂದರ್ಭದಲ್ಲಿ ಅರ್ಥ ಮಾಡಿಕೊಳ್ಳಬೇಕಾಗಿದೆ ಲೋಕಲ್ ಎನ್‌ಕ್ವೈರಿ ಕಮಿಟೀಸ್ ಇವತ್ತಿಗೂ ಹೋಗುತ್ತಿದೆ. ಸಬ್ಜೆಕ್ಟ್ ವೈಜ್ ಯಾರಿಗಾದರೂ ಪರ್ಮಿಶನ್ ಕೋಡಬೇಕಾದರೆ ಇನ್‌ಫ್ರಾಸ್ಟ್ರಕ್ಚರ್ಸ್ ಇಲ್ಲದೇ ನಡೆಸುತ್ತಾ ಇರತಕ್ಕಂಥ ಕಾಲೇಜುಗಳು ಕ್ವಾಲಿಟಿ ಮತ್ತು ಎಕ್ಸಲೆನ್ಸಿಗೆ ಡೀಫೀಟ್ ಆಗಿರುವಂತಹ ಪರಿಸ್ಥಿತಿ ರಾಜ್ಯದಲ್ಲಿ ಬೇಕಾದಷ್ಟು ಸಂದರ್ಭಗಳಲ್ಲಿ ನಾವು ನೋಡಿದ್ದೇವೆ. ಆದ್ದರಿಂದ ಟೋಟಲ್ ಫ್ರೀ ಪ್ಲೇನ್ ಚೆಕ್ ಅವರಿಗೆ ಸ್ಯಾಂಕ್ಷನ್ ಮಾಡಿದರೆ ಸಾಮಾಜಿಕ ನ್ಯಾಯ ಒಂದೇ ಅಲ್ಲ ರಾಜ್ಯದ ಒಂದು ಹಿತವನ್ನು ಕಾಪಾಡುವಂತಹ ವಿಚಾರದಲ್ಲಿ ರಾಷ್ಟ್ರದ ವಿಚಾರಕ್ಕೂ ಸಹ ಇದು ಧಕ್ಕೆ ತರಬಹುದು ಅಂತ ಒಂದು ವಿಚಾರ ಆಗಬಹುದು. ಅದಕ್ಕಾಗಿ ಅದನ್ನು ಟೋಟಲ್ ರೀಕನ್ಸಿಡರೇಷನ್ ಕೋಡಬೇಕು. ಶ್ರೀಮಾನ್ ರಮೇಶಕುಮಾರ್‌ರವರು. ಹೇಳಿದ ಹಾಗೆ ಒಂದು ಡೆಲಿಬರೇಶನ್ಸ್ ಆಗಿ ತದನಂತರ If it is going help the state and the Country. I think we shoud give concurrence. Otherwise, that should be withdrawn.

ಶ್ರೀ ಶಿವಾನಂದ ಎಸ್. ಪಾಟೀಲ್; ಮಾನ್ಯ ಅಧ್ಯಕ್ಷರೆ ನನ್ನ ಅಭಿಪ್ರಾಯ ಇಷ್ಟೇ ಮಾನ್ಯ ಕೃಷ್ಣಪ್ಪನವರು ಹೇಳಿದರು. ಅವರು ಇದ್ದಾಗಲೇ ಆ ಪ್ರಯತ್ನ ನಡೆದಿದ್ದು ಬ್ಯಾಕ್ ಲಾಗ್ ಹುದ್ದೆಗಳು ತುಂಬಬೇಕು ಅಂತ. ಆದರೆ ಅವರು ತುಂಬಿದ್ದೇನೆಂದು ಹೇಳಿದರು, ಅದು ಆಗಲಿಲ್ಲ. ಇಲ್ಲ ನಾನು ಹೇಳುತ್ತೇನೆ. ಒಂದು ನಿಮಿಷ.

ಶ್ರೀ ಎ. ಕೃಷ್ಣಪ್ಪ; ಮಾನ್ಯ ಅಧ್ಯಕ್ಷರೆ ರಾಂಗ್ ಇನ್‌ಫರ್‌ಮೇಶನ್ ಹೋಗುವುದು ಬೇಡ. It was the first time in the Country. That we have secured 14.000 Vacancies to fill up.

ಅದು ಆಗಲಿಲ್ಲ. ಅಂತ ದಯಮಾಡಿ ಹೇಳಬೇಡಿ It may not be 100% successful. But our Government was the first Government to take up. this task.

ಶ್ರೀ ಶಿವಾನಂದ ಎಸ್. ಪಾಟೀಲ್; (ಬಸವನ ಬಾಗೇವಾಡಿ) ಮಾನ್ಯ ಅಧ್ಯಕ್ಷರೇ I Stand by my words. If you want to cnquire it. You can do so Any time.

ಸಾರ್ ಉದಾಹರಣೆಯಾಗಿ ನಾನು ಕರ್ನಾಟಕ ಯುನಿವರ್ಸಿಟಿ ಉದಾಹಣೆ ಇವತ್ತಿಗೂ ಸ್ಟ್ಯಾಂಡಿಂಗ್‌ಗೆ ಹೇಳುತ್ತೇನೆ. ಅಲ್ಲಿ ಇವತ್ತು 100 ಪೋಸ್ಟ್ ಆಗಷ್ಟೇ ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬಿದ್ದಾರೆ. If you want enquire, You can do so at any time.

ಇದು ಫಸ್ಟ್ ಎಗ್ಜಾಂಪಲ್. ಸೆಕೆಂಡ್ ಶಂಕರಮೂರ್ತಿ ಸಾಹೇಬರ ಬಗ್ಗೆ ನನಗೆ ರೆಸೆಪೆಕ್ಟ್ ಇದೆ. ಈ ಬರುವುದಕ್ಕಿಂತ ಮೊದಲು ಮಾನ್ಯ ವಿಶ್ವೇಶ್ವರ ಹೆಗಡೆ ತಮ್ಮ ಪಕ್ಷದ ಸುರೇಶಕುಮಾರ್ ಇಲ್ಲಿ ಏನೇನು ಮಾತನಾಡಿದರು ನನಗೆ ಗೊತ್ತಿದೆ. ಆಗ ನಿಮ್ಮ ಜೊತೆಯಲ್ಲಿಯೇ ಇದ್ದೆ ಆಗ ಮಾನ್ಯ ಪರಮೇಶ್ವರ ಅವರು ಮಂತ್ರಿಗಳಾಗಿದ್ದರು. ತಾವು ಏನೇನು ಮಾತನಾಡಿದ್ದೀರಿ ಗ್ಲೋಬಲೈಷನ್ ಅಬರಲೈಜೇಶನ್ ಬಗ್ಗೆ. ಇವತ್ತು ಶ್ರೀ ಗೋವಿಂದಾಚಾರ್ಯರವರ ಭಾಷಣ ಹೇಳುತ್ತೀರಿ. ರಾಜು ದೀಕ್ಷಿತ್ ಅವರ ಭಾಷಣ ಹೇಳುತ್ತೀರಿ. ನಿಮ್ಮ ಬಿಲ್‌ನಲ್ಲಿಯೇ ಬ್ಯಾಂಕ್ ಹೆಸರು ಬರುತ್ತದೆ. ಮಾನ್ಯ ರಮೇಶಕುಮಾರ್‌ರವರು ನಿಮಗೆ ಹೇಳಿದರು. ಬಹಳ ತೀಕ್ಷ್ಣವಾಗಿ ಹೇಳಿದರು. ಸಾರ್ ಈಗ ಎಂ.ಸಿ.ಐ ಏನಾಗಿದೆ ನಾನು ಹೇಳಬೇಕಾಗುತ್ತದೆ. ಎಂ.ಸಿ.ಐ. ಬಗ್ಗೆ ನಾನು ಒಂದು ಮಾತು ಹೇಳಬೇಕಾಗುತ್ತದೆ. ಮೆಡಿಕಲ್ ಕೌನ್ಸಿಲ್ ಆಫ್ ಇಂಡಿಯಾದವರು ಇಲ್ಲಿಗೆ ಬರುತ್ತಾರೆ. ಯಾವುದಾರೂ ಕಾಲೇಜಿಗೆ ರೆಕಗ್ನಿಶನ್ ಕೊಡಲಿಕ್ಕೆ. ಅವರಿಗೆ ಇಳಿದುಕೊಳ್ಳುವ ವ್ಯವಸ್ಥೇ ಯಾರು ಮಾಡುತ್ತಾರೆ ಸಾರ್. ತಮಗೆ ಗೊತ್ತಿದೆ ಯಾವ ಮ್ಯಾನೇಂಜ್‌ಮೆಂಟ್ ನೀವು ಹೇಳಿಬಿಡಿ. ನೀವು ಆತ್ಮ ಶೋಧನೆ ಮಾಡಿಕೊಂಡು. ತಾವು ಕಿಮ್ಸ್ ಸ್ಟೂಡೆಂಡ್ ಏನು ಗೊತ್ತಿಲ್ಲ ನನಗೆ ಬಹುತೇಕ. ವಿಮ್ಸ ಅಥವಾ ಕಿಮ್ಸ್ ಇರಬಹುದು. ಇರಲಿಕ್ಕೆ ಇಲ್ಲ ನೋಡಿಕೊಳ್ಳಿ, ಡಾಕ್ಟರ್ ತಂಗಾರವರು ಇದಿದ್ದರೆ ನಾನು ಹೇಳುತ್ತಿದ್ದೆ. ಈಗ ಏನಾಗಿದೆ ವಿಮ್ಸ್ ಕಿಮ್ಸ್‌ದು ಡೀರೆಕಾಗ್ನಿನೇಷನ್ ಆಗುವ ಸ್ಥಿತಿಗೆ ತಂದು ಇಟ್ಟಿದ್ದಾರೆ. 150 ಸೀಟು ಇದ್ದಿದ್ದು 100 ಸೀಟಿಗೆ ಬಂದಿದೆ. ಆ ಕಾಲೇಜು ಒಬ್ಬ ಪ್ರೈವೇಟ್‌ನಲ್ಲಿ ನಿಮ್ಮ ಎಂ.ಸಿ.ಐ ನವರು ಬರುತ್ತಾರೆ. ಅಂದರೆ ಗೌರ್ನಮೆಂಟ್ ಆಸ್ಪತ್ರೆಯಿಂದ 100 ಜನರನ್ನು ಮಲಗಿಸುತ್ತಾನೆ. ಅವನಿಗೆ 50 ಸೀಟು ನೆಕ್ಸ್ಟ್ ಎಕ್ಸಟೆಕ್ಷನ್ ಕೊಡುತ್ತಾರೆ. ಎನ್‌ಹಾನ್ಸ್ ಮಾಡುತ್ತಾರೆ. ಇಂತಹದ್ದಕ್ಕೆ ಅಟಾನಮಿ ಕೋಡಬೇಕೆನ್ನುವುದು ನಿಮ್ಮ ವತಿಯಿಂದ ಆಗಬಾರದಾಗಿತ್ತು. ಇನ್ಯಾರಾದರೂ ಮಾಡಿದ್ದರೆ ನಾನು ಒಪ್ಪಿಕೊಳ್ಳುತ್ತಿದ್ದೆ. ಇವರು ನಾವು ಯಾರಾದರೂ ಮಾಡಿದ್ದರೆ ಅದು ಒಪ್ಪಿಕೊಳ್ಳುತ್ತಿದ್ದೆ. ದಯಮಾಡಿ ನಿಮ್ಮ ಆತ್ಮಶೋಧನೆ ಮಾಡಿಕೊಳ್ಳಿ. ಮಾನ್ಯ ದಿನೇಶ್ ಗುಂಡೂರಾವ್ ಹೇಳಿದರು ಮಾನ್ಯ ರಮೇಶ್‌ಕುಮಾರ್‌ರವರು ಹೇಳಿರತಕ್ಕಂಥಾದ್ದು ಇವತ್ತು ನೀವು ಒಂದು ಹೆಜ್ಜೆ ಮುಂದೆ ಇಡುತ್ತೀದ್ದೀರಿ. ನಾಳೆ ಬೆಳಗ್ಗೆ ಇನ್ನೊಂದು ಬಿಲ್ ತರುತ್ತಿದ್ದೀರಿ. ನೀವು ನಿಮ್ಮದೇ ಇನ್ನೊಂದು ಬಿಲ್ ಬರುತ್ತಿದೆ. ಸಿ.ಇ.ಟಿ. ಮೇಲೆ. ಆಗ ನಿಮ್ಮ ವ್ಯೂಡಿಫರ್ ಆಗುತ್ತದೆ. ದಯಮಾಡಿ ಇದನ್ನು ಪರ್ಯಾಲೋಚನೆ ಮಾಡಿಸುವುದಕ್ಕಿಂತ ಮೊದಲೇ ವಿಚಾರ ಮಾಡಿ

ಇನ್ನೊಮ್ಮೆ ತಾವು ಸಬ್‌ಮಿಟ್ ಮಾಡಬೇಕೆಂದು ಹೇಳಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಡಾ॥ ಸುಧಾಕರ್ (ಚಿಂತಾಮಣಿ) ಮಾನ್ಯ ಅಧ್ಯಕ್ಷರೇ ಸರ್ಕಾರಿ ಮೆಡಿಕಲ್ ಕಾಲೇಜನ್ನು ಇವತ್ತು ಅಟಾನಮಸ್ ಮಾಡಿದ್ದಾರೆ. ಯುನಿವರ್ಸಿಟೀಸ್ ಸಹ ಅಟಾನಮಸ್ ಸಹ ಒಂದು ಲೆಕ್ಕದಲ್ಲಿ ಇವತ್ತು. ಅವು ಯಾವ ಪರಿಸ್ಥಿತಿಯಲ್ಲಿವೆ. ಉದಾಹರಣೆ ವಿಶ್ವೇಶ್ವರಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಏನಿದೆ ಇವತ್ತಿಗೂ ಅದಕ್ಕೆ ಗೌರವ ಇದೆ. ಕ್ಯಾಂಪಸ್‌ಗಳಲ್ಲಿ ಇಂಟರ್‌ವ್ಯೂ ಮಾಡಿದಾಗ ಅಲ್ಲಿ ಬಹಳಷ್ಟು ಕಂಪನಿಗಳು ಹೋಗಿ. ಇಂಟರ್‌ವ್ಯೂ ಮಾಡಿದ್ದಾರೆ. ಆದರೆ ಬಹಳಷ್ಟು ವೇಟಿಂಗ್ ಲಿಸ್ಟ್ ಇದೆ. ಒಂದು ವಿಚಾರ ಸರ್ಕಾರ ಅಟಾನಮಸ್ ಮಾಡಿದಾಗ ಅದಕ್ಕೆ ಯಾವುದೇ ರೀತಿಯಿಂದ ಅನುದಾನವನ್ನು ಸರಿಯಾಗಿ ಕೊಡುತ್ತಿಲ್ಲ. ಅದರ ಬಗ್ಗೆ ಸರ್ಕಾರಕ್ಕೆ ಬದ್ಧತೆ ಇರಬೇಕು. ಇನ್ನೊಂದು ಕಡೆ ಇವತ್ತು ತಂತ್ರಜ್ಞಾನದಲ್ಲಿ ಏನು ಆಧುನಿಕತೆ ಬರುತ್ತದೆ ಅದಕ್ಕೆ ತಕ್ಕಂತೆ ನಾವು ಬದಲಾವಣೆ ಆಗಬೇಕು. ಇದರಲ್ಲಿ ಏನು ಅಟಾನಮಸ್ ಕೊಡಬೇಕು ಕಾಲೇಜುಗಳಿಗೆ ಅಂತ ಹೇಳುತ್ತಾರೆ ಅದರಲ್ಲಿ ಕೆಲವು ಕಂಡೀಷನ್ಸ್ ಅದರಲ್ಲಿ ಸಾಮಾಜಿಕ ಮೇನ್‌ಟೇನ್ ಮಾಡಿ ಏನು ಇವತ್ತು ಜಾಗತೀಕತಣವಾಗುತ್ತಿದೆ ಏನು ಇವತ್ತು ಆಡ್ವಾನ್ಸ್‌ಮೆಂಟ್ ಆಗುತ್ತಿದೆ ಅದನ್ನು ಸಹ ನಾವು ಗಮನದಲ್ಲಿಟ್ಟುಕೊಂಡು ಅರದ ಬಗ್ಗೆ ಆಲೋಚನೆ ಮಾಡುವಂತಹ ಒಂದು ವಿಚಾರ.

ಮತ್ತೊಂದು ಕಡೆ ಈ ಸರ್ಕಾರಿ ಸಂಸ್ಥೆಗಳಲ್ಲಿ ಅಟಾನಮಸ್ ಮಾಡಿದ ಸಂದರ್ಭದಲ್ಲಿ ಸರ್ಕಾರ ಅದಕ್ಕೆ ಹೆಚ್ಚಿ ಅನುದಾನವನ್ನು ಕೊಟ್ಟು ನೀವೇ ರೆಕ್ರೂಟ್‌ಮೆಂಟ್ ಮಾಡಿಕೊಳ್ಳಿ. ನೀವೇ ಅಂತರಿಕವಾದ ವ್ಯವಸ್ಥೆ ಮಾಡಿಕೊಳ್ಳುವ ಎನ್ನುವ ವಿಚಾರವಲ್ಲ. ನಾಳೆ ಅದಕ್ಕೆ ಆರ್ಥಿಕವಾದ ಬಲವನ್ನು ಕೊಡಬೇಕಾದರೆ ಸರ್ಕಾರದ ಉದ್ದೇಶವನ್ನು ಇಟ್ಟುಕೊಂಡು ಆ ಸಂಸ್ಥೆಯಲ್ಲಿ ಹೊಸ ತಂತ್ರಜ್ಞಾನವನ್ನು ತಂದಾಗ ಅದಕ್ಕೆ ಬೇಕಾದ ಇನ್‌ಫ್ರಾಸ್ಟ್ರರೆ ಸೌಲಭ್ಯ ಕೊಡುವಂತಹ ಮನೋಭಾವನೆ ಇರಬೇಕು. ವಿಚಾರದಲ್ಲಿ ದಯವಿಟ್ಟು ನಮ್ಮ ಸಚಿವರು ಗಮನಹರಿಸಬೇಕಾಗಿದೆ. ಅಟಾಮನಸ್ ಕೊಡುವ ಸಂರ್ಭದಲ್ಲಿ ಇವತ್ತು; ಸರ್ಕಾರಿ ಸಂಸ್ಥೆಗಳಾದ ಬೆಂಗಳೂರು ಮೆಡಿಕಲ್ ಕಾಲೇಜಿಗೆ ಏನೋಂದು ಗೌರವಿದೆ. ಆದರೆ ಅಲ್ಲಿರುವಂತಹ ಎಕ್ವಿಪ್‌ಮೆಂಟ್ಗಳು ಬಹಳ ಹಳೆಯವು ಖಾಸಗಿ ಸಂಸ್ಥೆಗಳಲ್ಲಿ ಹೇಗೆ ಹೆಚ್ಚಿನ ಅನುಕೂಲವನ್ನು ಮಾಡುತ್ತಾರೆ. ಆ ರೀತಿಯಾಗಿ ಸರ್ಕಾರಿ ಸಂಸ್ಥೆಗಳನ್ನು ನಡೆಸಿಕೊಂಡು ಹೋದಾಗ ಈ ಇಂಬ್ಯಾಲೆನ್ಸ್ ಬಡಮಕ್ಕಳಿಗೆ ಅನಾನುಕೂಲವಾಗುತ್ತದೆಂದು ಏನು ಅನೇಕ

ಸದಸ್ಯರು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ ಸರ್ಕಾರಿ ಸಂಸ್ಥೆಗಳು ಹಾಗೂ ನಮ್ಮಲ್ಲಿರುವ ಶಿಕ್ಷಣ ಅಡ್ಮಿಷನ್ ಪಾಲಿಸಿ ಏನಿದೆ ಅದರಲ್ಲೂ ಬಡ ವಿದ್ಯಾರ್ಥಿಗಳು ಮೆರಿಟ್ ಆಧಾರಿತ ವಿದ್ಯಾರ್ಥಿಗಳು ಈ ಸಂಸ್ಥೆಗಳಲ್ಲಿ ಪ್ರವೇಶ ಪಡೆಯುವಂತಹ ಸಂದರ್ಭದಲ್ಲಿ ಅವರಿಗೂ ಒಂದು ಒಳ್ಳೆಯ ರೀತಿಯಾದ ಎಕ್ಸ್‌ಪೋಜರ್ ಸಿಗುತ್ತದೆ ಇದನ್ನು ಸರ್ಕಾರ ಸಾಕಷ್ಟು ಜಾಗ್ರತೆ ವಹಿಸಿಕೊಂಡು ತರಬೇಕೆಂದು ನಮ್ಮ ಸಚಿವರು ಕೇಳಿಕೊಳ್ಳುವ

ಶ್ರೀ ಎಸ್. ಬಂಗಾರಪ್ಪ(ಸೋರಬ)

ಮಾನ್ಯ ಸಭಾಧ್ಯಕ್ಷರೆ ಈ ಬಿಲ್‌ನ್ನು ಬಗ್ಗೆ ಸಾಕಷ್ಟು ಚರ್ಚೆಗಳಾಗಿವೆ ನಾನು ಎರಡು ವಿಚಾರಗಳನ್ನು ಹೇಳುವುದಕ್ಕೆ ಬಯಸುತ್ತೇನೆ. ಮುಖ್ಯವಾದುದು ವಿಶ್ವಬಾಂಕ್‌ಗೆ ಸಂಬಂಧಿಸಿದ್ದು, ವಿಶ್ವಬಾಂಕ್ ನಮಗೆ ಪಂಡ್ ನೀಡುವುದು It is a Business. It is totally a back proposal. That we are going to adopt. ತಾವೇನು ಹೇಳುತ್ತಿದ್ದೀರೆಂದರೆ. The World Bank Also Insists That The Educational Institutions Selected for The World Bank Projects Should be given Autoymy.

ಇಲ್ಲಿ ವರ್ಲ್ಡ್ ಬ್ಯಾಂಕ್ ಅಟಾನಮಿಯನ್ನು ಯಾರಿಗೆ ಕೋಡುತ್ತೀದ್ದೀರಿ ಪ್ರೇವೇಟ್ ಇನ್‌ಸ್ಟಿಟ್ಯೂಷನ್‌ಗೆ. ನೀವು ವರ್ಲ್ಡ್ ಬಾಂಕ್‌ನಿಂದ ಹಣ ತರುವ ವಿಚಾರವೇನಿದೆ. This is for the Developmental Activities Of Karnataka State Where We Are Creating Assets For The State ಅಲ್ಲಿ ನಾವು ಬ್ಯಾಂಕ್ ಅನ್ನು ಸಾಫ್ಟ್‌ಲೋನಿಗೆ ಉಪಯೋಗ ಮಾಡುತ್ತಿದ್ದೇವೆ ಹೊರತು. Not for the Purpose Of Enhancing The Private Properties. ಇಲ್ಲಿ ವರ್ಲ್ಡ್ ಬ್ಯಾಂಕ್‌ನ ಡೈರೆಕ್ಷನ್ ಮೇಲೆ ನಾವು ಬಿಲ್ ತರುವ ವಿಚಾರವೇನಿದೆ ಇದು ಸಂಪೂರ್ಣವಾಗಿ ವಿರೋಧವಾಗಿರುವುಗಿರುತ್ತದೆ Bank they are doing business. ಅವರು ಎಷ್ಟಕ್ಕೆ ನಿಮಗೆ ಲೋನ್ ಕೋಡುತ್ತಿದ್ದಾರೆ ಡೆವಲಪ್‌ಮೆಂಟ್ ಅಕ್ಟಿವೀಟಿಸ್‌ಗೆ ನಿಮಗೆ ಸಾಫ್ಟಲೋನ್ ಕೊಡುತ್ತೇವೆಂದು ಹೇಳಿಬಿಟ್ಟು ಅದನ್ನು ಇಲ್ಲಿಗೆ ಉಪಯೋಗಿಸಿಕೊಳ್ಳುತ್ತೀರಾ? ಉದಾಹರಣೆ Sathya sai University is a deemed University. But what are the activities they are doing ? ಇಲ್ಲಿ ಮಾಡುವ ಡೀಮ್ಡ್ ಯುನಿವರ್ಸಿಟಿ. ನಿಮಗೆ ಕೋಲಾಬರೇಷನ್ ಮೇಲೆ ಮಾಡುವ ಬಿಸಿನೆಸ್‌ಗೂ ಇಲ್ಲಿಗೂ ಬಹಳ ವ್ಯತ್ಯಾಸವಿದೆ. ನಾನು ತಮ್ಮಲ್ಲಿ ವಿನಂತಿಸುವುದೇನೆಂದರೆ ಈ ಸಿಲಬಸ್ ಬಗ್ಗೆ ಮಾನ್ಯ ಕೃಷ್ಣಪ್ಪನವರು ಏನು ಮುಂದೆಯೇ ಮಾತನಾಡಿದರು ಡೆವಲಪಿಂಗ್ ಕಂಟ್ರೀಸ್ ಅಂಡರ್ ಡೆವಲಪಿಂಗ್

ಕಂಟ್ರೀಸ್‌ಗಳಿರುವ ಉದ್ದೇಶಗಳು ಏನು? ಇಂಜಿನಿಯರಿಂಗ್ ಕಾಲೇಜ್‌ಗಳ ಸಿಲಬಸ್‌ಗಳೇನು ಬಂದಿದ್ದಾವೆ ಅದರ ಮೇಲೆ ಅಟಾನಮಸ್ ಸ್ಟೇಟಸ್ ಕೊಡುವುದು. ಉದಾಹರಣೆ ಯುರೋಪಿಯನ್ ಕಂಟ್ರೀಸ್‌ನಲ್ಲಿ ಏನಾಗಿದೆ? ಯುರೋಪಿಯನ್ ಕಂಟ್ರೀಸ್ ಇದೇ ತರಹ ಅಂಡರ್ ಸ್ಟೇಟ್ ಗೌರ್ನಮೆಂಟ್ ಇದ್ದು ಅಟಾವಮಸ್ ಕೊಟ್ಟು ಅದನ್ನು ಕೊಟ್ಟ ಮೇಲೆ ಇವತ್ತಿನ ಪರಿಸ್ಥಿತಿ ಏನೆಂದರೆ, They are going round the World. ಎಲ್ಲೆಲ್ಲಿ ಸಾಹುಕಾರಿಕೆ ಮಾಡಿದಂತಹ ಮಕ್ಕಳಿದ್ದಾರೋ ಅವರನ್ನು ಇವತ್ತು ಇಂಟರ್‌ವ್ಯೂ ಮಾಡಿಕೊಂಡು ಅದರಲ್ಲೂ ವಿಶೇಷವಾಗಿ ಉತ್ತರ ಭಾರತದಲ್ಲಿರುವ ಎಲ್ಲಾ ಬಿಸನೆಸ್ ಮಕ್ಕಳು ಅಥವಾ ನಮ್ಮ ರಾಜ್ಯದಲ್ಲಿರುವ ಟಾಪ್ ಆಫೀಶಿಯಲ್ ಟಾಪ್ ಬಿಸೆನಸ್ ಮಕ್ಕಳು ಯುರೋಪಿನಲ್ಲಿ ಇವತ್ತು ಹಣ ಕೊಟ್ಟು ಆ ಯೂನಿವರ್ಸಿಟಿನಲ್ಲಿ ಓದಿಸುತ್ತಿದ್ದಾರೆ ಅಂದರೆ ಉದ್ದೇಶವಿರುವುದು ಅಟಾನಮಸ್ ಮಾಡುವುದು ನಮ್ಮ ಮಾನ್ಯ ಮಾಧುಸ್ವಾಮಿಯವರು ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದರು. ಅಂದರೆ ಇದರೊಳಗಡೆ ಏನು ವಿಚಾರಗಳನ್ನು ಮಾತನಾಡಬೇಕೆಂದಿದ್ದೀರಿ ಅದನ್ನು ಇದರಲ್ಲಿ ಪ್ರಸ್ತಾಪ ಮಡಬೇಕೆನ್ನುವ ವಿಚಾರವನ್ನು ಹೇಳಿದರು. ಅಂದರೆ ಇದು ಒವರ್‌ಆಲ್ ಸುಮ್ಮನೆ ಅಟಾನಮಸ್ ಏತಕೋಸ್ಕರ ಕೋಡುತ್ತಿದ್ದೀರಿ ಎಂಬುದರ ಬಗ್ಗೆ ಇನ್ನು ಸ್ವಲ್ಪ ವಿಶಾಲವಾಗಿ ಹೇಳುವ ಅಗತ್ಯತೆ ಇದೆ. ಇದನ್ನು ವಿಶ್ವೇಶ್ವರಯ್ಯ ಟೆಕ್ನಾಲಜಿ ಯುನಿವರ್ಸಿಟಿಯೊಳಗೆ ಬರೀ ಸಿಲಬಸ್‌ಗೋಸ್ಕರ ತರುವುದೆಂದರೆ ನೀವು ಸಿಲಬಸ್ ಮಾಡಿಕೊಂಡಿರುವುದು ಅಥವಾ ಕಾಲೇಜ್ ಓಪನ್ ಮಾಡಿಕೊಂಡಿರುವುದು. For the Development of State and the country. ಇಲ್ಲಿರುವ ಸ್ಟೂಟೆಂಟ್ಸ್ ಎಲ್ಲಿ ಕೆಲಸಕ್ಕೆ ಹೋಗುತ್ತಿದ್ದಾರೆ? ಎಲ್ಲಾ ನಿಮ್ಮ ಸಾಫ್ಟವೇರ್ ಇಂಜಿನಿಯರ್ಸ್ ಎಲ್ಲಾ ಬೇರೆ ಕಡೆ ವರ್ಕ್ ಮಾಡುತ್ತಾರೆ. ಈಗ ನಾನು ನಮ್ಮ ರಾಜೇಂದ್ರನ್‌ರವರು ಹೇಳಿದ್ದನ್ನು ಡಿಫರ್ ಮಾಡಬೇಕಾಗುತ್ತದೆ. ಸೈನ್ಸ್ ಅಂಡ್ ಟೆಕ್ನಾಲಜಿಯನ್ನು ನಾನು ಕಲಿತುಕೊಂಡು ಬರುವ ಸಂದರ್ಭ. ಜಪಾನಿಗೆ ಅಥವಾ ಚೈನಾಗೆ ಹೋಗಿ ಅಲ್ಲಿ. Japan Is A Developed Country ಹಾಗಾಗಿ ಡೆವಲಪ್ ಕಂಟ್ರಿಸ್ ಪರಿಸ್ಥಿತಿಯೇ ಇವತ್ತು ಅದ್ವಾನವಾಗಿರಬೇಕಾದರೆ ಈಗ ನೀವು ಅಟಾನಮಸ್ ಸೇಟಸ್ ಕೊಟ್ಟರೆ ಏನಾಗುತ್ತದೆ ಈ ಎಜುಕೇಷನ್ ಇನ್‌ಸಿಟ್ಯೋಷನ್. ಅದರಲ್ಲೂ ವಿಶೇಷವಾಗಿ ಪ್ರೈವೇಟ್ ಎಜ್ಯೂಕೇಷನ್ ಇನ್‌ಸ್ಟಿಟ್ಯೂಷನ್ಸ್ ಏನಿವೆ ಇದನ್ನು ನಾವು ಸಾಮಾಜಿಕ ಚಿಂತನೆಯನ್ನು ಸಾಮಾಜಿಕ ನ್ಯಾಯ ಕೊಡುವ ವಿಚಾರದಲ್ಲಿ ವಿರುದ್ಧವಾಗಿ ಹೋಗುತ್ತೀರಿ ಎನ್ನುವುದು ಇದರಿಂದ ಸ್ಪಷ್ಟವಾಗಿ ಗೋಚರವಾಗಿ ನಾನು ತಮ್ಮಲ್ಲಿ ವಿನಂತಿ

ಮಾಡಿಕೊಳ್ಳುವುದೇನೆಂದರೆ ಯಾವುದೇ ಕಾರಣಕ್ಕೂ don't make this as M.N.Cs. Multi National Institutions ಆಗಿ ಮಾಡುವುದಕ್ಕೆ ಹೋಗಬೇಡಿ ಇದರ ಬಗ್ಗೆ ಈಗಾಗಲೇ ಹಿರಿಯರಾದ ಮಾನ್ಯ ರಮೇಶಕುಮಾರ್‌ರವರು ವಿಚಾರವನ್ನು ಹೇಳಿದ್ದಾರೆ. ಉದಹರಣೆ ಹೇಳಬೇಕಾದರೆ ಇವತ್ತು ಸಾಫ್ಟ್ ಡ್ರಿಂಕ್ಸ್ ಏನಾಯಿತು. ಲೋಕಲ್ ಎಲ್ಲವೂ ಕೂಡ ಹೋದವು. Only Multi-Nationals Copanies have come into all the sectors.

ಹಾಗಾಗಿ ಎಜ್ಯುಕೇಷನ್ ಇನ್ಸ್ಟಿಟ್ಯೂಷನ್ಸ್ ಅನ್ನು ಯಾವುದೇ ಕಾರಣಕ್ಕೂ ಮಲ್ಟಿನ್ಯಾಷನಲ್ ಎಜ್ಯುಕೇಷನ್ ಇನ್‌ಸ್ಟಿಟ್ಯೂಷನ್ ಮಾಡುವುದಕ್ಕೆ ಅವಕಾಶ ಕೊಡಬಾರದು. ನಾನು ಮುಂಚೆಯೇ ಲಿಬರೇಷನ್ ಅಂಡ್ ಗ್ಲೋಬ್‌ಲೈಜೆಷನ್ ಎಂದು ಬರೆದು ಇಟ್ಟೆ. ಹಾಗಾಗಿ ಇದು ಯಾವುದೇ ಕಾರಣಕ್ಕೂ ಸೂಕ್ತವಾಗಿರುವುದಲ್ಲ. ಈ ಬಗ್ಗೆ ಖಡಾಖಂಡಿತವಾಗಿ ಮತ್ತೊಮ್ಮೆ ಪುನರ್ ವಿಮರ್ಶೆ ಮಾಡಬೇಕಾಗುತ್ತದೆ. ಇದನ್ನು ಯಾವುದೇ ಕಾರಣಕ್ಕೂ ಮೆಜಾರಿಟಿ ಇದೆ ಎಂದು ಪಾಸ್ ಮಾಡುವುದು ಮತ್ತೊಂದು ಮಾಡಿದರೆ ಸಾಮಾಜಿಕ ಚಿಂತನೆಗೆ ಇದು ವಿರೋಧವಾಗಿರುವಂಥಾದ್ದು. ಇದನ್ನು ಖಡಾಖಂಡಿತವಾಗಿ ನಾವು ವಿರೋಧ ಮಾಡುತ್ತೇವೆ. ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ವೈದ್ಯನಾಥ್ ಪಾಟೀಲ್; (ಚಿಂಚೋಳಿ) ಅಧ್ಯಕ್ಷರೇ 200 ವರ್ಷಗಳ ಹಿಂದೆ ಈಸ್ಟ್ ಇಂಡಿಯಾ ಕಂಪನಿ ವ್ಯಾಪಾರಕ್ಕೆ ಬಂದು ಈ ದೇಶ ಆಳಿ ನಮ್ಮವರನ್ನು ಗುಲಾಮರನ್ನಾಗಿ ಮಾಡಿ ಬಿಟ್ಟರು ಹೊಸದಾಗಿ ಮಲ್ಟಿನ್ಯಾಷನಲ್ ಕಂಪನಿಗಳು ಬರುತ್ತಿವೆ. ಅವರು ಈ ದೇಶವನ್ನು ಗುಲಾಮಗಿರಿಗೆ ತಳ್ಳುವ ಹೊಂಚು ಹಾಕಿಕೊಳ್ಳುತ್ತಿದ್ದಾರೆ. ಇವತ್ತು ಪ್ರತಿಯೊಂದು ಕ್ಷೇತ್ರದಲ್ಲಿ ವರ್ಲ್ಡ್ ಬಾಂಕ್ ಅಥವ ಬೇರೆ ಇಂಟರ್‌ನ್ಯಾಷನಲ್ ಬ್ಯಾಂಕ್‌ನವರು ಕಂಡಿಷನ್ಸ್ ಹಾಕುತ್ತಾರೆ. ನಮ್ಮ ಹಣ ಕೊಡಬೇಕಾದರೆ ಎಲ್ಲಿ ಖರ್ಚು ಮಾಡಬೇಕು. ರೈತರಿಗೆ ಸಬ್ಸಿಡಿ ಕೊಡಬಾರದು. ಫುಡ್‌ಗೆ ಸಬ್ಸಿಡಿ ಕೊಡಬಾರದು ಅಂತ. ಅಂದರೆ ನಮ್ಮ ವ್ಯವಸ್ಥೆಯನ್ನು ಅಸ್ತವ್ಯಸ್ತ ಮಾಡುವ ಎಲ್ಲಾ ಕಂಡಿಷನ್ಸ್ ಹಾಕಿರುತ್ತಾರೆ. ನಾವೆಲ್ಲಾ ಒಪ್ಪಿಕೊಳ್ಳುತ್ತೇವೆ, ಈಗ ಅಗ್ರಿಕಲ್ಚರ್ ಮೇಲೆ ಪರಿಣಾಮವಾಗಿದೆ. ನಾವೇನು ಔಷಧಿಗಳನ್ನು ಖರೀದಿ ಮಾಡುತ್ತೇವೆ ಅದರ ಮೇಲೆ ದೊಡ್ಡ ಪರಿಣಾಮವಾಗಿದೆ. ಸಾಮಾನ್ಯ ಜನರು ಔಷಧಿಗಳನ್ನು ಖರೀದಿ ಮಾಡಲು ಸಾಧ್ಯವಾಗುತ್ತಿಲ್ಲ. ಎಜ್ಯುಕೇಷನ್ ಮೊದಲೇ ದುಬಾರಿಯಾಗಿದೆ. ಮತ್ತೆ ಅಂತಹ ಕಂಡಿಷನ್ಸ್‌ಗಳಿಗೆಲ್ಲಾ ಒಪ್ಪಿಕೊಂಡರೆ ಮತ್ತೇ ನಾವು ಎಜ್ಯುಕೇಷನ್‌ನಲ್ಲೂ ಗುಲಾಮರಾಗುತ್ತೇವೆ. ವಿಶೇಷವಾಗಿ ನಮ್ಮ ಬಿಜೆಪಿ ಬಾಂಧವರು ಅವರ

ಇನ್‌ಫ್ಲೂಯನ್ಸ್‌ನಿಂದ ತರುತ್ತಾರೆಂದರೆ ತಪ್ಪು ಎನಿಸುತ್ತದೆ. ಅವರು ಪುನರ್ ವಿಚಾರ ಮಾಡಿ ಈ ಬಿಲ್ ಅನ್ನು ವಿತ್‌ಡ್ರಾ ಮಾಡಿಕೊಳ್ಳಬೇಕೆಂದು ನಾನು ಹೇಳಬಯಸುತ್ತೇನೆ.

ಶ್ರೀ ಸಿ.ಬಿ. ಕೃಷ್ಣೈಬೈರೇಗೌಡ(ದೇಮಗಾನ್) ; ಮಾನ್ಯ ಅಧ್ಯಕ್ಷರೆ ತಮ್ಮ ಮುಖಾಂತರ ಸರ್ಕಾರದ ಗಮನಕ್ಕೆ ತರಬಯಸುತ್ತೇನೆಂದರೆ ಇವತ್ತು ಪರ ಹಾಗೂ ವಿರೋಧವಾಗಿ ವಾದ ನಡೆಯುತ್ತಿದೆ. ನಾನು ಖಾಸಗಿ ಅಟಾನಮಸ್ ಯುನಿವರ್ಸಿಟಿ ವಿದೇಶದಲ್ಲಿ ಓದಿದ್ದೇನೆ. ಅಲ್ಲಿ ಯಾವ ರೀತಿಯಾಗಿ ವಿದ್ಯಾಭ್ಯಾಸ ಒಳ್ಳೆಯ ಯುನಿವರ್ಸಿಟಿಯಲ್ಲಿ ಸಿಗುತ್ತದೆ ಎಂಬುದನ್ನು ಕಣ್ಣಾರೆ ಅನುಭವಿಸಿದ್ದೇನೆ ಅದೇ ರೀತಿಯಾಗಿ ನಮ್ಮ ದೇಶದಲ್ಲಿ ಅಟಾನಮಿ ಕೊಟ್ಟಾಗ ಯಾವ ರೀತಿಯ ಒಂದು ಕೆಟ್ಟ ವ್ಯವಸ್ಥೆ ನಿರ್ಮಾಣವಾಗಿತ್ತು ಎಂಬುದನ್ನು ಸಹ ಉತ್ತರಪ್ರದೇಶ ಜಾರ್‌ಖಂಡ್ ಅಲ್ಲೆಲ್ಲಾ ನಡೆದಿರುವುದನ್ನು ನೋಡಿದ್ದೇವೆ. ಮುಖ್ಯವಾಗಿ ನಾವು ಕವಲುದಾರಿಯಲ್ಲಿ ಸಿಕ್ಕಿದ್ದೇವೆ ಇವತ್ತು ತಮಿಳುನಾಡಿನ ಅಣ್ಣಾ ಯುನಿವರ್ಸಿಟಿಗೆ ಅಟಾನಮಿ ಕೊಟ್ಟಾಗ ಅಲ್ಲಿ ಒಳ್ಳೆಯ ಕೆಲಸವನ್ನು ಮಾಡುತ್ತಿದ್ದಾರೆ. ಸಾಮಾಜಿಕ ನ್ಯಾಯವನ್ನು ಸಹ ಎತ್ತಿಹಿಡಿದಿದ್ದಾರೆ. ಆದರೆ ಇವತ್ತು ಸರ್ಕಾರ ಏನೇ ತೀರ್ಮಾನವನ್ನು ತೆಗೆದುಕೊಂಡರೂ ಕೂಡ ನಮ್ಮ ಶಿಕ್ಷಣದ ಗುಣಮಟ್ಟದಲ್ಲಿ ಸಾಕಷ್ಟು ಸುಧಾರಣೆಯಾಗಬೇಕೆನ್ನುವುದು ನನ್ನ ಸ್ಪಷ್ಟ ಅಭಿಪ್ರಾಯ. ಅಂತರ ರಾಷ್ಟ್ರೀಯಮಟ್ಟದಲ್ಲಿ ಒಳ್ಳೆಯ ಶಿಕ್ಷಣ ಸಿಗುತ್ತದೆ. ಅದು ನಮ್ಮ ದೇಶದಲ್ಲಿ ಎಲ್ಲರಿಗೂ ಸಿಗುವಂತಾಗಬೇಕು. ನಮ್ಮ ದೇಶದಲ್ಲಿ ಸಿಗಬೇಕು. ಸಾಮಾಜಿಕ ನ್ಯಾಯದ ಬಗ್ಗೆ ಇವತ್ತೇನು ಎಲ್ಲ ಸದಸ್ಯರು ಕಳಕಳಿಯನ್ನು ವ್ಯಕ್ತಪಡಿಸುತ್ತಿದ್ದಾರೆ ಅದನ್ನು ಕಾಪಾಡಿಕೊಂಡು ಆ ಅಂತರ ರಾಷ್ಟ್ರೀಯ ಗುಣಮಟ್ಟದ ವಿದ್ಯಾಭ್ಯಾಸವನ್ನು ಬೇರೆ ದೇಶವನ್ನು ನಮ್ಮ ವಿದ್ಯಾರ್ಥಿಗಳೇನು ಹುಡುಕಿಕೊಂಡು ಹೋಗುತ್ತಿದ್ದಾರೆ. ಹಾಗೆ ಹುಡುಕಿಕೊಂಡು ಹೋಗುವುದನ್ನು ನಿಲ್ಲಿಸಿ, ಅದು ಇಲ್ಲೇ ದೊರಕುವಂತೆ ಮಾಡಬೇಕು. ಆದರೆ ಅಣ್ಣಾ ಯುನಿವರ್ಸಿಟಿ ಚೆನ್ನಾಗಿ ಆಗಿದೆ. ಆದರೆ ಎಷ್ಟು ಯುನಿವರ್ಸಿಟಿಗಳು ಕೆಟ್ಟ ದಾರಿಗನ್ನು ಹಿಡಿದಿದ್ದಾವೆ ಎಂಬ ನಿದರ್ಶನಗಳು ನಮ್ಮ ಮುಂದಿದೆ. ಹಿಂದೆ ಡಿ. ಮಂಜುನಾಥ್‌ರವರ ಹತ್ತಿರ ಮಾತನಾಡುವಾಗ ಅವರು ಈ ಮಾತನ್ನು ಹೇಳಿದರು ಒಂದೆರಡು ಯುನಿವರ್ಸಿಟಿಗಳು ಚೆನ್ನಾಗಿ ಆಗಿದ್ದಾವೆ. ಆದರೆ ಉತ್ತರ ಪ್ರದೇಶ ಜಾರ್ಖಂಡ್ ಇಲ್ಲೆಲ್ಲಾ ಒಂದೊಂದು ರೂಂಗೆ ಯುನಿವರ್ಸಿಟಿ ಎಂದು ಬೋರ್ಡ್ ಹಾಕಿಕೊಂಡಿದ್ದಾರೆ ಎಂದು. ಇಂಡಿಯಾ ಟುಡೇ ಮ್ಯಾಗೆಜ್‌ಸ್‌ನಲ್ಲಿ ಇದರ ಬಗ್ಗೆ ಆರ್ಟಿಕಲ್ ಬಂದಿತ್ತು. ಸುಮ್ಮನೇ ಒಂದು ರೂಮಿಗೆ ಒಂದು ಯೂನಿವರ್ಸಿಟಿ ಎಂದು ಬೋರ್ಡ್. ಅದಕ್ಕೆ ದೊಡ್ಡ ದೊಡ್ಡ ಪಬ್ಲಿಸಿಟಿ ಮೇಲೆ ಸಾಕಷ್ಟು

ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಮಕ್ಕಳೆನ್ನೆಲ್ಲಾ ತಪ್ಪು ದಾರಿಗೆ ಎಳೆದಾಗ ಆಗ ಸುಪ್ರೀಂ ಕೋರ್ಟ್ ಮಧ್ಯೆ ಪ್ರವೇಶ ಮಾಡಿತ್ತು. ಈ ರೀತಿಯ ಬೆಳವಣಿಗೆ ತಪ್ಪಿಸಲಿಕ್ಕೆ ನೀವೇನು ಮಾಡುತ್ತೀರಾ. ಆ ಪ್ರಶ್ನೆ ಇದೆ ತಪ್ಪು ದಾರಿಗೆ ಏಳೆಯುವುದನ್ನು ಅಡ್ಡ ಹಾಕಲಿಕ್ಕೆ ನೀವೇನು ಮಾಡುತ್ತೀರಿ. ಮತ್ತೇ ತಾವು ತರುತ್ತೀರುವ ಉದ್ದೇಶ ಏನು. ಕಾಲೇಜುಗಳ ಮಧ್ಯೆ ಒಳ್ಳೆಯ ಕಾಂಪಿಟೇಷನ್‌ಬರಬೇಕು. ಒಂದು ಒಳ್ಳೆಯ ವಿದ್ಯಾಬ್ಯಾಸವನ್ನು ಅವರು ಕೊಡುವ ವ್ಯವಸ್ಥೆ ಆಗಬೇಕು ಎಂದು ತಂದಿದ್ದೀರಿ. ಕಾಂಪಿಟೇಷನ್‌ಗೆ ಎನ್‌ಕರೇಜ್ ಮಾಡಲಿಕ್ಕೆ ಏನು ಮಾಡುತ್ತೀರಿ ಮತ್ತು ಈ ತಪ್ಪು ದಾರಿಗೆ ಹಿಡಿಯಲಿಕ್ಕೆ ಅಡ್ಡ ಮಾಡಲಿಕ್ಕೆ ನಿಮ್ಮಲ್ಲಿ ಏನು ಅಸ್ತ್ರ ಇದೆ? ಈ ಬಿಲ್‌ನಲ್ಲಿ? ಎನ್ನುವುದಕ್ಕೆ ನೀವು ಸ್ಪಷ್ಟೀಕರಣ ಕೊಡಬೇಕೆಂದು ತಮ್ಮ ಮೂಲಕ ಅವರನ್ನು ಕೇಳಬಯಸುತ್ತೇನೆ.

ಶ್ರೀ ಎಸ್. ಎಲ್. ಧರ್ಮೇಗೌಡ (ಬೀರೂರು): ಮಾನ್ಯ ಅಧ್ಯಕರೆ ದಯಮಾಡಿ ಈ ಬಿಲ್ ಅನ್ನು ಮಂಡಿಸುತ್ತಿದ್ದೇವೆ. ಜೊತೆಯಲ್ಲಿ ನಾವು ರೂಲಿಂಗ್ ಪಾರ್ಟಿಯವರು ನೀವು ಅಪೋಸಿಷನ್ ಪಾರ್ಟಿ ಎನ್ನುವುದಕ್ಕಿಂತಲ್ಲೂ ಇಲಿ ಪಕ್ಷಾತೀತವಾಗಿ ನಾನು ಹೇಳುತ್ತಿರತಕ್ಕದ್ದು. ಏಕೆಂದರೆ ಬಹಳಷ್ಟು ಹಿರಿಯರು ಅನುಭವಿಗಳು ಮಾತನಾಡಿದ್ದಾರೆ. ನಾನು ಅದನು. ಹೇಳಿದೆ. ನಮ್ಮ ಮಾನ್ಯ ರಮೇಶ ಕುಮಾರ್ ಅವರು ಹೇಳಿದಂತಹ ಮಾತುಗಳು ನನ್ನ ಹೃದಯಕ್ಕೆ ಬಹಳ ಮುಟ್ಟುವಂತಹ ಮಾತಾಗಿತ್ತು. ಅಂತಹ ವಿಚಾರಗಳಲ್ಲಿ ಈಗೇನು ತಾವು ಸ್ವಾಯತ್ತತೆ ತರಬೇಕು ಎಂದು ಹೇಳಿ ಬಿಲ್ಲನ್ನು ತರುತ್ತಿದ್ದೀರಿ ನಾಳೆ ನಮ್ಮ ಬಡ ಮಕ್ಕಳಿಗೇ ಆಗಲಿ, ನಮ್ಮ ಸ್ವಾಯತ್ತತೆಗೆ ಧಕ್ಕೆ ಬರತಕ್ಕದ್ದೇ ಆಗಲಿ, ಮತ್ತೆ ನಮಗೆ ಅದರಲ್ಲಿ ಬದ್ಧತೆ ಇಲ್ಲದೆ ಇರತಕ್ಕದ್ದು ಆದಾಗ ಇದರ ಬಗ್ಗೆ ಸ್ವಲ್ಪ ಆಲೋಚನೆ ಮಾಡಬೇಕಾಗುತ್ತದೆ. ಮಾನ್ಯ ಸಚಿವರು ಪಕ್ಷಾತೀತವನ್ನು ಮರೆತು ನಾವು ಬಿಲ್ಲನ್ನು ಮಂಡಿಸಿ ಬಿಟ್ಟಿದ್ದೇವೆ. ನಮ್ಮ ಗೌರವದ ಪ್ರಶ್ನೆ ಇದು ಪಾಸ್ ಆಗಬೇಕು ಎನ್ನುವುದಕ್ಕಿಂತಲ್ಲೂ ನಮ್ಮ ಹಿರಿಯರು ಏನು ಮಾತನಾಡಿದ್ದಾರೆ ಅದನ್ನು ಗಮನಿಸಿ ತಾವು ದಯಮಾಡಿ ಉತ್ತರ ಹೇಳಬೇಕೆಂದು ತಮ್ಮಲ್ಲಿ ಬಯಸುತ್ತೇನೆ.

ಶ್ರೀ ಎಚ್. ಶಂಕರಮೂರ್ತಿ (ಉನ್ನತ ಶಿಕ್ಷಣ ಸಚಿವರು): ಮಾನ್ಯ ಅಧ್ಯಕ್ಷರೆ ಬಹಳ ಒಳ್ಳೆಯ ಚರ್ಚೆ ನಡೆದಿದೆ. ಸುಮಾರು 15.16 ಗೌರವಾನ್ವಿತ ಸದಸ್ಯರು ತಮ್ಮ ಅಭಿಪ್ರಾಯಗಳನ್ನು ಹೇಳಿದ್ದಾರೆ. ನಾನು ಒಂದೆರಡು ವಿಷಯಗಳನ್ನು ಸಭೆಯ ಗಮನಕ್ಕೆ ತರಬೇಕೆಂದು ಅನ್ನಿಸುತ್ತಿದೆ. ನಾನು ಇವತ್ತು ಏನು ಒಂದು ಬಿಲ್ಲನ್ನು ತಂದಿದ್ದೇನೆ ಇದನ್ನು ನಮ್ಮ ಸರ್ಕಾರ ಬಂದ ಮೇಲೆ

ತಯಾರು ಮಾಡಿದ್ದು ಅಲ್ಲ. ಹಿಂದಿನ ಸರ್ಕಾರ ಇದನ್ನು ತಯಾರು ಮಾಡಿತ್ತು. ಆರ್ಡಿನೆಸ್ ತರಬೇಕು ಎಂದು ಹೇಳಿ ಪ್ರಯತ್ನ ನಡೆಸಿತ್ತು.

ಆದರೆ ಆರ್ಡಿನೆಸ್ ತರಲಿಕ್ಕೆ ಆಗಲಿಲ್ಲ. ಸರ್ಕಾರ ಹೋಯಿತು. ಹಾಗಾಗಿ ಈ ಬಿಲ್ ತರಬೇಕಾದಂತಹ ಜವಾಬ್ದಾರಿ ನನ್ನ ಮೇಲೆ ಬಂದಿದೆ. ಇದು ಮೋದಲನೆಯದು. ಪೂರ್ತಿ ನಾನು ಹೇಳುವುದನ್ನು ಕೇಳಿ ಸಾರ್. ನಾನು ಹೇಳಿದ್ದು ಕೇಳುವುದಿಲ್ಲ. ಎಂದರೆ ಹೇಗೆ ? 15–16 ಜನ ಸದಸ್ಯರು ಮಾತನಾಡಿದ್ದನ್ನು ನಾನು ಪೂರ್ತಿಯಾಗಿ ಕೇಳಿದ್ದೇನೆ. ನಾನು ಮಧ್ಯೆ ಏನೂ ಹೇಳಲಿಲ್ಲ. ಇದು ಬಹಳ ಗಂಭೀರವಾದ ವಿಚಾರ. ನಮ್ಮ ರಾಜ್ಯದ ಮಕ್ಕಳಿಗೆ ಎಲ್ಲಿ ಎಂಟ್ರನ್ಸ್‌ನಲ್ಲಿ ಈ ತರಹ ಆಟೋನಮಸ್ ಕೊಟ್ಟಿರುವುದರಿಂದ ಅನ್ಯಾಯ ಆಗಬಹುದು ಎಂಬ ವಿಚಾರವನ್ನು ವ್ಯಕ್ತ ಪಡಿಸಿದ್ದೀರಿ, ನಾನು ಇದರೊಳಗೆ ಸೇರಿಸಿದ್ದೇನೆ. ಸೀಟುಗಳನ್ನು ತುಂಬುವುದಾಗಿ ಸ್ಟೇಟ್ ಎಂಟ್ರೆನ್ಸ್ ಪಾಲಿಸಿ ಆಧಾರದ ಮೇಲೆ ತುಂಬುವುದು ಮತ್ತೆ ನಮಗೆ ರಿಜವೇಸೇಷನ್ ವಿಚಾರ ಇದೇ. ಅದರ ಬಗ್ಗೆ ಹೇಳುತ್ತೇನೆ. ನಾಳೆ ರಿಜರ್ವೇಷನ್ ಬಗ್ಗೆ ತರುತ್ತಿದ್ದೇನೆ. ಆ ರಿಸವೇಷನ್. ಅನ್ನು ಅವರು ಪಾಲಿಸಲೇಬೇಕು. ರಿಸವೇಷನ್ ಅನ್ನು ಧಾಟಿ ಅವರಿಗೆ ಖುಷಿ ಬಂದವರಿಗೆ ಕೊಡಲಿಕ್ಕೆ ಬರುವುದಿಲ್ಲ. ಅವರು ರಿಸರ್ವೇಷನ್ ಫಾಲೋ ಮಾಡಲೇಬೇಕು. ಒಂದೆರಡು ವಿಷಯಗಳನ್ನು ತಾವು ದಯಾಮಾಡಿ ತಿಳಿದುಕೊಳ್ಳಲೇಬೇಕಾಗುತ್ತದೆ. ಮತ್ತೆ ಈ ಕಾಲೇಜು ನಮ್ಮ ಕರ್ನಾಟಕ ಯುನಿರ್ಸಿಟಿ ಆಕ್ಟ್ ಪ್ರಕಾರ ಇದೆ. ಹಾಗೆ ನಮ್ಮ ಹಾಸನದಲ್ಲಿ ಆ ಆಕ್ಟ್ ಪ್ರಕಾರ ಒಂದು ಡೀಮ್ಡ್ ಕಾಲೇಜು ಇದೆ. ಆಟೋನಮಸ್ ಕಾಲೇಜು ಈಗಾಗಲೇ ನಮ್ಮ ರಾಜ್ಯದಲ್ಲಿದೆ. ಕರ್ನಾಟಕ ಯೂನಿರ್ಸಿಟಿಯೊಳಗೆ ಇದ್ದದ್ದು ಈ ವಿಶ್ವೇಶ್ವರಯ್ಯ ಟೆಕ್ನಿಕಲ್ ಯೂನಿರ್ಸಿಟಿ ಮಾಡುವಾಗ ಅದು ಬಿಟ್ಟು ಹೋಯಿತು. ಅದು ಯಾಕೆ ಬಿಟ್ಟು ಹೋಗಿತೋ ಗೋತ್ತಿಲ್ಲ. ಅದನ್ನು ವಾಪಸ್ ಇಂಟ್ರಡ್ಯೂಸ್ ಮಾಡಬೇಕು ಅದನ್ನು ತರಬೇಕು ಎನ್ನುವ ಕಾರಣಕ್ಕೋಸ್ಕರ ಇದನ್ನು ತಂದಿರುವುದೇ ಹೊರತು ಇದರಿಂದ ಬಹಳ ದೊಡ್ಡ ಅನಾಹುತ ಬದಲಾವಣೆ ಆಗುತ್ತದೆ ಎಂದು ನನಗೆ ಅನ್ನಿಸುವುದಿಲ್ಲ. ಈಗಾಗಲೇ ನಮ್ಮಲ್ಲಿ ಇದೇ ಕರ್ನಾಟಕ ಯೂನಿವರ್ಸಿಟಿ ಆಕ್ಟ್‌ನ ಸ್ಟ್ಯಾಟಿಟ್ಯೂನೊಳಗೆ ಈಗಲೂ ಇದೆ. ಈಗ ಇದೆ ಎಂದು ನಾನು ಹೇಳುತ್ತಿಲ್ಲ. ಈ ವಿಟಿಯುನಲ್ಲಿ ತರಬೇಕು ಎಂದು ತರುತ್ತಿರತಕ್ಕದ್ದು ಮತ್ತೆ ಇದರ ಸ್ಟ್ರಕ್ಚರ್ ಹೇಗಿರುತ್ತದೆ? According to State Policy Applicable to all other Engineering Colleges ಹೇಗಿರುತ್ತದೋ ಅದೇ ತರಹ ಇರುತ್ತದೆ ಅದರೊಳಗೆ ಏನೂ ವ್ಯಾತ್ಯಾಸ ಇರುವುದಿಲ್ಲ. ಈ ಅಕಾಡೆಮಿಕ್ ಅಟಾನಮಿ ನಾವು ಕೊಡುತ್ತಿರಕ್ಕದ್ದು ಅಕಾಡೆಮಿಕ ಅಟಾನಮಿಯನ್ನು ನಾವು ಯಾರಿಗೆ ಕೊಡುತ್ತೇವೆ?

ಈಗ already ವಿಟೀಯುಗೆ ಅಫಿಲಿಯೇಷನ್ ಆಗಿದ್ದಾರೆ. ಕಾಲೇಜಿನವರಿಗೆ ಬೇರೆಯವರಿಗೆ ಕೊಡಲಿಕ್ಕೆ ಬರುವುದಿಲ್ಲ. ಅವರಿಗೆ ನಾವು ಕೊಡುವುದು. ಅವರಿಗೆ ಕೊಡುತ್ತೇವೆ. They come under Statute ನಮ್ಮ ನೀತಿ ನಿಯಮಾವಳಿಗಳೇ ಇರುತ್ತವೆ, ವಿಶ್ವೇಶ್ವರಯ್ಯ ಯೂನಿವರ್ಸಿಟಿ ನಮ್ಮಿಂದ ದೂರ ಮಾಡುತ್ತಿಲ್ಲ, ವಿಶ್ವೇಶ್ವರಯ್ಯ ಯೂನಿವರ್ಸಿಟಿಗೆ ಒಂದು ಅಧಿಕಾರ ಕೊಡುತ್ತಿದ್ದೇವೆ. ಯಾವುದಾದರೂ ಒಂದು ಕಾಲೇಜಿಗೆ ಒಂದು ಆಟೋನಮಿ. ಕೊಡತಕ್ಕಂಥ ಒಂದು ಜವಾಬ್ದಾರಿ ಆದಕ್ಕೆ ಒಂದು ಅಕಾಡೆಮಿ ಅಟಾನಮಿ ಕೊಡತಕ್ಕಂಥದ್ದು ಇದರಿಂದ ಏನಾಗುತ್ತದೆ? ಹೊಸ ಹೊಸ ಸಬ್ಜೆಕ್ಟ್‌ಗಳು ಬರುತ್ತವೆ. ಹೊಸ ಹೊಸ ಅವಿಷ್ಕಾರಗಳು ಪ್ರಪಂಚದಲ್ಲಿ ಬಂದಾಗ ಪ್ರತಿ ಒಂದು ಬಾರಿ ನಮ್ಮನ್ನು ಬಂದು ಕೇಳಬೇಕಾದ್ದಿಲ್ಲ. ಹೊಸ ಸಬ್ಜೆಕ್ಟ್ಸ್‌ಗಳನ್ನು ಇಂಟ್ರಡ್ಯೂಸ್ ಮಾಡಬಹುದು. ನಮ್ಮ ಮಕ್ಕಳಿಗೆ ಎಲ್ಲಾ ಜ್ಞಾನ ಬಂಡಾರ ಓಪನ್ ಮಾಡುವುದಕ್ಕೆ ಅನುಕೂಲ ಆಗುತ್ತದೆ. ಇದು ಬಹಳ ಒಳ್ಳೆಯದು ಆಟೋನಮಸ್ ಕಾಲೇಜು ಅಂದರೆ ಅಧ್ಯಕ್ಷರೆ They are not deemed Univercities ಆಟೋಮನಸ್ ಕೊಡುತ್ತೇನೆ ಅಂದರೆ ಡೀಮ್ಡ್ ಯೂನಿಸರ್ಸಿಟಿ ಅಲ್ಲ. ಡೀಮ್ಡ್ ಯೂನಿರ್ಸಿಟಿ ವಿಚಾರ ನಾನು ಇಲ್ಲಿ ಪ್ರಸ್ತಾಪ ಮಾಡುತ್ತಿಲ್ಲ. ಆ ಕಾಲೇಜುಗಳಿಗೆ ಡಿ ಅಟಾನಮಿ ಕೊಡತಕ್ಕಂಥ ಅಧಿಕಾರವನ್ನು ನನ್ನ ಯೂನಿರ್ಸಿಟಿಗೆ ಅಂದರೆ ವಿಶ್ವೇಶ್ವರಯ್ಯ ಯೂನಿರ್ಸಿಟಿಗೆ ಕೊಡಿ ಎಂದು ಹೇಳಿ ಬಿಲ್ಲನ್ನು ಇಡುತ್ತಿದ್ದೇನೆ. ಈ ಆಧಾರ ಈಗಾಗಲೇ ಕರ್ನಾಟಕ ಯೂನಿವರ್ಸಿಟಿಯೊಳಗೆ ಬಹಳ ವರ್ಷದಿಂದ ಇದೆ. ಎಲ್ಲಿ ಯಾರಿಗೆ ಅನ್ಯಾಯ ಆಗಿದೆ. ಸ್ವಾಮಿ? ಯಾರಿಗೆ ಅನಾಹುತ ಆಗಿದೆ ಸ್ವಾಮಿ? ಅವರು ಕೊಟ್ಟಿದ್ದಾರೆ ನಮ್ಮ ರಾಜ್ಯದ ಹಾಸನ ಜಿಲ್ಲೆಯ ಕಾಲೇಜಿಗೆ ಈಗಾಗಲೇ ಅಟಾನಮಿ ಕೊಟ್ಟಿದ್ದಾರೆ ಗವರ್ನಮೆಂಟ್ ಕಾಲೇಜಿಗೆ ಅಟಾನಮಿ ಕೊಟ್ಟಿದ್ದಾರೆ. ಅದೇ ಅಧಿಕಾರವನ್ನು ಕರ್ನಾಟಕ ಯೂನಿರ್ಸಿಟಿಯಲ್ಲಿರತಕ್ಕ ಅಧಿಕಾರವನ್ನು ನನ್ನ ವಿಶ್ವೇಶ್ವರಯ್ಯ ಯೂನಿರ್ಸಿಟಿಗೋ ಕೊಡಿ ಎಂದು ಹೇಳಿ ನಾನು ಕೇಳುತ್ತಿದ್ದೇನೆಯೇ ಹೊರತಾಗಿ ಇದರಿಂದ ಏನೂ ಬಹಳ ತೊಂದರೆ ಇಲ್ಲ. ಮತ್ತೆ ಈ ಅಕಾಡೆಮಿಕ್ ಕೌನ್ಸಿಲ್ ನಾವು ಕಾಲೇಜುಗಳಿಗೆ ಮಾಡುತ್ತೇವೆ. ಅದು ಸ್ವಾಯತ್ತತೆ ಅಂದರೆ ಸರ್ವತಂತ್ರ ಸ್ವಾಂತಂತ್ರ್ಯ ಇರುವುದಿಲ್ಲ. ಅದರೊಳಗೆ ಸರ್ಕಾರದ ಒಬ್ಬ ಪ್ರತಿನಿಧಿ ಇರುತ್ತಾರೆ. Representative of State Government and University ಇಬ್ಬರೂ ಇರುತ್ತಾರೆ.

(ಗೊಂದಲ)

ಶ್ರೀ ಡಿ. ಎಚ್. ಶಂಕರಮೂರ್ತಿ; ನೀವು ಹೇಳಿದ್ದನ್ನೆಲ್ಲಾ ಕೇಳಿದ್ದೇನೆ ಇನ್ನೂ ಏನಾದರೂ ಕೇಳಿದರೂ ಅದನ್ನೂ ಹೇಳುವುದಕ್ಕೆ ತಯಾರಿದ್ದೇನೆ. ಮತ್ತೆ ಇದರೊಳಗೆ ವಿಶ್ವ ಬ್ಯಾಂಕಿನ ಉಲ್ಲೇಖ ಮಾಡಿರುವುದಕ್ಕೆ ಕಾರಣ ಇದೆ. ಸುಮ್ಮನೇ ಉಲ್ಲೇಖ ಮಾಡಿದ್ದಲ್ಲ. ಅಥವಾ ನಾವು ವಿಶ್ವ ಬ್ಯಾಂಕಿನ ಕೈಕೆಳಗೆ ಹೋಗಿ ಸಿಕ್ಕಿಕೊಂಡು ಬಿಡುತ್ತೇವೆಯೇ. ಅದೂ ಅಲ್ಲ. ವಿಶ್ವ ಬ್ಯಾಂಕ್‌ನವರು ಈ ತರಹದ ಅಟಾನಮಿ ಇತರಕ್ಕಂಥ ಕಾಲೇಜುಗಳಿಗೆ ಎಲ್ಲಾ ಕಾಲೇಜಿನವರೂ ಕೇಳುತ್ತಿದ್ದಾರೆ. ಇಂಪ್ರೋವ್‌ಮೆಂಟ್ ಮಾಡಿಕೊಳ್ಳುವುದಕ್ಕೆ ಇನ್‌ಫ್ರಾಸ್ಟ್ರಕ್ಚರ್ ಇಂಪ್ರೋವೆಮೆಂಟ್ ಮಾಡಿಕೊಳ್ಳುವುದಕ್ಕೆ ಬೇರೆ ಸಂಗತಿಗಳಿಗೆ ನಮಗೆ ಹಣ ಸಹಾಯ ಕೊಡಿ ಎಂದು ಅವರನ್ನು ಕೇಳುತ್ತಿದ್ದಾರೆ. ನಾವು ನಮ್ಮರಾಜ್ಯ ಸರ್ಕಾರವೇ ಎಲ್ಲದಕ್ಕೂ ಕೇಳುತ್ತಿದ್ದೇವೆ. ಹಾಗೇಯೇ ಆ ಕಾಲೇಜಿನವರೂ ಕೇಳುತ್ತಾರೆ ಹಾಗೆ. ಕೇಳುವಾಗ ಅಟಾನಮಿ ಇದ್ದರೆ ಕೊಡುತ್ತೇವೆ ಇಲ್ಲದಿದ್ದರೆ ನಮಗೆ ಕೊಡುವುದಕ್ಕೆ ಬರುವುದಿಲ್ಲ. ಕೊಡುವುದಕ್ಕೆ ಆಗುವುದಿಲ್ಲ. ನಮಗೆ ಕಾನೂನು ಅಡ್ಡ ಬರುತ್ತದೆ ಎನ್ನತಕ್ಕ ಮಾತನ್ನು ಹೇಳುವುದಕ್ಕಾಗಿ ಕೊನೆಯ ಸೆಂಟೆನ್ಸ್‌ನ್ನು ಅನ್ನು ಉದ್ದೇಶದಲ್ಲಿ ಸೇರಿದ್ದೇನೆಯೇ ಹೊರತಾಗಿ ವಿಶ್ವ ಬ್ಯಾಂಕಿನ ಅಡಿಯಾಳಾಗುವುದಕ್ಕೆ ಅಲ್ಲ. ಈಗ ಒಂದು ಗೌರ್ವನಮೆಂಟ್ ಲೋನ್ ತೆಗೆದುಕೊಳ್ಳಬೇಕು. ಯಾವುದೋ ಒಂದು ಬ್ಯಾಂಕ್ ನಿಂದಲೋನ್ ತೆಗೆದು ಕೊಳ್ಳಬೇಕು ಎಂದರೆ ಅದಕ್ಕೆ ಒಂದಿಷ್ಟು ಕಂಡೀಷನ್ಸ್ ಇರುತ್ತದೆ. ಹಾಗೇಯೇ ಇವತ್ತು ವಿಶ್ವ ಬ್ಯಾಂಕ್‌ನಿಂದ ಏನಾದರೂ ಹಣ ತೆಗೆದುಕೊಳ್ಳುವುದಾರೆ ಅಟೋನಮಸ್ ಕಾಲೇಜು ಇದ್ದರೆ ಅವರಿಗೇ ಸಿಗುತ್ತದೆ ಆ ಅಟಾನಮಿ ಕೊಡುವುದು ನಾವೇನೇ. ಅವರಿಗೆ ಅಟಾನಮಿ ಶಕ್ತಿ ಇದ್ದರೆ ಅವರಿಗೆ ಮಾಡುವುದಕ್ಕೆ ಆಗುವ ಹಾಗೆ ಇದ್ದರೆ ಮಾತ್ರ ಅಟಾನಮಿ ಕೊಡುತ್ತೇವೆ. ಮತ್ತೆ. ಯಾವ ಕಾಲೇಜಿಗೆ ಅಟಾನಮಿ ಕೋಡಬೇಕು ಕೊಡಬಾರದು ಎಂದು ಹೇಳುವಂತಹ ತೀರ್ಮಾನ ಬರೇ ಯೂನಿವರ್ಸಿಟಿಗೆ ಮಾತ್ರ ಬಿಡುವುದಿಲ್ಲ. ನಮ್ಮ ಸರ್ಕಾರದ ಕೈನಲ್ಲೂ ಅದರ ಅಧಿಕಾರ ಇರುತ್ತದೆ. ಸರ್ಕಾರ ಮತ್ತು ಯೂನಿವರ್ಸಿಟಿ ಎರಡೂ ಆ ಕಾಲೇಜಿಗೆ ನಾವು ಅಟಾನಮಿ ಕೊಡತಕ್ಕದ್ದು. ಇದು ಸ್ಟಾಟ್ಯೂಟ್‌ನಲ್ಲಿ ಸ್ವಾಭಾವಿಕವಾಗಿ ಇರತಕ್ಕದ್ದು. ಇದೆಲ್ಲ ಇರುವುದೇ. ಈಗೇನು ಕರ್ನಾಟಕ ಯೂನಿವರ್ಸಿಟಿಯೊಳಗಡೆ ಇತರಕ್ಕ. ಒಂದು ಕಾನೂನು ಬಹಳ ವರ್ಷಗಳಿಂದ ಇತರಕ್ಕದ್ದು. ಅದು ವಿಶ್ವೇಶ್ವರಯ್ಯ ಟೆಕ್ನಿಕಲ್ ಯೂನಿವರ್ಸಿಟಿಯೊಳಗೆ ಇರಲಿಲ್ಲ. ಅದನ್ನು ಸೇರಿಸಬೇಕು. ಎನ್ನತಕ್ಕ ಉದ್ದೇಶ ಬಿಟ್ಟರೆ ಬೇರೆ ಏನೂ? ಇದೇನೂ ಹೊಸದಾಗಿ ಮಾಡಿ ಎಂಥದೋ ಅವರ ಕೈಯಲ್ಲಿ ಒಂದು ಸರ್ವಾಧಿಕಾರದ ಅಧಿಕಾರ ಕೊಡುತ್ತಿದ್ದೇವೆ ಎಂದೆ? ಆ ತರಹದ್ದು ಇಲ್ಲ. ಸಾಮಾಜಿಕ ನ್ಯಾಯದ ಪ್ರಶ್ನೆ ಯಾರದ್ದೂ ವಿರೋಧ ಇಲ್ಲ.

ನಾನು ನಾಳೆ ಬೆಳಿಗ್ಗೆ ರಿಸರ್ವೇಷನ್ ಬಗ್ಗೆ ಏನು ಒಂದು ಬಿಲ್ ಇಂಟ್ರಡ್ಯೂಸ್ ಮಾಡುತ್ತಿದ್ದೇನೆ. ಆ 93ರ ಅಮೆಂಡ್‌ಮೆಂಟ್ ಆಧಾರದ ಮೇಲೆ ಏನು ಇಂಟ್ರಡ್ಯೂಸ್ ಮಾಡುತ್ತಿದ್ದೇನೆ. ಅದರೊಳಗೂ ತಾವು ಗಮನಿಸಿದ್ದೀರಿ. ಅಂದು ಕೊಂಡಿದ್ದೇನೆ. ಈಗಾಗಲೇ ಬಿಲ್ ತಮಗೆ ಸರ್ಕುಲೇಟ್ ಮಾಡಿದ್ದೇನೆ. ಅದನ್ನು ಗಮನಿಸಿದ್ದೀರಿ ಎಂದು ಅಂದುಕೊಂಡಿದ್ದೇನೆ. ಮತ್ತು ರಿಸರ್ವೇಷನ್‌ಗೂ ಏನೂ ತೊಂದರೆ ಇಲ್ಲ ಸರ್ಕಾರ ಏನೇನು ಪಾಲಿಸಿಗಳನ್ನು ಮಾಡುತ್ತದೆ ಅವರು ಅದನ್ನು ಮಾಡಲೇಬೇಕು. ಇಂದೊಂದು ಅಕಾಡೆಮಿಕ್ ಅಟಾನಮಿ. ಒಂದು ಹೊಸ ಸಬ್ಜೆಕ್ಟ್‌ನ್ನು ಮಾಡುವುದಕ್ಕೆ ಹೊಸದಾಗಿ ಅವಿಷ್ಕಾರಗಳನ್ನೇನಾದರೂ ತೆಗೆದುಕೊಂಡು ಬರುವುದಕ್ಕೆ ಇನ್ನ್ಯಾವುದಾದರೂ ಒಂದು ಟೈ ಅಫ್ ಮಾಡಿಕೊಂಡು ಅವರೊಂದು ಸಬ್ಜೆಕ್ಟ್‌ನ್ನು ತರುವುದಕ್ಕೆ ಸ್ಟೂಡೆಂಟ್ ಎಕ್ಸ್‌ಛೇಂಜ್‌ಗೆ ಇರಬಹುದು. ಈ ತರಹದ ಸಂಗತಿಗಳಿಗೆ ಅವರಿಗೆ ಅಟಾನಮಿ ಬೇಕಾಗುತ್ತದೆ. ಇಲ್ಲವೆಂದರೆ ನಮ್ಮ ಮಕ್ಕಳಿಗೆ ಹೊಸ ಹೊಸ ವಿಷಯಗಳು ಸಿಗುವುದೇ ಇಲ್ಲ. ನಮ್ಮ ಮಕ್ಕಳಿಗೆ ಅವಕಾಶ ಹೇಗೆ ಸಿಗುತ್ತದೆ. ಅದಕ್ಕಾಗಿ ಇದನ್ನು ಓಪನ್ ಮಾಡುವುದಕ್ಕಾಗಿ ಇದನ್ನು ತಂದಿದ್ದೇವೆಯೇ ಹೊರತು ಈ ಬೀಗದ ಕೈಯನ್ನು ಓಪನ್ ಮಾಡುವುದರಿಂದ ಏನೊಂದು ಫ್ಲಡ್‌ಗೇಟ್ ಓಪನ್ ಮಾಡಿಬಿಡುತ್ತೇವೆ ಎಂದು ಹೇಳುವುದಕ್ಕೆ ಬರುವುದಿಲ್ಲ.

ಶ್ರೀ ಬಸವರಾಜ ರಾಯಣ್ಣ; ಮಾನ್ಯ ಅಧ್ಯಕ್ಷರೇ ಅಕಾಡಮಿ ಕೌನ್ಸಿಲ್ ಇರುವುದು ಎತಕ್ಕೆ? ಅವರ ಕೆಲಸವೇನು?

ಶ್ರೀ ಡಿ.ಹೆಚ್. ಶಂಕರಮೂರ್ತಿ; ಉನ್ನತ ಶಿಕ್ಷಣ ಸಚಿವರು ಮಾನ್ಯ ಅಧ್ಯಕ್ಷರೇ ಅವರಿಗೆ ಒಂದು ಸ್ವಾಯತ್ತತೆಯನ್ನು ಕೊಡದೇ ಹೋದರೆ ಪ್ರಗತಿ ಹೇಗೆ ಆಗುತ್ತದೆ? ಅಕಾಡಮಿ ಕೌನ್ಸಿಲ್ ಬೇರೆ ಎಲ್ಲಾ ಕಾಲೇಜುಗಳನ್ನು ಅಟಾನಮಿ ಮಾಡುತ್ತಿಲ್ಲ. ಅಟಾನಮಿ ಮಾಡಿಕೊಡತಕ್ಕ ಅಧಿಕಾರವನ್ನು ನನ್ನ ಯೂನಿವರ್ಸಿಟಿ ಯಾವುದು ಕರ್ನಾಟಕ ಯೂನಿವರ್ಸಿಟಿ ಒಳಗಡೆ ಇದೆ ಅದೇ ಅಧಿಕಾರ ನನ್ನ ವಿಶ್ವೇಶ್ವರಯ್ಯ ಯೂನಿವರ್ಸಿಟಿಗೂ ತೆಗೆದುಕೊಳ್ಳಬೇಕು ಅದನ್ನು ಕೊಡಿ ಎಂದು. ಯಾರಿಗೂ ಕೊಡದೇ ಇರುವುದು ಹೊಸದೇನೂ ತೆಗೆದುಕೊಳ್ಳುತ್ತಿಲ್ಲ. It is already in existence in Karnataka .

ಶ್ರೀ ಬಸವರಾಜ ರಾಯಣ್ಣ ಯೂನಿವರ್ಸಿಯಲ್ಲಿ ಅಕಾಡೆಮಿಕ್ ಕೌನ್ಸಿಲ್ ಇದೆಯಲ್ಲಾ. ಅಲ್ಲಿ ನೀವು ಅಟಾನಮಿಯನ್ನುಸಿಲಬಸ್ ಮಾಡುವುದಕ್ಕೆ ಕೊಟ್ಟಮೇಲೆ ಅಕಾಡಮಿ ಕೌನ್ಸಿಲ್‌ಗೆ ಏನು ಕೆಲಸ.?

ಉಪಾಧ್ಯಕ್ಷರೆಲ್ಲ; ಪಾಟೀಲರೇ ತಾವು ಒಂದು ನಿಮಿಷ ಕುಳಿತುಕೊಳ್ಳಿ

ಶ್ರೀ ಎಂ.ಬಿ.ಪಾಟೀಲ್ ಮಾನ್ಯ ಉಪಾಧ್ಯಕ್ಷರೆ ಇವತ್ತು ಮಧ್ಯಾಹ್ನ ಡೀಮ್ಡ್‌ಟು ಬಿ ಯೂನಿವರ್ಸಿಟಿಯ ಸ್ಟೇಟಸ್ ಸಿಕ್ಕಿದೆ ಕೆಎಲ್‌ಇ ಸೊಸೈಟಿಯ ಮೆಡಿಕಲ್ ಕಾಲೇಜಿಗೆ Whether Government has powers ಎನ್ ಈ.ಸಿ. ಅಥವಾ ಓಪೀನಿಯನ್ ಕೊಡುವುದಕ್ಕಾಗಲಿ ಸರ್ಕಾರಕ್ಕೆ ಅಧಿಕಾರವಿತ್ತೇ?

ಶ್ರೀ ಡಿ.ಹೆಚ್. ಶಂಕರಮೂರ್ತಿ: ಮಾನ್ಯ ಉಪಾಧ್ಯಕ್ಷರೇ, ತಾವು ಕೇಳಿದ ಹಾಗೆ ಅದಕ್ಕೆ ಉತ್ತರವನ್ನು ಹೇಳಬೇಕೆಂದು ಇದ್ದೇನೆ. ಒಂದು ಕಾಲೇಜಿಗೆ ಅಕಾಡೆಮಿಕ್ ಅಟಾನಮಿಯನ್ನು ಕೊಡುತ್ತೇವೆ. ಅವರೇನಾದರೂ ತಪ್ಪು ಮಾಡಿದರು ಎಂದು ಅನಿಸಿದರೆ ನಮ್ಮ ಸರ್ಕಾರಕ್ಕೆ ಅದನ್ನು ವಾಪಸ್ ತೆಗೆದುಕೊಳ್ಳುವುದಕ್ಕೆ ಅಧಿಕಾರ ಇದೆ. ನಾವೇನೂ ಅದನ್ನು ಬಿಟ್ಟು ನೀವು ಏನು ಬೇಕಾದರೂ ಮಾಡು ಹೋಗು ಎಂದು ಹೇಳುವುದಿಲ್ಲ. ಅಥವಾ ಅಟಾನಮಿಯನ್ನು ವಾಪಸ್ ತೆಗೆದುಕೊಳ್ಳುವ ಅಧಿಕಾರ ಸರ್ಕಾರದ ಕೈಯಲ್ಲೇ ಇರುತ್ತದೆ. ಅದು ಎಲ್ಲಿಗೂ ಹೋಗುವುದಿಲ್ಲ. ಇವತ್ತು ಕರ್ನಾಟಕ ಯೂನಿವರ್ಸಿಟಿ ಆಕ್ಟ್‌ನಲ್ಲಿ ಅದು ಇದೆ. ಹೊಸದಾಗಿ ಬಿಟ್ಟುಬಿಟ್ಟು ಎಲ್ಲಾ ನೀವು ಏನು ಬೇಕಾದರೂ ಮಾಡಿಕೊಳ್ಳಿ, ಹೇಗೆ ಬೇಕಾದರೂ ಮಾಡಿಕೊಳ್ಳಿ ಎಂದು ಇಲ್ಲ. ಹಾಗೆ ಆಗುವುದಿಲ್ಲ. We have got the Powers. We continue to have that Power. ರಾಜ್ಯಸರ್ಕಾರದ ಅಧಿಕಾರದ ವ್ಯಾಪ್ತಿಗೆ ಮೀರಿ ಅವರೇನೂ ಮಾಡುವುದಕ್ಕೆ ಬರುವುದಿಲ್ಲ. ಮತ್ತೆ ವರ್ಲ್ಡ್ ಬ್ಯಾಂಕ್ ಬಗ್ಗೆ ನಮಗೊಂದು ಸ್ವಲ್ಪ ಮಾಹಿತಿ ಬೇಕಾಗುತ್ತದೆ. ನಾವೇನು ಈಗ ಅಕಾಡೆಮಿ ಅಟಾನಮಿಯನ್ನು ಕೊಡುವುದಕ್ಕೆ ಹೊರಟಿದ್ದೇವೆ, ಇದರಿಂದ ವರ್ಲ್ಡ್ ಬ್ಯಾಂಕ್‌ನಿಂದ ಹಣ ತೆಗೆದುಕೊಳ್ಳಬಹುದೇ ಹೊರತು ವರ್ಲ್ಡ್ ಬ್ಯಾಂಕ್‌ನವರಿಗೆ ಸಿಲಬಸ್ ಫಿಕ್ಸ್ ಮಾಡುವ ಅಧಿಕಾರ ಎಲ್ಲೂ ಇಲ್ಲ. ಅದು ಸಾಧ್ಯವೇ ಇಲ್ಲ.

ಶ್ರೀ ಕೆ.ಆರ್. ರಮೇಶ್‌ಕುಮಾರ್: ಮಾನ್ಯ ಉಪಾಧ್ಯಕ್ಷರೇ, ಎಲೆಕ್ಟ್ರಿಸಿಟಿ ಬೋರ್ಡ್ ವಿಚಾರದಲ್ಲಿ ದೇಶದಲ್ಲಿ ಯೂನಿಫಾರ್ಮಿಟಿ ಇರಬೇಕೆಂದು ತಂದರಲ್ಲಾ, ಎಲೆಕ್ಟ್ರಿಸಿಟಿ ವಿಚಾರ ರೆಗ್ಯುಲೇಷನ್ಸ್ ಇವತ್ತು ಏನಾಗಿದೆ? Who is running, controlling and regulating the State Electricity Boards? ಏಕೆ ಮಾತನಾಡುತ್ತೀರಿ?

ಶ್ರೀ ಡಿ.ಹೆಚ್. ಶಂಕರಮೂರ್ತಿ: ವರ್ಲ್ಡ್ ಬ್ಯಾಂಕ್‌ನವರ ಕಂಟ್ರೋಲ್ ಎಷ್ಟಕ್ಕೆ ಇರುತ್ತದೆಂದರೆ. ವರ್ಲ್ಡ್ ಬ್ಯಾಂಕ್‌ನವರ ಕಂಟ್ರೋಲ್ ಅವರು ಕೊಟ್ಟ ಹಣಕ್ಕೆ..

ಶ್ರೀ ಕೆ. ಆರ್. ರಮೇಶ್ ಕುಮಾರ್: ಇವತ್ತು ಎಲೆಕ್ಟ್ರಿಸಿಟಿ ಬೋರ್ಡ್‌ನ್ನು ಸರ್ಕಾರ ನಡೆಸುತ್ತಿಲ್ಲ. ವರ್ಲ್ಡ್‌ಬ್ಯಾಂಕ್‌ನವರು ನಡೆಸುತ್ತಿರುವುದು.

(ಗೊಂದಲ)

ಶ್ರೀ ಕೆ.ಆರ್. ರಮೇಶ್ ಕುಮಾರ್: ವರ್ಲ್ಡ್ ಬ್ಯಾಂಕ್, ಇಂಟರ್‌ನ್ಯಾಷನಲ್ ಮಾನಿಟರಿ ಫಂಡ್ ಅವರ ಇಂಟರೆಸ್ಟ್ ಲೋನ್ ಪಾಲಿಸಿ ಅವರು ಹೇಗೆ ಕೊಡುತ್ತಾರೆ? ಯಾರಿಗೆ ಕೊಡುತ್ತಾರೆ. ಅದು ಬಹಳ ದೊಡ್ಡ ವಿಚಾರವಾಗುತ್ತದೆ. ಅದರ ಬಗ್ಗೆ ತಲೆಕೆಡಿಸಿಕೊಳ್ಳುವುದು ಬೇಡ. ವರ್ಲ್ಡ್‌ಬ್ಯಾಂಕ್ ನಾರ್ಮ್ಸ್ ಬೇರೆ. World Bank and IMF are "Octopus" it is the money of Imperialists. Their desire is to destroy the Developing Countries, ಏನು ಮಾತನಾಡುತ್ತೀರಿ?

ಶ್ರಿ ಡಿ.ಹೆಚ್. ಶಂಕರಮೂರ್ತಿ: ಮಾನ್ಯ ಉಪಾಧ್ಯಕ್ಷರೇ, ಈ ಅಟಾನಮಸ್ ಕಾಲೇಜು They will continue to be affiliated to Our University. They are bound by the Rules of the University and the Government. ಅದರಲ್ಲೇನೂ ವ್ಯತ್ಯಾಸ ಇರುವುದಿಲ್ಲ. ಆ ಕಾಲೇಜಿಗೆ ನಾವು ಯಾವುದಕ್ಕೆ ಸ್ವಾಯತ್ತತೆಯನ್ನು ಕೊಡುತ್ತಿರುವುದು. ಅಕಾಡೆಮಿಕ್ ಇಂಟರೆಸ್ಟ್‌ಗೆ ಮಾತ್ರ ಸ್ವಾಯತ್ತತೆಯನ್ನು ಕೊಡುತ್ತಿದ್ದೇವೆ. ಅಡ್ಮಿನಿಸ್ಟ್ರೇಟಿವ್‌ಗೆ ಅಲ್ಲ. ಆ ಸ್ವಾಯತ್ತತೆಯನ್ನು ಕೊಡುವುದರಿಂದ ಅವರು ಅದರ ಲಾಭವನ್ನು ನಮ್ಮ ಮಕ್ಕಳಿಗೆ ಕೊಡುತ್ತಾರೆ. ಅಷ್ಟು ಬಿಟ್ಟರೆ ಬೇರೇನೂ ಅಲ್ಲ. ಮತ್ತೆ ಈ ಭಯ ಏನೋ ಆಗಿಬಿಡುತ್ತದೆ? ಎಂಥದೋ ಆಗಿಬಿಡುತ್ತೆ ಎನ್ನುವ ಭಯ. ಹಾಗೆ ಇದ್ದರೆ ಕರ್ನಾಟಕ ಯೂನಿವರ್ಸಿಟಿಯಲ್ಲಿ ಇಷ್ಟು ವರ್ಷದಿಂದ ಇದೆಯಲ್ಲಾ ಏನು ಅನ್ಯಾಯವಾಗಿದೆ ಸ್ವಾಮಿ. ಈಗ ನಮ್ಮ ಪಕ್ಕದ ಜಿಲ್ಲೆ ಹಾಸನದ ಕಾಲೇಜಿಗೆ ಅವರು ಸ್ವಾಯತ್ತತೆಯನ್ನು ಕೊಟ್ಟಿದ್ದಾರೆ. ಮಲೆನಾಡು ಕಾಲೇಜಿಗೆ ಕೊಟ್ಟಿದ್ದಾರೆ. ಏನು ಅನ್ಯಾಯವಾಗಿದೆ? ನಮ್ಮ ಮಕ್ಕಳಿಗೇನೂ ಅಲ್ಲಿ ತೊಂದರೆಯಾಗಿಬಿಟ್ಟಿತಾ? ಮಕ್ಕಳಿಗೇನು ಅಡ್ಮಿಷನ್ಸ್ ಸಿಗುತ್ತಿಲ್ಲವೇ? ಅಲ್ಲಿ ರಿಸರ್ವೇಷನ್ ಪಾಲಿಸಿ ಯಾವುದೂ ಮಾಡುತ್ತಿಲ್ಲವೇ?

ಶ್ರೀ ಕೆ.ಆರ್. ರಮೇಶ್ ಕುಮಾರ್: ಮಲೆನಾಡಿನ ಕಾಲೇಜಿನ ಬಗ್ಗೆ ಹೇಳಬೇಡಿ. ಮಾಹೆ ಬಗ್ಗೆ ಹೇಳಿ.

ಶ್ರೀ ಡಿ.ಹೆಚ್. ಶಂಕರಮೂರ್ತಿ: ಮಾಹೆ ಡೀಮ್ಡ್ ಯೂನಿವರ್ಸಿಟಿ.

Sri K.R.Ramesh Kumr.: Talk about MAHE.

ಶ್ರೀ ಡಿ.ಹೆಚ್. ಶಂಕರಮೂರ್ತಿ: ನಾನು ಆಗಿನಿಂದಲೂ ಹೇಳುತ್ತಿದ್ದೇನೆ. MAHE is a deemed University. I am not Talking about deemed

University. I am not asking you to given me permission to grant a deemed University Status through VTU,

SRI.K.R.RAMESH KUMAR: This is the First Stage and that is the Second Stage.

ಶ್ರೀ ಡಿ.ಹೆಚ್. ಶಂಕರಮೂರ್ತಿ: ಈ ತರಹ ಅನುಮಾನ ಬಂದರೆ ನನ್ನ ಮಗ ದೊಡ್ಡವನಾಗಿದ್ದಾನೆ. ಮದುವೆ ಮಾಡಿದರೆ ನನ್ನ ಮಗ ಮನೆ ಬಿಟ್ಟು ಹೊರಟುಹೋಗುತ್ತಾನೆ ಎಂದು ಭಯ ಬಿದ್ದು ಮದುವೇನೇ ಮಾಡುವುದಿಲ್ಲವೆಂದರೆ ಹೇಗೆ? ಆ ರೀತಿ ಆಗುವುದಿಲ್ಲ ಸ್ವಾಮಿ. ಏನು ಮಾತನಾಡುತ್ತೀರಿ ಸ್ವಾಮಿ?

SRI K.R. RAMESH KUMAR: We will sit for a discussion about different aspects of Dunkell's Proposals and its ramifications. ಏನು ಮಾತನಾಡುತ್ತೀರಿ?

ಶ್ರೀ ಡಿ.ಹೆಚ್. ಶಂಕರಮೂರ್ತಿ: ಪ್ರಗತಿ ಬೇಡವೇ? ನಾವು ಪ್ರಗತಿ ವಿರೋಧಿಗಳಾಗುವುದು ಬೇಡ. ನಾನು ಮತ್ತೊಮ್ಮೆ ಹೇಳುತ್ತೇನೆ, ಮಗ ದೊಡ್ಡವನಾಗಿದ್ದಾನೆ. ಮದುವೆ ಮಾಡಿದರೆ ಮನೆ ಬಿಟ್ಟು ಹೋಗುತ್ತಾನೆ, ನಾನು ಮದುವೇನೆ ಮಾಡುವುದಿಲ್ಲ. ಎಂದರೆ ಇದೇನು ಸ್ವಾಮಿ? ನಾನು ಮುಗಿಸಿಬಿಡುತ್ತೇನೆ. ನೀವು ಮಾತನಾಡುವಾಗ ನಾನು ಮಧ್ಯೆ ಬಾಯಿ ಹಾಕಲಿಲ್ಲ. ಎಲ್ಲರೂ ಮಾತನಾಡುವಾಗ ನಾನು ಪೂರ್ತಿಯಾಗಿ ಕೇಳಿದೆ. ಹೆಸರುಗಳನ್ನು ಬರೆದುಕೊಂಡೆ. ಪಾಯಿಂಟ್ ನೋಟ್ ಡೌನ್ ಮಾಡಿಕೊಂಡೆ. ನಾನು ನಿಮಗೆ ಸಮಾಧಾನ ಮಾಡುವ ಪ್ರಯತ್ನವನ್ನು ಮಾಡುತ್ತಿದ್ದೇನೆ. ಅದಕ್ಕಾಗಿ ನಾವ್ಯಾರೂ ಕೂಡ ನಮ್ಮ ವಾದದ ಭರದಲ್ಲಿ ಪ್ರಗತಿ ವಿರೋಧಿಗಳಾಗುವುದು ಒಳ್ಳೆಯ ಲಕ್ಷಣವಲ್ಲ. ನಾವು ಪ್ರಗತಿಗೆ ಮುಂದಕ್ಕೆ ಪೂರಕವಾಗಬೇಕೇ ಹೊರತು ಮಾರಕವಾಗಬಾರದು. ಅದರ ಜೊತೆಗೆ ಪ್ರಗತಿಯ ಹೆಸರಿನೊಳಗೆ ನಮ್ಮ ಮಕ್ಕಳಿಗೆ ಅನ್ಯಾಯವಾಗುತ್ತಾ? ಆಗುವುದಕ್ಕೆ ಬಿಡಬಾರದು. ನಾನು ಮತ್ತೆ ಮತ್ತೆ ಮೇಲಿಂದ ಮೇಲೆ ಹೇಳುತ್ತಿದ್ದೇನೆ. ಈ ಒಂದು ವಿಧೇಯಕದಿಂದ ಈ ಒಂದು ಸಣ್ಣ ಬದಲಾವಣೆಯಿಂದ ನಮ್ಮ ಮಕ್ಕಳಿಗೆ ಅನುಕೂಲ ಜಾಸ್ತಿಯಾಗುತ್ತದೆಯೇ ಹೊರತು ಯಾವುದೇ ರೀತಿಯಲ್ಲೂ ಅವರಿಗೆ ಅನ್ಯಾಯವಾಗುವುದಿಲ್ಲ. ತಾವುಗಳು ಅಭಿಪ್ರಾಯವನ್ನು ವ್ಯಕ್ತಮಾಡಿದಂಥ ಯಾವುದು ಸಾಮಾಜಿಕ ನ್ಯಾಯವೆನ್ನುತ್ತೀರಾ? ನಮ್ಮ ರಾಜ್ಯದಲ್ಲಿ ಇರುವ ಪ್ರಸ್ತುತ ಪರಿಸ್ಥಿತಿ ಎನ್ನುತ್ತೀರಾ. ಇದ್ಯಾವುದಕ್ಕೂ ತೊಂದರೆ ಆಗುವುದಿಲ್ಲ ಎನ್ನುವುದನ್ನು ನಾನು ಮತ್ತೆ ಮತ್ತೆ ಮೇಲಿಂದ ಮೇಲೆ ಹೇಳುತ್ತಿದ್ದೇನೆ. ಮತ್ತೊಮ್ಮೆ ಕೊನೆಯಲ್ಲಿ ಇನ್ನೊಂದು ಸಾರಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಸಬ್ ಸೆಕ್ಷನ್ 5 ಇದರಲ್ಲಿ ಅಡ್ಮಿಷನ್ಸ್ ಅಂಡ್

ರೆಕ್ರೂಟ್‌ಮೆಂಟ್ Will be according to Stat's Policy. ಎಂದು ಹೇಳಿ ಮತ್ತೆ ಮತ್ತೆ ಹೇಳುತ್ತೇನೆ. ಮತ್ತೊಂದು ಸಾರಿ ಅದನ್ನು ನಾನು ರಿಪೀಟ್ ಮಾಡುತ್ತೇನೆ. ಮತ್ತೊಂದು ಸಾರಿ ಹೇಳುತ್ತೇನೆ. ಮೊದಲು ಶುರುವಿನಲ್ಲಿ ಹೇಳಿದ್ದೇನೆ. ಮತ್ತೊಂದು ಸಾರಿ ಹೇಳುತ್ತೇನೆ. ಈ ಬಿಲ್ಲನ್ನು ತಯಾರು ಮಾಡಿದ್ದು ಹಿಂದಿನ ಸರ್ಕಾರ. ಪೂರ್ತಿ ರೆಡಿಮಾಡಿತ್ತು. ಕ್ಯಾಬಿನೆಟ್ ಅಪ್ರೂವಲ್ ಕೂಡ ಆಗಿತ್ತು. ಆದರೆ ಯಾವುದೋ ಕಾರಣಕ್ಕೆ ಅದನ್ನು ಇಂಪ್ಲಿಮೆಂಟ್ ಮಾಡಲಿಕ್ಕಾಗಲಿಲ್ಲ. ತಾವುಗಳು ಆಗಿನ ಕ್ಯಾಬಿನೆಟ್‌ನ ಸಚಿವರಾಗಿದ್ದೀರಿ. ತಾವೆಲ್ಲಾ ಅದನ್ನು ಒಪ್ಪಿ ದೃಢಪಡಿಸಿ ಇದು ಸರಿ ಇದೆ ಎಂದು ಹೇಳಿ ತಂದಂಥ ಬಿಲ್ ಅದನ್ನು ಜಾರಿಗೆ ಕೊಡುವುದಕ್ಕೆ ಆಗಲಿಲ್ಲ. ಜಾರಿ ಕೊಡತಕ್ಕ ಕೆಲಸ ನನಗೆ ಬಂದಿದೆ. ನಾನು ಮಾಡುತ್ತಿದ್ದೇನೆ. ದಯಮಾಡಿ ನಾನು ಸಭೆಯನ್ನು ಮತ್ತೊಮ್ಮೆ ಪ್ರಾರ್ಥಿಸುತ್ತೇನೆ. ಈ ವಿಧೇಯಕವನ್ನು ದಯಮಾಡಿ ಅನುಮೋದಿಸಬೇಕು. ಒಪ್ಪಿಗೆಯನ್ನು ಕೊಡಬೇಕೆಂದು ಹೇಳಿ ಮತ್ತೊಮ್ಮೆ ನಾನು ಕೇಳಿ ಕೊಳ್ಳುತ್ತೇನೆ.

ಶ್ರೀ ಕೆ.ಆರ್. ರಮೇಶ್ ಕುಮಾರ್: ಮಾನ್ಯ ಉಪಾಧ್ಯಕ್ಷರೇ, ನಾನು ಅವರಿಗೆ ಒಂದು ಮಾತನ್ನು ಕೇಳುವುದಕ್ಕೆ ಬಯಸುತ್ತೇನೆ. ನಮ್ಮ ಹಳ್ಳಿಯ ಕುಂಬಾರ ಇದ್ದಾನಲ್ಲಾ, ಅವನಿಗೆ ಅಕ್ಷರ ಜ್ಞಾನ ಇರಲಿಲ್ಲ. ಆದರೆ ಅವನು ಆ ಮಣ್ಣನ್ನು ಪರೀಕ್ಷೆ ಮಾಡುವುದು, ತರತಕ್ಕದ್ದು, ಕಲೆಸತಕ್ಕದ್ದು, ಅದನ್ನು ಆ ಫರ್ನೇಸ್‌ನಲ್ಲಿ ಅವನದೇ ಆದ ಗ್ರಾಮೀಣ ವ್ಯವಸ್ಥೆಯಲ್ಲಿ ಆ ಫರ್ನೇಸ್‌ನಲ್ಲಿ ಇಡತಕ್ಕದ್ದು, ಆ ಮಡಿಕೆಯನ್ನು ಮಾಡತಕ್ಕ ಕಲೆ ಇತ್ತು. ಅವನು ಇಂಜಿನಿಯರ್ ಅಲ್ಲವಾ? ಯಾರು ಅವನಿಗೆ ಅಕ್ಷರಜ್ಞಾನ ಇಲ್ಲದಂತೆ ಮಾಡಿದವರು. ಒಬ್ಬ ಕ್ಷೌರಿಕ ಇರುತ್ತಾನೆ. ಒಬ್ಬ ಮನುಷ್ಯನನ್ನು ಎದುರುಗಡೆ ಕೂಡಿಸಿಕೊಂಡು ಮನುಷ್ಯನ ಮುಖಕ್ಕೆ ಲಕ್ಷಣವಾಗಿ ಕಾಣಬೇಕೆಂದು ಹೇಳಿ ಆ ಎಲ್ಲಾ ಕೂದಲನ್ನು ಒಂದಕ್ಕೊಂದು ಹೊಂದಿಸಿ ಯಾವುದು ಉದ್ದ ಇದೆ. ಯಾವುದು ತುಂಡ ಇದೆ, ಹೇಗೆ ಮಾಡಿದರೆ ಇವನು ಲಕ್ಷಣವಾಗಿ ಕಾಣುತ್ತಾನೆ ಎಂದು ಹೇಳಿ ಒಂದು ಗಂಟೆ ಅವನ ಮುಂದೆ ನಿಂತು ಕ್ಷೌರ ಮಾಡುತ್ತಿರುತ್ತಾನಲ್ಲಾ, Wasn't that a skill? ಅವನಿಗೆ ಅಕ್ಷರಜ್ಞಾನವನ್ನು ಯಾರು ತಪ್ಪಿಸಿದವರು? ಈ ಚಾತುರ್ವರ್ಣ್ಯ ಪದ್ಧತಿಯಲ್ಲಿ ಈ ದೇಶದಲ್ಲಿ ಎಲ್ಲ ಜನರಿಗೆ ಅಕ್ಷರದ ಜ್ಞಾನ ಸೌಕರ್ಯ ಇದ್ದಿದ್ದರೆ ಈ ದೇಶದ ಚಿತ್ರಣವೇ ಬೇರೆಯಾಗುತ್ತಿತ್ತೋ ಅದರ ಪುನರ್ ಅವತಾರಗಳು ಬೇರೆ ಬೇರೆ ರೂಪದಲ್ಲಿ ಈಗ ಬರುತ್ತಿವೆ. ನಾನು ಹೇಳಿದ್ದು ಒಂದೇ ಮಾತು. ಪ್ರತಿಷ್ಠಿತ ವರ್ಗಕ್ಕೆ ಮತ್ತಷ್ಟು ಪ್ರತಿಷ್ಠೆಯನ್ನು ತುಂಬತಕ್ಕ ವ್ಯವಸ್ಥೆಯಾಗುತ್ತೆ ಇದರಲ್ಲಿ. ಯಾರು ಶೋಷಿತನಾಗಿದ್ದಾನೆ, ಯಾರು ವಂಚಿತನಾಗಿದ್ದಾನೆ, ಅಪಮಾನಿತನಾಗಿದ್ದಾನೆ, ಅವನಿಗೆ ಇದರಿಂದ ಮೂರು ಕಾಸಿನ

ಪ್ರಯೋಜನವಾಗುವುದಿಲ್ಲವೆನ್ನುವುದು ನನ್ನ ವಾದ. ದಯಮಾಡಿ ಅರ್ಥಮಾಡಿಕೊಳ್ಳಿ. To make a strong man even more stronger a Legislation is no Required. He will become Stronger on his own. But our efforts must be to Make a Weak man a Strong Man.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಶಿಕ್ಷಣ ಸಚಿವರು ಪದೇ ಪದೇ ಒಂದು ವಿಚಾರವನ್ನು ಹೇಳುತ್ತಿದ್ದಾರೆ. ಏನು ಅಂದರೆ ಅಕಾಡೆಮಿಕ್ ಆಟಾನಮಸ್ ಮಾತ್ರ ನಾವು ಕೊಡುತ್ತಿದ್ದೇವೆಂದು. Academic Autonomous means Syllabus, Examinations, Valuation and Text Books. Recruitment and Employment Next ಸ್ಟೇಜಿಗೆ ಬರುತ್ತದೆ. ರಿಕ್ರೂಟ್‌ಮೆಂಟ್, ಎಂಪ್ಲಾಯ್‌ಮೆಂಟ್ ಅಕಾಡೆಮಿಕ್ ಇಂಟರೆಸ್ಟ್‌ಗೆ ಬರುವುದಿಲ್ಲ. ಅಕಾಡೆಮಿಕ್ ಇಂಟರೆಸ್ಟ್ ಅಂದರೆ ನಿಮ್ಮ ಮೆದುಳುಗಳನ್ನು ಹೇಗೆ ತಯಾರು ಮಾಡಬೇಕು ಎನ್ನತಕ್ಕ ಯೋಜನೆ ಅದು. ಅಲ್ಲಿ ಓದತಕ್ಕ, ಓದಲಿಕ್ಕೆ ಬರತಕ್ಕ ವಿದ್ಯಾರ್ಥಿಗಳ ಮೇದುಳನ್ನು ಯಾವ ದಿಕ್ಕಿನಲ್ಲಿ ತಯಾರು ಮಾಡಬೇಕು ಎನ್ನುವುದಕ್ಕೆ ಆಗುತ್ತಿರತಕ್ಕಂಥ ಯೋಜನೆ ಇದು. ಆದರೆ ಏನು ಅಂದರೆ ಆ ಮೆದುಳು ಯಾವ ರೀತಿ ತಯಾರು ಅಗಬೇಕು ಎಂದರೆ ವಿಶ್ವ ಬ್ಯಾಂಕಿನ ಆಶಯಗಳಿಗೆ ಅನುಗುಣವಾಗಿ ಆ ಮೆದುಳು ತಯಾರಾಗಬೇಕು. ಅದು ಮೆದುಳು ಇದ್ದವರಿಗೆ ಮಾತ್ರ ಅರ್ಥ ಆಗುತ್ತದೆ. ಆ ಮೆದುಳು ಇದ್ದವರಿಗೆ ವಿಶ್ವ ಬ್ಯಾಂಕಿನ ಆಶಯಗಳಿಗೆ ಅನುಗುಣವಾಗಿ ಮೆದುಳನ್ನು ತಯಾರು ಮಾಡಬೇಕು ಎನ್ನತಕ್ಕ ಒಂದು ಉದ್ದೇಶ ಇದೆ. ಅದಕ್ಕೋಸ್ಕರ ಈ ಅಟಾನಮಸ್ ಕೊಡುತ್ತಾ ಇರತಕ್ಕದ್ದು. ಈ ಅಟಾನಮಿ ಕೂಡ ಯಾರಿಗೆ ಕೊಡುತ್ತಿರುವುದು ಅಂದರೆ ಅವರು ಯಾರು ಇವತ್ತು ವರ್ಲ್ಡ್ ಬ್ಯಾಂಕಿನಿಂದ ಎಡ್ ತೆಗೆದುಕೊಳ್ಳುತ್ತಿದಾರೆ. ಸಹಾಯ ತೆಗೆದುಕೊಳ್ಳುತ್ತಿದ್ದಾರೆ. ಆ ಕಾಲೇಜುಗಳಿಗೆ ಮಾತ್ರ ಕೊಡಿ ಎಂದು ಅವರು ಕೇಳುತ್ತಿದ್ದಾರೆ. ಅಂದರೆ ಅದರ ಅರ್ಥ It is a pre-condition. They are insisting because the are aiding the Institutions. ಅಂದರೆ ವಿಶ್ವ ಬ್ಯಾಂಕ್ ಅದೊಂದು ಹಣಕಾಸಿನ ವ್ಯಾಪಾರ ಮಾಡತಕ್ಕಂಥ ಫೈನಾನ್ಸ್ ಕಂಪನಿ. ಅವರಿಗೆ ಇಂಟರೆಸ್ಟ್‌ಬೇಕು. ಹಣ ಸಂಪಾದನೆ ಆಗಬೇಕು. ನಾವು ಕೊಟ್ಟಂತಹ ಹಣಕ್ಕೆ ಸರಿಯಾದ ರೀತಿಯಾದಂತಹ ಲಾಭ ಬರಬೇಕು. ಇದು ಅವರ ಇಂಟರೆಸ್ಟ್ ಇರತಕ್ಕದ್ದು. ಅದಕ್ಕೆ ತಕ್ಕ ಹಾಗೆ ಸಿಲಬಸ್‌ಅನ್ನು ತಯಾರು ಮಾಡಬೇಕು. ನಮ್ಮ ಹಣ ನೀವು ತೆಗೆದುಕೊಳ್ಳುವುದಾದರೆ ನಾವು ಹೇಳಿದ ಹಾಗೆ ಕೇಳಬೇಕು. ಇದು ಅವರ ಕಂಡೀಷನ್. ಅದರ ಅರ್ಥ ಏನು ಅಂದರೆ ನಮ್ಮ ಇಡೀ ಇಂಟೆಲೆಕ್ಚುಯಲ್ ಡೆವಲಪ್‌ಮೆಂಟನ್ನು ನಮ್ಮ ಹ್ಯೂಮನ್ ರೀಸೋರ್ಸ್

ಡೆವಲಪ್ ಮೆಂಟನ್ನು ವಿಶ್ವ ಬ್ಯಾಂಕಿಗೆ ಅಡ ಇಡುತ್ತಿದ್ದೇವೆ. We are Mortgaging our brains. ಇದು ಯಾವ ಸರ್ಕಾರ ತಂದಿದ್ದು, ಯಾವ ಸರ್ಕಾರ ಬಿಟ್ಟಿತು ಎನ್ನತಕ್ಕ ಪ್ರಶ್ನೆ ಅಲ. ಇದು. ಹಿಂದಿನ ಸರ್ಕಾರ ತಂದರೆ ಅವರೂ ಭಾಗಸ್ಥರು ಇದ್ದಾರೆ ಈಗ. ಬೇರೆಯವರಲ್ಲ. ತಂದಿದ್ದರೆ ತರಿಸಿ ನೋಡಿರಿ. ನೀವು ಏನೇನೋ ಕಥೇ ಹೇಳಬೇಡಿ. ಇಲ್ಲದೇ ಇರತಕ್ಕ ಕಥೆ ಹೇಳಬೇಡಿ. It is nothing but Mortgaging the Inidan Brains to the World Bank. ಮತ್ತೆ ಇಲ್ಲಿ ಯಾವ ಬಡವರ ಮಕ್ಕಳೂ ಓದಲಿಕ್ಕೆ ಆಗುವುದಿಲ್ಲ. ಅಲ್ಲಿ ಸಾಧ್ಯ ಇಲ್ಲ ಓದಲಿಕ್ಕೆ, ಹೆಜ್ಜೆ ಇಡಲಿಕ್ಕೆ ಸಾಧ್ಯವಿಲ್ಲ. ಈಗ ನೀವು ಯಾವ್ಯಾವ ಮೆಡಿಕಲ್ ಕಾಲೇಜನ್ನು ಪ್ರೈವೇಟ್‌ನವರಿಗೆ ಕೊಟ್ಟಿದ್ದೀರಿ. ಅಲ್ಪಸಂಖ್ಯಾತರ ಹೆಸರಿನಲ್ಲಿ ಕೊಟ್ಟಿರಬಹುದು, ಹಿಂದುಳಿದ ವರ್ಗದವರ ಹೆಸರಿನಲ್ಲಿ ಕೊಟ್ಟಿರಬಹುದು. ಅಂಬೇಡ್ಕರ್ ಹೆಸರಿನಲ್ಲಿ ಕೊಟ್ಟಿರಬಹುದು. ಬಸವಣ್ಣನವರ ಹೆಸರಿನಲ್ಲಿ ಕೊಟ್ಟಿರಬಹುದು. ಬುದ್ಧನ ಹೆಸರಿನಲ್ಲಿ ಕೊಟ್ಟಿರಬಹುದು. ಎಲ್ಲಾ ಮೆಡಿಕಲ್ ಕಾಲೇಜಿನಲ್ಲಿ ಓದುತ್ತಿರತಕ್ಕವರು ಶ್ರೀಮಂತರ ಮಕ್ಕಳೇ. ಬಡವರ ಮಕ್ಕಳಿಗೆ ಎಷ್ಟು ಜನಕ್ಕೆ ಸೀಟು ಕೊಟ್ಟಿದ್ದೀರಿ? ಹಿಂದುಳಿದವರ ಹೆಸರಿನಲ್ಲಿ ಮಾಡಿಕೊಂಡಂತಹ ಮೆಡಿಕಲ್ ಕಾಲೇಜಿನಲ್ಲಿ ಹೆಸರು ಹಿಂದುಳಿದವರದ್ದು. ಆ ಹಿಂದುಳಿದ ಮಕ್ಕಳು ಎಷ್ಟು ಜನ ಆ ಮೆಡಿಕಲ್ ಕಾಲೇಜಿನಲ್ಲಿದ್ದಾರೆ? ಅಂಬೇಡ್ಕರ್ ಕಾಲೇಜಿನಲ್ಲಿ ದಲಿತರ ಎಷ್ಟು ಜನ ಮಕ್ಕಳು ಇದ್ದಾರೆ? ಅಲ್ಪಸಂಖ್ಯಾತರ ಹೆಸರಿನಲ್ಲಿ ತೆಗೆದುಕೊಂಡಿರತಕ್ಕ ಇಂಜಿನಿಯರಿಂಗ್ ಹಾಗೂ ಮೆಡಿಕಲ್ ಕಾಲೇಜಿನಲ್ಲಿ ಎಷ್ಟು ಜನ ಅಲ್ಪಸಂಖ್ಯಾತರು ಇದ್ದಾರೆ? ಯಾರೂ ಇಲ್ಲ. ಇದೂ ಕೂಡ ಅದೇ ರೀತಿಯಲ್ಲಿ ಅದೇ ಹೆಸರಿನಲ್ಲಿ.

(ಗೊಂದಲ)

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: ಯಾವ್ಯಾವ ಕಾಲೇಜು ಎಂದು ಹೇಳಿ.

ಶ್ರೀ ಜಿ.ವಿ. ಶ್ರೀರಾಮ ರೆಡ್ಡಿ: ನೋಡಿ, ನನಗೆ ವೈಯಕ್ತಿಕವಾಗಿ ಯಾರನ್ನೂ ದೂಷಣೆ ಮಾಡತಕ್ಕ ಅವಶ್ಯಕತೆ ಇಲ್ಲ.

ಶ್ರೀ ಎಂ ಬಿ. ಪಾಟೀಲ್: ಜನರಲೈಸ್ ಮಾಡಬೇಡಿರಿ. ಪರ್ಟಿಕ್ಯುಲರ್ ಆಗಿ ಹೇಳಿ. ಯಾವ್ಯಾವ ಕಾಲೇಜು ಎಂದು ಹೇಳಿ. ನಾವು ಉದಾಹರಣೆ ಕೊಡುತ್ತೇವೆ. ಯಾರ್‍ಯಾರ ಹೆಸರು ಇಟ್ಟುಕೊಂಡಿದ್ದೇವೆ ಎಂದು. ಜನರಲೈಸ್ ಮಾಡಬೇಡಿರಿ. ಎಲ್ಲಾ ಮೆಡಿಕಲ್ ಕಾಲೇಜ್ ಕೂಡ 50 ಪರ್ಸೆಂಟ್ ಸೀಟನ್ನು ಸರ್ಕಾರದ ಖೋಟಾದಲ್ಲಿ ಕೊಡುತ್ತಿತ್ತು. ಆನ್ ಫ್ರೀ ಬೇಸಿಸ್.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮ ರೆಡ್ಡಿ: ಹೋದ ವರ್ಷ ನಮ್ಮ ಮಾನ್ಯ ಧರ್ಮಸಿಂಗ್ ಅವರು ಮುಖ್ಯ ಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ ಯಾವ್ಯಾವ ಕಾಲೇಜಿನ ಮೇಲೆ ಏನೇನು ಕ್ರಮ ತೆಗೆದುಕೊಂಡಿದ್ದಾರೆ ಎಂಬ ಪ್ರಶ್ನೆ ಎಲ್ಲಾ ಆಯಿತು. ಅದೇ ರೀತಿಯಲ್ಲಿ ಇದೊಂದು ಹೆಸರನ್ನು ಇಡುತಿದ್ದೀರಿ. ಇದೊಂದು ಹೆಸರು ಇಟ್ಟು ಬಡ ಮಕ್ಕಳಿಗೆ ಅನ್ಯಾಯ ಮಾಡಲಿಕ್ಕೆ ವರ್ಲ್ಡ್ ಬ್ಯಾಂಕಿಗೆ ಅನುಗುಣವಾಗಿ ಶಿಕ್ಷಣವನ್ನು ರೂಪಿಸಲಿಕ್ಕೆ ಐಎಂಎಫ್‌ಗೆ ಅನುಗುಣವಾಗಿ ಶಿಕ್ಷಣವನ್ನು ರೂಪಿಸಲಿಕ್ಕೆ ಇದನ್ನು ಲಿಬರಲೈಸೇಷನ್ ಹೆಸರಿನಲ್ಲಿ, ಯಾರು ಶಕ್ತಿವಂತರು ಇದ್ದರೆ. ಅವರು ಓದಿಕೊಳ್ಳಬಹುದು. ಶಕ್ತಿ ಇಲ್ಲದೇ ಇರತಕ್ಕವರಿಗೆ ವಿದ್ಯಾಭ್ಯಾಸ ಇಲ್ಲ. ಅಂತಹ ಟೆಕ್ನಿಕಲ್ ಎಜ್ಯುಕೇಶನ್ ಇಲ್ಲ ಅಂತ ಮಾಡುತ್ತಿದ್ದೀರಿ. ಆದ್ದರಿಂದ ಈ ಬಿಲ್ ನಮ್ಮ ದೇಶದ ಮಕ್ಕಳಿಗೆ ಉಪಯೋಗ ಆಗತಕ್ಕದ್ದು ಅಲ್ಲ. ನಮ್ಮ ದೇಶದ ಹುಡುಗರಿಗೆ ಉಪಯೋಗ ಆಗತಕ್ಕದ್ದು ಅಲ್ಲ. ಆದ್ದರಿಂದ ಏನು ವೆಸ್ಟ್‌ಬೆಂಗಾಲೆ ಎಂದು ಹೇಳಿ ಅಲ್ಲಿ ಕುಳಿತುಕೊಂಡು ಗೊಣಗುತ್ತಿದ್ದೀರಲ್ಲಾ; ತರಿಸಿ ನೋಡಿ; ಆದ್ದರಿಂದ ಈ ಬಿಲ್ ಅನ್ನು ಯಾವುದೇ ಕಾರಣದಿಂದ ಒಪ್ಪಲಿಕ್ಕೆ ಸಾಧ್ಯವಿಲ್ಲ.

ಶ್ರೀ ಅರಗಜ್ಞಾನೇಂದ್ರ: ಬಹಳ ಭಯ ಭೀತಿ ಎಲ್ಲಾ ಇದೆ. ಏನೋ ವರ್ಲ್ಡ್ ಬ್ಯಾಂಕಿನಿಂದ ದುಡ್ಡು ಬಂದು ಬಿಟ್ಟರೆ ಏನೋ ಅಲ್ಲೋಲ ಕಲ್ಲೋಲ ಆಗುತ್ತದೆ ಎಂಬು ಭಾವನೆ ಇದೆ. ಈಗ ನಮ್ಮ ನೀತಿ ಏನು ಎಂಬುದನ್ನು ನಾವು ಸ್ಪಷ್ಟಪಡಿಸಬೇಕಾಗುತ್ತದೆ.

ಶ್ರೀ ಜಿ.ವಿ. ಶ್ರೀ ರಾಮ ರೆಡ್ಡಿ: ಗೋವಿಂದಾಚಾರ್ಯರದ್ದು ಕೇಳಿ.

ಶ್ರೀ ಅರಗ ಜ್ಞಾನೇಂದ್ರ: ಸಾರ್ ಕೇಳಿ. ಗೋವಿಂದಾಚಾರ್ಯರದ್ದು, ನಿಮ್ಮದು ಪಶ್ಚಿಮ ಬಂಗಾಳದ ವಿಚಾರ.

ಶ್ರೀ ವೈಜನಾಥ ಪಾಟೀಲ್: ಡಿಸ್ಕಶ್ಷನ್ ಆಗಿದೆ, ಅದನ್ನು ಒಪ್ಪಬೇಕು ಎಂದಿಲ್ಲ.

ಶ್ರೀ ಅರಗ ಜ್ಞಾನೇಂದ್ರ: ಸಾರ್, ಒಂದು ನಿಮಿಷ. ನಾವು ಯಾವ್ಯಾವುದಕ್ಕೆ ವರ್ಲ್ಡ್ ಬ್ಯಾಂಕಿನಿಂದ ಹಣ ತರಲಿಲ್ಲ? ಈ ದೇಶದಲ್ಲಿ ಹೆಲ್ತ್‌ಗೆ ತಂದಿದ್ದೇವೆ. ಆಸ್ಪತ್ರೆಗಳನ್ನು ಕಟ್ಟಲಿಕ್ಕೆ, ಪ್ರತಿಯೊಂದಕ್ಕೂ ತಂದಿದ್ದೇವೆ. ಫಾರೆಸ್ಟ್ ಬೆಳೆಯಲಿಕ್ಕೆ ತಂದಿದ್ದೇವೆ. ನೀರಾವರಿಗೆ ತಂದಿದ್ದೇವೆ, ರಸ್ತೆ ಮಾಡಲಿಕ್ಕೆ ತಂದಿದ್ದೇವೆ. ಒಂದು ಯಾವುದೋ ಕಾಲೇಜಿಗೆ ನಾವು ಸರಿಯಾದ ಲೆಕ್ಚರರ್ ಕೊಡುವುದಿಲ್ಲ. ಬಿಲ್ಡಿಂಗ್ ಕೊಡುವುದಿಲ್ಲ. ಫರ್ನೀಚರ್ ಕೊಡುವುದಿಲ್ಲ. ಸರಿಯಾದ ಲ್ಯಾಬ್ ಕೊಡುವುದಿಲ್ಲ. ನಮ್ಮ ಮಕ್ಕಳಿಗೆ ತೆಗೆದುಕೊಂಡು ಹೋಗಿ ಕಾಲೇಜಿಗೆ ಹಾಕುತ್ತೇವೆ. ಏನೂ ಕೂಡ ಕೊಡುವುದಿಲ್ಲ. ಒಂದು ಜಾಗತಿಕ

ಮಟ್ಟದ ಶಿಕ್ಷಣ ವ್ಯವಸ್ಥೆ ಒಂದು ಕಾಲೇಜಿನಲ್ಲಿ ಇರಬೇಕೆಂದು ಹೇಳಿ ನಾವು ಆಪೇಕ್ಷೆ ಪಡುವುದಾದರೆ ಇಲ್ಲಿ ಕುಳಿತುಕೊಂಡು ವರ್ಲ್ಡ್ ಬ್ಯಾಂಕಿನಿಂದ ಹಣ ತಂದ ಕೂಡಲೇ ಬ್ರೈನ್ ಎಲ್ಲಾ ಬದಲಾವಣೆ ಆಗುತ್ತದೆ. ಮೆದುಳನ್ನು ಎಲ್ಲಾ ಕಟ್ ಮಾಡಿ ಬೇರೆ ಏನೋ ಇಡುತ್ತಾರೆ. ಏಕೆ ಈ ಭಯಗಳು ಎಂದು. ನನಗಂತೂ ಅರ್ಥ ಆಗುವುದಿಲ್ಲ. ನಾವೇನೂ ಪೂರ್ತಿ ಸ್ವಾತಂತ್ರ್ಯ ಕಳೆದು ಕೊಳ್ಳುವುದಿಲ್ಲವಲ್ಲಾ. ವರ್ಲ್ಡ್ ಬ್ಯಾಂಕಿನವರಿಗೆ ಅಂಥದ್ದು ಏನಾದರೂ ಆಗುತ್ತದೆ ಎಂದರೆ ಈಗಾಗಲೇ ಮಾನ್ಯ ಸಚಿವರು ಬದಲಾವಣೆ ಮಾಡಲಿಕ್ಕೆ ಬರುತ್ತದೆ ಎಂದು ಹೇಳಿದರು. ಸರ್ಕಾರ ಏನು ಪೂರ್ತಿಯಾಗಿ ಪವರ್ ಆಫ್ ಅಟಾರ್ನಿ ಬರೆದುಕೊಡುತ್ತದೇನು?

ಶ್ರೀ ಕೆ.ಆರ್. ರಮೇಶ್ ಕುಮಾರ್: ನಮ್ಮ ಭಯಕ್ಕೆ ಕಾರಣಗಳು.

ಶ್ರೀ ಅರಗ ಜ್ಞಾನೇಂದ್ರ: ಅಲ್ಲಿ ಬಡವರ ಮಕ್ಕಳಿಗೆ ಪ್ರವೇಶ ಇಲ್ಲದೇ ಇದ್ದರೆ.

ಶ್ರೀ ಕೆ.ಆರ್. ರಮೇಶ್ ಕುಮಾರ್: ಪೂಜ್ಯರಾದ ನಾನಾಜಿ ದೇಶಮುಖಿ ಅವರ ಹತ್ತಿರ ಕೇಳಿದರೆ ನಮ್ಮ ಕಾರಣಗಳು ಏನು ಎಂದು ಹೇಳುತ್ತಾರೆ. ನಾನಾಜಿ ದೇಶಮುಖಿ ಅವರ ಹತ್ತಿರ ನೀವು ಚರ್ಚೆ ಮಾಡಿದರೆ ನಮ್ಮ ಭಯಕ್ಕೆ ಕಾರಣಗಳೇನು ಎಂದು ಹೇಳುತ್ತಾರೆ.

ಶ್ರೀ ಅರಗ ಜ್ಞಾನೇಂದ್ರ: ಸಾರ್ ಒಂದು ನಿಮಿಷ. ನಾನಾಜಿ ದೇಶಮುಖಿವರು, ಮಹಾತ್ಮಾ ಗಾಂಧಿಯವರು, ಏನೇನು ಹೇಳಿದ್ದಾರೆ. ಅವೆಲ್ಲವನ್ನೂ ಕೂಡ ಅನುಷ್ಠಾನಕ್ಕೆ ತರುವಂತಹ ಮಟ್ಟವನ್ನು ದಾಟಿ ಬಂದಿದ್ದೇವೆ. ನೀವು ನಾವೇಲ್ಲಾ. ಎಲ್ಲಿ ಅವರನ್ನು ನಾವು ಕೇಳಲೇ ಇಲ್ಲ. ಅವರನ್ನು ಮೂಲೆಗುಂಪು ಮಾಡಿದ್ದೇವೆ. ನಾವು ಪ್ರಾಮಾಣಿಕವಾಗಿ ಇದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಎಲ್ಲಿ ಸಾರ್? ನಾವು ಯಾವುದೋ ಒಂದು ಬಿಲ್‌ಗೋಸ್ಕರ ಮಾತನಾಡುವವರು ದೇಶಕ್ಕೆ ವರ್ಲ್ಡ್ ಬ್ಯಾಂಕನ್ನು ಹರಿಸಿದ್ದೇವಲ್ಲಾ, ಅವಾಗ ಯಾರೂ ಕೂಡ ಮಾತನಾಡಲಿಲ್ಲ. ಇದನ್ನು ನಾನು ಕೇಳುತ್ತೇನೆ. ಅಂತಹದ್ದು ಇದ್ದರೆ ಕೇಳುತ್ತೇನೆ. ಒಂದು ಸಣ್ಣ ಕಾಲೇಜನ್ನು ಅಟೋನಮಿ ಮಾಡುವುದಕ್ಕೆ ಹೊಟಿದ್ದೇವೆ ಅಷ್ಟೇ ಬೇರೆ ಅಲ್ಲ.

(ಗೊಂದಲ)

ಶ್ರೀ ಅರಗ ಜ್ಞಾನೇಂದ್ರ: ಡಬ್ಲ್ಯೂಟಿಓ, ಇದರ ಬಗ್ಗೆ ನಾವು ಬೊಬ್ಬೆ ಹೊಡೆದೆವು. ಹೋಗಿ ನಾವು ಸಿಗ್ನೇಚರ್ ಹಾಕಿ ಬರಲಿಲ್ಲವಾ? ಗ್ರ್ಯಾಂಟ್ ಒಪ್ಪಂದಕ್ಕೆ ಏನು ಎಂದು ಕೇಳಿ. ಕಾರಣ ಅಂತಹ ಸಂದರ್ಭ ಬಂದಾಗ ನಾವು ಪ್ರೊಟೆಸ್ಟ್ ಮಾಡೋಣ. ಇಲ್ಲದಿದ್ದರೆ ಅರ್ಥವೇ ಇಲ್ಲ.

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಜ್ಞಾನೇಂದ್ರ ಅವರಿಗೆ ಗೊತ್ತಿಲ್ಲ. ಕೆಲವು ಸಲ ಅನಾಹುತ ಹೇಗೆ ಆಗುತ್ತದೆ ಎಂದರೆ.

ಶ್ರೀ ಡಿ. ಎಚ್. ಶಂಕರಮೂರ್ತಿ: ತಾವೇ ತಯಾರು ಮಾಡಿದ್ದು, ತಾವು ಆರ್ಡಿನೇನ್ಸ್ ರೆಡಿ ಮಾಡಿದ್ದಿರಿ. ತಮಗೆ ಯಾವುದೋ ಕಾರಣಕ್ಕೆ ಆರ್ಡಿನೆನ್ಸ್ ಮಾಡಲು ಆಗಲಿಲ್ಲ. ಅದು ಹಾಗೆಯೇ ಉಳಿದಿತ್ತು. ಒಂದು ಬಿಲ್ ಆಗಿ ತರುತ್ತಿದ್ದೇವೆ. ಅದನ್ನು ತಾವೇ ತಯಾರು ಮಾಡಿ ತಾವೇ ವಿರೋಧ ಮಾಡಿ ಬಿಟ್ಟರೆ ನಾನೇನು ಹೇಳಲಿ?

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ: ಈಗ ಸ್ವಲ್ಪ ಕೇಳಿ. ಅನೇಕ ಬೆಲೆಗಳು ಇರುತ್ತವೆ. ನಾವು ಅಲ್ಲಿ ಏನು ಮಾತನಾಡುತ್ತೇವೆಂದು ಇಲ್ಲಿ ಹೇಳುವುದಕ್ಕೆ ಆಗುವುದಿಲ್ಲ.

ಶ್ರೀ ಡಿ.ಎಚ್. ಶಂಕರಮೂರ್ತಿ: ಒಳ್ಳೆಯದು, ಕೆಟ್ಟದ್ದು ಎಲ್ಲವನ್ನೂ ಬಿಟ್ಟು ಬಿಡುವುದಾ? ಒಳ್ಳೆಯದನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ: ನೀವು ಸ್ವಲ್ಪ ಈ ಕಡೆಗೆ ಕೇಳಿ ಹೇಳುತ್ತೇನೆ. ಅನೇಕ ಬಿಲ್‌ಗಳನ್ನು ಕ್ಯಾಬಿನೆಟ್‌ನಲ್ಲಿ ನಾವು ತಯಾರು ಮಾಡುತ್ತೇವೆ. ಎಲ್ಲಕ್ಕೂ ಅಲ್ಲಿ ಡೀಸೆಂಟ್ ನೋಟ್ ಬರೆಯುವುದಕ್ಕೆ ಆಗುವುದಿಲ್ಲ. ಒಬ್ಬೊಬ್ಬರ ಅಭಿಪ್ರಾಯ ಒಂದು ಇರುತ್ತದೆ ಅದನ್ನು ಇಲ್ಲಿ ಹೇಳುತ್ತೇವೆ. ಅನೇಕ ಜನ ಆ ಕ್ಯಾಬಿನೆಟ್‌ನಲ್ಲಿದ್ದವರಿಗೆ ನಮ್ಮ ಅಭಿಪ್ರಾಯಗಳು ಹೇಗೆ ಯಾವ ಟೈಮಿನಲ್ಲಿ ಏನು ಆಕ್ಟ್ ಮಾಡಿದ್ದೇವೆ. ಮಾತನಾಡಿದ್ದೇವೆ ಬಹಳ ಜನಕ್ಕೆ ಗೊತ್ತಿದೆ. ಅದಕ್ಕೆ ಅದನ್ನು ಹೇಳಬೇಕಾಗಿಲ್ಲ. ಅವರವರ ವಿಚಾರದ ಮೇಲೆ ಹೋಗುತ್ತದೆ. ನಾನು ಏಕೆ ನಿಮಗೆ ಹೇಳುತ್ತೇನೆ ಅಂದರೆ. ಈಗ ಸೆಕ್ಷನ್ 4(ಬಿ) ಕೆಳಗಡೆ ತಾವು ನೋಡಿ. ಗವರ್ನಿಂಗ್ ಬಾಡಿ, ಅಕಾಡೆಮಿಕ್ ಕಾನ್ಸಿಲ್ ಬೋರ್ಡ್, ಸ್ಟಡೀಸ್ ಬೋರ್ಡ್, ಆಫ್ ಎಕ್ಸಾಮಿನಲ್ಸ್, ಆಟೋನಮಿ ಇವೆಲ್ಲಾ ನಾವು ಅವರಿಗೆ ಕೊಡುತ್ತೇವೆ. ಗವರ್ನಿಂಗ್ ಬಾಡಿ ಏನು ಎಂದರೆ ಇದು ಮೋರ್ ಆರ್ ಲೆಸ್ ಅಡ್ಮಿನಿಸ್ಟ್ರೇಷನ್. ಹೆಚ್ಚು ಅಡ್ವೈಸರಿಂಗ್ ಇರುತ್ತದೆ. ಗವರ್ನಿಂಗ್ ಬಾಡಿನಲ್ಲಿ ಅಡ್ಮಿನಿಸ್ಟ್ರೇಷನ್ ಇರುತ್ತದೆ. ಗವರ್ನಿಂಗ್ ಬಾಡಿನಲ್ಲಿಎಷ್ಟೋ ಸಲ ಡಿಸಿಷನ್ ತೆಗೆದುಕೊಂಡಿರುತ್ತಾರೆ, ಇಂಪ್ಲಿಮೆಂಟ್ ಮಾಡಬೇಕಾಗುತ್ತದೆ. ನಾನು ಒಂದೇ ಒಂದು ಉದಾಹರಣೆ ಹೇಳುತ್ತೇನೆ. ಅನಾಹುತ ಹೇಗೆ ಆಗುತ್ತದೆ ಎಂದು ಹೇಳುತ್ತೇನೆ. ಪಂಚವಾರ್ಷಿಕ ಯೋಜನೆಗಳಲ್ಲಿ ಪ್ರತಿ ಹಳ್ಳಿಗಳಿಗೆ ಪ್ರೈಮರಿ ಸ್ಕೂಲು ತೆರೆಯಲೇಬೇಕು ಎಂದು ಹೇಳಿ ಕಡ್ಡಾಯ ಶಿಕ್ಷಣ ಕಾನೂನಿನ ಅಡಿಯಲ್ಲಿ ಇದೆ. ಕಂಪಲ್ಸರಿ ಆಕ್ಟ್ ಕಡೆ ಎಲ್ಲಾ ಕಡೆ ಕನಿಷ್ಟ ಅಂದರೆ 40 ಮಕ್ಕಳು ಎಲ್ಲಿ ಇರುತ್ತಾರೋ, ಅಲ್ಲಿ ಒಂದು ಶಾಲೆ ತೆಗೆಯಬೇಕೆಂದು ಒಂದು ಪಾಲಿಸಿ

ಮಾಡಿದ್ದರು. ಆಗ ಎಲ್ಲಾ ಹಳ್ಳಿಗಳಿಗೆ ಸ್ಕೂಲುಗಳನ್ನು ಪ್ರಾರಂಭ ಮಾಡಬೇಕೆಂದು ಹೇಳಿ ಪ್ರಾರಂಭ ಆಯಿತು. ಬುದ್ದಿವಂತರು ಏನಿದ್ದಾರೆ, ತಮ್ಮಂತಹ ಬುದ್ಧಿವಂತರು, ಅಂದರೆ, ನೀವು ಸಿಟ್ಟಿಗೆ ಬರಬೇಡಿ. ಅಲ್ಲಿ ಏನು ಮಾಡಿದರು ಎಂದರೆ, ಕೆಲವು Educationists. ಈಗ ಯಾವ ರೀತಿಯಾಗಿ ಅಟಾನಮಸ್ ಕೇಳುತ್ತಾರಲ್ಲಾ ಐದು ಸಾವಿರ ವೇಕೆನ್ಸಿಗಳು ಬರುತ್ತದಲ್ಲಾ ಏನು ಮಾಡುವುದು? ಅದನ್ನು ಯಾವ ರೀತಿಯಾಗಿ ಗಿಟ್ಟಿಸಿಕೊಳ್ಳಬೇಕು? ಎಂದು ಅವರು ಏನು ಮಾಡಿದರು ಎಂಬುದನ್ನು ಹೇಳುತ್ತೇನೆ ಈ ಹಿಂದೆ ತಮಗೆ ಅನುಭವ ಇದೆ, ತಾವು Teacher's Constituency ಯಿಂದ ಬಂದವರು, Graduate Constituency ಯಿಂದ ಬಂದವರು. ಹಿಂದೆ ಏನಿತ್ತು ಎಂದರೆ, ಟೀಚರ್‌ಗಳು ರಿಕ್ರೂಟ್ ಆದಾಗ ಅವರಿಗೆ ಡಿಸ್ಟ್ರಿಕ್ಟ್‌ಲ್ಲಿ ಟ್ರೈನಿಂಗ್ ಕೊಡುತ್ತಿದ್ದರು. ಆಗ ಟಿಸಿಎಚ್‌ಗೆ ಹೋಗುತ್ತಿದ್ದರು, ಇಲ್ಲವಾದರೆ ಬಿಎಡ್ ಮಾಡಿದವರು ಬಿಎಡ್ ಕಾಲೆಜಿಗೆ ಹೋಗುತ್ತಿದ್ದರು. ಪ್ರತಿ ಜಿಲ್ಲೆಯಲ್ಲೂ ಬಿಎಡ್ ಕಾಲೇಜುಗಳಿದ್ದು, ಟಿಸಿಎಚ್ ಟ್ರೈನಿಂಗ್ ಸ್ಕೂಲ್ ಇತ್ತು. ಅವರಿಗೆ ಏನು ಸ್ವಾಮಿ ಕ್ವಾಲಿಫಿಕೇಶನ್ ಇತ್ತು? ಎಸ್.ಎಸ್.ಎಲ್.ಸಿ ಇದ್ದರೆ, ಅವರು ಸ್ಕೂಲ್ ಮೇಷ್ಟ್ರು. ಆನಂತರ ಗ್ರ್ಯಾಜುಯೇಟ್ ಆಗಿದ್ದವರು ಹೈಸ್ಕೂಲಿಗೆ ಟೀಚರ್. ಬುದ್ಧಿವಂತರಾದ ಇವರೇನು ಮಾಡಿದರು? ಮುಂದೆ ಸಿಲಬಸ್‌ನಲ್ಲಿ ಅದನ್ನು add ಮಾಡಿದರು. ಏನು ಮಾಡಿದರು ಎಂದರೆ, SSLC with TCH ಮತ್ತು ಬಿ.ಎ, ಬಿಎಡ್ ಅಂತ ಮಾಡಿದರು. ಯಾರು ಮಾಡಿದರು? ಯಾರು ಅಡ್ಮಿನಿಸ್ಟ್ರೇಷನ್‌ನಲ್ಲಿ ಅವರ ಪ್ರಾಬಲ್ಯ ಹೊಂದಿದ್ದರೋ, ಅವರು ಏನು ಮಾಡಿದರು ಎಂದರೆ, ತಮಗೆ ಬೇಕಾದ ಏರಿಯಾದಲ್ಲಿ, ನಾಲ್ಕೈದು ಜಿಲ್ಲೆಗಳಲ್ಲಿ ಬಿಎಡ್ ಮತ್ತು ಟಿಸಿಹೆಚ್ ಕಾಲೇಜುಗಳನ್ನು ತೆಗೆದರು. ಓಸಿಹೆಚ್ ತೆರೆದ ಮೇಲೆ ರಿಕ್ರೂಟ್‌ಮೆಂಟ್ ರೂಲ್ಸ್‌ನಲ್ಲಿ ಟಿಸಿಹೆಚ್ ಇರಬೇಕು, ಬಿಎಡ್ ಇರಬೇಕೆಂದು ಕ್ವಾಲಿಫೀಕೇಶನ್ ಏನು ಸೇರಿಸಿದರು. ನೀವು ನೋಡಿರಬಹುದು. ನಿಮ್ಮ ಅನುಭವಕ್ಕೆ ಬಂದಿದೆಯೋ, ಇಲ್ಲವೋ, ಏನೋ? ನಾನು ಈ ಮಾತನ್ನು ಏಕೆ ಹೇಳುತ್ತೇನೆಂದರೆ, ಒಂದೇ ಒಂದು ಅಮೆಂಡ್‌ಮೆಂಟ್‌ನಿಂದ ಹೇಗೆ ಅನಾಹುತವಾಗುತ್ತದೆ ಎಂಬುದನ್ನು ತೋರಿಸುವುದಕ್ಕೋಸ್ಕಾರ. ಬೇರೆ ಕಡೆ ಎಲ್ಲೂ ಇಲ್ಲ. ಏಕೆಂದರೆ, ಬೇರೆ ಕಡೆ ಪ್ರೈವೇಟ್ ಸ್ಕೂಲ್ ಇಲ್ಲ. ಬೇರೆ ಕಡೆ ಕಾಲೇಜುಗಳಿಲ್ಲ. ಬೇರೆಯವರ್‍ಯಾರೂ ಬಿಎಡ್ ಮಾಡುವಂತಿಲ್ಲ. ಟಿಸಿಹೆಚ್ ಇಲ್ಲ. ಅವರು ಬರೀ ಎಸ್.ಎಸ್.ಎಲ್.ಸಿ, ಬಿ.ಎ ಮಾಡಿ ನಂತರ ಟ್ರೈನಿಂಗ್ ಹೋಗುತ್ತಿದ್ದರು. ಅದೆಲ್ಲಾ ತಪ್ಪಿಹೋಯಿತು. ಪ್ರೈವೇಟ್ ಸ್ಕೂಲುಗಳಲ್ಲೂ ತಪ್ಪಿಹೋದವು. ಗವರ್ನಮೆಂಟ್ ಸ್ಕೂಲ್‌ನಲ್ಲೂ

ತಪ್ಪಿಹೋಯಿತು. ರೋಸ್ಟರ್ ತಪ್ಪಿಹೋಯಿತು, ಎಲ್ಲವೂ ಹೋಯಿತು. ನಾನು 1976ರಲ್ಲಿ Primary and Secondary Education ಮಂತ್ರಿಯಾದೆ. ಇಡೀ ರಾಜ್ಯದಲ್ಲಿ ಎಷ್ಟು ಜನ ಟೀಚರ್ಸ್ ಪ್ರೈಮರಿ ಸ್ಕೂಲ್‌ನಲ್ಲಿದ್ದಾರೆ ಎಂಬುದನ್ನು ತಿಳಿದುಕೊಳ್ಳಲು ಆ ಕಾಲದಲ್ಲಿ ಸುಮಾರು 1 ಲಕ್ಷ 2 ಸಾವಿರ (ನಾನು ರೋಸ್ಟರ್ ತರಿಸಿದೆ. ಪ್ರೈಮರಿ ಸ್ಕೂಲ್ ಟೀಚರ್ಸ್ ಇದ್ದರು. ಹೈಸ್ಕೂಲ್ ಟೀಚರ್ಸ್ ಸುಮಾರು 18 ಸಾವಿರ ಇದ್ದರು. Percentage of roster ಪ್ರಕಾರ ಇವೆಲ್ಲವನ್ನೂ ಅಪಾಯಿಂಟ್‌ಮೆಂಟ್ ಮಾಡಬೇಕೆಂದು ಹೇಳಿದರು. ಇವೊತ್ತು ನಾನು ಹೇಳುತ್ತೇನೆ). 1 ಲಕ್ಷ 2 ಸಾವಿರ ಶಿಕ್ಷಕರಲ್ಲಿ ಈ ರಿಸರ್ವೇಶನ್ ಕ್ಯಾಟಗಿರಿಯಲ್ಲಿ ಬರುವ ಎಸ್‌ಸಿ/ಎಸ್‌ಟಿಯವರು ಕೇವಲ 4,600 ಜನರಿದ್ದರು. ಏಕೆ ಅವರಿಗೆ ಅಲ್ಲಿ ಸಿಕ್ಕಿತ್ತು? ಬರೀ ಯಾವಾಗ ಎಸ್.ಎಸ್.ಎಲ್.ಸಿ ಮತ್ತು ಗ್ರಾಜ್ಯುಯೇಷನ್ ಕ್ವಾಲಿಫಿಕೇಶನ್ ಇದ್ದಾಗ ಸೇರಿದವರು ಮಾತ್ರ 1976ರಲ್ಲಿ ನಾನು ಯೋಚನೆ ಮಾಡಿದೆ. ಇಲ್ಲಿವರೆಗೆ ಬಿಎಸ್.ಸಿ. ಬಿಎ ಮತ್ತು ಎಸ್,ಎಸ್,ಎಲ್,ಸಿ ಮಾತ್ರ ಇತ್ತು. ಈಗ ಅದು ಟಿಸಿಎಚ್ ಎಂದ ಕೂಡಲೇ ಬೇರೆಯವರಿಗೆ ಅನ್ಯಾಯವಾಗುತ್ತದೆ. ಇದು ಸರಿಯಲ್ಲ ಎಂದೆನಿಸಿತು. ಆಗ ಎಲ್ಲರೂ ವಿರೋಧ ಮಾಡಿದರು. ಎಜ್ಯುಕೇಷನ್ ಸ್ಟಾಂಡರ್ಡ್ ಕಡಿಮೆಯಾಗುತ್ತದೆ, ಎಲ್ಲಾ ಕೊಲಾಫ್ಸ್ ಆಗುತ್ತದೆಂದು ಯಾರ್‍ಯಾರು ಪ್ರಪೋಸ್ ಮಾಡಿದ್ದರೋ, ಅವರಿಗೆ ನಾನು ಹೇಳಿದೆ: ಹಿಂದಿನವರೆಗೆ ಎಸ್.ಎಸ್.ಎಲ್.ಸಿ ಮಾಡಿ ಅವರು ಕಲಿಸುತ್ತಿದ್ದರು. ಆಗ ಸ್ಟಾಂಡರ್ಡ್ ಚೆನ್ನಾಗಿತ್ತು. ಬಿಎ, ಬಿಎಸ್ಸಿ ಮಾಡಿ ಅವರು ಹೈಸ್ಕೂಲ್ ಟೀಚರ್ ಆಗಿದ್ದಾಗ ಚೆನ್ನಾಗಿತ್ತು. ಈಗ ನಾವು ವೀಕರ್ಸ್ ಸೆಕ್ಷನ್ ಸಲುವಾಗಿ ಇದನ್ನು (Exeption ಮಾಡಿ ನೀವು ರಿಕ್ರೂಟ್ ಮಾಡಬೇಕು. ಅನಂತರ ಅವರಿಗೆ ಟ್ರೈನಿಂಗ್ ಕೊಡಿ. ಟ್ರೈನಿಂಗ್‌ನಲ್ಲಿ ಫೇಲ್ ಆದರೆ, ಮನೆಗೆ ಕಳುಹಿಸಿ ಎಂದು ಹೇಳಿದರೆ, ಸ್ಟಾಂಡರ್ಡ್ ಕಡಿಮೆಯಾಗುತ್ತದೆಂದು. ಹಾಗಾದರೆ, ಡಿಸ್ಟ್ರಿಕ್ಟ್‌ನಲ್ಲಿರುವ ಬಿಎಡ್ ಕಾಲೇಜುಗಳೆಲ್ಲವೂ ಮುಚ್ಚಿ ಟಿಸಿಎಚ್ ಕಾಲೇಜುಗಳೆಲ್ಲವನ್ನೂ ಮುಚ್ಚಿ. ಅಂದೆ, ಆಗ ಆ ಕಾಲದಲ್ಲೇ ಸುಮಾರು 18 ಸಾವಿರ ಜನರಿಗೆ ನಾನು) Special Recruitment ಮಾಡಿಸಿದೆ. ಮಕ್ಕಳೇನೂ ದಡ್ಡರಾಗಲಿಲ್ಲ. ನಾನು ಹೇಳುವುದು ನಿಮಗೆ ಅರ್ಥವಾಗಿರಬೇಕು. ಈಗ ಅಟಾನಮಿಯನ್ನು ನೀವು ಒಂದು ಕಡೆ ಕೊಟ್ಟ ಕೂಡಲೇ ಅವರ ಸಿಲಬಸ್ ಬೇರೆಯಾಗುತ್ತದೆ, ಅವರ ಅಡ್ಮಿಷನ್ ಕಂಡಿಷನ್ಸ್ ಬೇರೆಯಾಗುತ್ತದೆ. ಆಗ ಏನಾಗುತ್ತದೆಂದರೆ, ಬಡ ಮಕ್ಕಳಿಗೆ ನೀವು ಅಡ್ಮಿಷನ್ ಕ್ಲೋಸ್ ಮಾಡಿದಂತಾಗುತ್ತದೆ, ಬಾಗಿಲು ಬಂದ್ ಮಾಡಿದಂತಾಗುತ್ತದೆ. ಈಗ ನೋಡುತ್ತೇವಲ್ಲಾ? ನಿಮಗೇ ಗೊತ್ತಿದೆ. ಅನೇಕ

ಮೆರಿಟ್ ಹೆಸರಿನ ಮೇಲೆ, ಸ್ಟಾಂಡರ್ಡ್ ಸ್ಕೂಲ್ ಹೆಸರಿನ ಮೇಲೆ ಇಷ್ಟೇ ಮಾರ್ಕ್ಸ್ ಇರಬೇಕು, ಅಂತಹವರೇ ಬರಬೇಕೆಂದು ಹೇಳಿದ ಕೂಡಲೇ ಬೇರೆಯವರಿಗೆ ಅವಕಾಶವಿರುವುದಿಲ್ಲ. ಅದಕ್ಕೋಸ್ಕರ, ನಾನು ತಮ್ಮಲ್ಲಿ ಕೇಳಿಕೊಳ್ಳುವುದಿಷ್ಟೆ. ನಿಮ್ಮ ಕೈಯ್ಯಲ್ಲಿರುವ ಅಧಿಕಾರವನ್ನು ಹತ್ಯಾರವನ್ನು ಅಟಾನಮಸ್ ಇನ್‌ಸ್ಟಿಟ್ಯೂಷನ್‌ಗೆ ಏಕೆ ಕೊಡುತ್ತೀರಿ? ಸಿಲಬಸ್ ಎಲ್ಲಾ ಕಡೆ ಒಂದೇ ರೀತಿ ಇರತಕ್ಕಂಥಾದ್ದು, ಯೂನಿವರ್ಸಿಟಿ ಮುಖಾಂತರ ಇರತಕ್ಕಂಥಾದ್ದು ಬಹಳ ಮುಖ್ಯ. ನಿಮಗೆಲ್ಲಾ ಗೊತ್ತಿದೆ. ಈ ಬಣದವರು ಹೀಗೆ ಮಾಡಿದ್ದಾರೆ, ಆ ಬಣದವರು ಹಾಗೆ ಮಾಡಿದ್ದಾರೆಂದು ಸಿಲಬಸ್‌ಗೋಸ್ಕರವೇ Government of Indiaದಲ್ಲೂ ಜಗಳವಾಯಿತು. ಅದಕ್ಕಾಗಿ ಎಜ್ಯೂಕೇಷನ್ ಕೇಸರಿಮಯವಾಯಿತು ಅದರ ಬಗ್ಗೆ ನಾನು ಹೇಳುವುದಕ್ಕೆ ಹೋಗುವುದಿಲ್ಲ. My Humble Request is. ಈ ರೀತಿಯಲ್ಲಿ, ಒಂದಲ್ಲ ಒಂದು ರೀತಿಯಲ್ಲಿ introduction ಮಾಡಿ. ಬೇರೆ ಬಡವರಿಗೆ ಮತ್ತು ಮೆರಿಟ್ ಸ್ಟೂಡೆಂಟ್‌ಗಳಿಗೆ ಅದರಲ್ಲಿ ಜಾತಿಗಳಂತಲ್ಲ, ಎಲ್ಲಾ ಮಕ್ಕಳಲ್ಲೂ ಬಡವರಿದ್ದಾರೆ ಮತ್ತು ಮೆರಿಟ್‌ನವರೂ ಇದ್ದಾರೆ. ಅವರಿಗೂ ಕೂಡ ನಾವು ನಿಲ್ಲಿಸುತ್ತೇವೆ, ಪ್ರಿವೆಂಟ್ ಮಾಡುತ್ತೇವೆ. ಇದು ಆಗುತ್ತದೆ. ದಯವಿಟ್ಟು ಒಂದನ್ನು ನಾವು ಸ್ವಾಗತಿಸುತ್ತೇವೆ. ಯಾವುದೆಂದರೆ, ಸೆಕ್ಷನ್ 5 ಏನಿದೆ, ಅದರ ಪ್ರಕಾರ ನೀವು ಮಾಡಬಹುದೆಂದು ಹೇಳಿದ್ದೀರಿ. ನಾವು ಇಂಟ್ರಡ್ಯೂಸ್ ಮಾಡಬಹುದು. ಕಂಟ್ರೋಲ್ ಮಾಡಬಹುದೆಂದು ಹೇಳಿದ್ದೀರಿ. ಉಳಿದಿದ್ದನ್ನು 4(ಬಿ)ಯಲ್ಲಿ ಕೊಟ್ಟದ್ದನ್ನು ನೀವು ಆ ಅಧಿಕಾರ ಕೊಟ್ಟರೆ, ಖಂಡಿತವಾಗಿಯೂ ಇದರಿಂದ ಬಡ ಮಕ್ಕಳಿಗೆ, ಮೆರಿಟ್ ಹುಡುಗರಿಗೆ ಹೊಡೆತ ಬೀಳುತ್ತದೆ. ಯಾರೂ ಆಟಾನಮಸ್ ಕಾಲೇಜು ಹತ್ತಿರ ಅಡ್ಡಾಡುವುದಿಲ್ಲ, ಹೋಗುವುದಿಲ್ಲ ಮತ್ತು ಅದರ ಲಾಭ ಅವರಿಗೆ ಸಿಗುವುದೂ ಇಲ್ಲ.

(ಈ ಹಂತದಲ್ಲಿ ಸದಸ್ಯರಾದ ಶ್ರೀ ಎಂ.ಬಿ. ಪಾಟೀಲ್‌ರವರು ಮಾತನಾಡಲು ಎದ್ದು ನಿಂತರು)

ಉಪಾಧ್ಯಕ್ಷರು: ಮಂತ್ರಿಯವರೆ, ತಮ್ಮ ಅಭಿಪ್ರಾಯ ಏನೆಂದು ಹೇಳಿ. ಪಾಟೀಲರೇ, ಕುಳಿತುಕೊಳ್ಳಿ. ಆಗುವುದಿಲ್ಲ.

ಶ್ರೀ ಡಿ.ಹೆಚ್.ಶಂಕರಮೂರ್ತಿ: ಸಾಕಷ್ಟು ವಿಷಯಗಳನ್ನು ಪ್ರಸ್ತಾಪಿಸಿದ್ದಾರೆ. ಒಂದೆರಡಕ್ಕೆ ಮಾತ್ರ ಕ್ಲಾರಿಫಿಕೇಶನ್ ಮಾಡಬೇಕೆಂದು ನನಗನಿಸುತ್ತದೆ.

(ಈ ಹಂತದಲ್ಲಿ ಹಲವಾರು ಮಾನ್ಯ ಸದಸ್ಯರುಗಳು ಮಾತನಾಡಲು ಎದ್ದು ನಿಂತರು)

ಉಪಾಧ್ಯಕ್ಷರು: ಎಲ್ಲರೂ ಮಾತನಾಡಿದ್ದೀರಲ್ಲಾ, ಮಾತನಾಡಿದ್ದೇ ಮಾತನಾಡುತ್ತಾ ಹೋದರೆ ಹೇಗೆ? ಆಗಲೇ ಎಲ್ಲರೂ ಮಾತನಾಡಿದ್ದೀರಿ.

ಶ್ರೀ ಡಿ.ಹೆಚ್. ಶಂಕರಮೂರ್ತಿ: ಅಟಾನಮಿ ಬರೇ ಪ್ರೈವೇಟ್ ಕಾಲೇಜುಗಳಿಗಲ್ಲ. ಈಗ ನೋಡಿ, ಈ ಲಿಸ್ಟ್‌ನೊಳಗೆ ಡಿಡಿಟಿ ಕಾಲೇಜು ಇದೆ, ಅದು ಬರುತ್ತದೆ. ಅದು ಸರ್ಕಾರಿ ಕಾಲೇಜು. ಸರ್ಕಾರಿ ಕಾಲೇಜುಗಳಿಗೂ ಸಹ ಅವಕಾಶ ಇದೆ, ಕೊಡುವವರಿದ್ದೇವೆ.

(ಈ ಹಂತದಲ್ಲಿ ಸದಸ್ಯರಾದ ಶ್ರೀ ಎ.ಕೃಷ್ಣಪ್ಪನವರು ಎದ್ದು ನಿಂತು ಮಾತನಾಡಿದ್ದು ಸ್ಪಷ್ಟವಾಗಿ ಕೇಳಿಸಲಿಲ್ಲ)

ಶ್ರೀ. ಖಿ. ಹೆಚ್. ಶಂಕರಮೂರ್ತಿ: ಸ್ವಲ್ಪ ನಾನು ಹೇಳುವುದನ್ನು ಕೇಳಿ, ನೀವು ಹೇಳಿದ್ದನ್ನು ನಾನು ಪೂರ್ತಿ ಕೇಳಿದ್ದೇನೆ. ನಾನು ಹೇಳುವುದನ್ನು ನೀವು ಕೇಳುವುದಿಲ್ಲವೆಂದರೆ ಹೇಗೆ?

ಶ್ರೀ ಎ. ಕೃಷ್ಣಪ್ಪ: ಈ ವಿಚಾರದಲ್ಲಿ ನಾವು ಒಂದೆರಡು ಮಾತುಗಳನ್ನು ಹೇಳಬೇಕಾಗುತ್ತದೆ. ದಯಮಾಡಿ ತಾವು ಯೀಲ್ಡ್ ಆಗಬೇಕಾಗುತ್ತದೆ. ಮಾನ್ಯ ಉಪಾಧ್ಯಕ್ಷರೆ, ಈಗ ಡಿಸ್‌ಕರ್ಷನ್ ಆಗದೆ ಹಲವಾರು ಹೊಸ ವಿಚಾರಗಳು ನಮ್ಮ ಗಮನಕ್ಕೆ ಬಂದಾಗ ನಾವು ನಿಮ್ಮ ಮುಖಾಂತರ ಸರ್ಕಾರಕ್ಕೆ ಹೇಳಬೇಕಾಗುತ್ತದೆ. ಈಗಾಗಲೇ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್‌ನಲ್ಲಿ ಮೊನ್ನೆ ಇಂಟ್ರಡ್ಯೂಸ್ ಮಾಡಿದಾಗ ಒಂದು ದೊಡ್ಡ ಆಘಾತ ಬಡವರ ಮೇಲೆ ಬಿದ್ದಿದೆ. ಅದೇನೆಂದರೆ, ಇವೊತ್ತು ನಾವು ರಿಇಂಬರ್ಸ್‌ಮೆಂಟ್ ಕೊಡುವಂಥ ಸಂದರ್ಭದಲ್ಲಿ 80 ಪರ್ಸೆಂಟ್ ಯಾರು ಮಾರ್ಕ್ಸ್ ಪಡೆದುಕೊಂಡಿರುತ್ತಾರೋ, ಅವರಿಗೆ ರಿಇಂಬರ್ಸ್‌ಮೆಂಟ್ ಕೊಡುತ್ತೇವೆಂದು ಇವರು ಮೊನ್ನೆ ಬಜೆಟ್‌ನಲ್ಲಿ ಅನೌನ್ಸ್ ಮಾಡಿದ್ದಾರೆ. ಅಂದರೆ, 80 ಪರ್ಸೆಂಟ್ ಮಾರ್ಕ್ಸ್ ಪಡೆದುಕೊಳ್ಳುವಂಥ ಮಕ್ಕಳು ಯಾರು? That goes only to the Intellectual Section.

ಉಪಾಧ್ಯಕ್ಷರು: ನಿಮಗೆ ಮಾತನಾಡಲು ಆಗಲೇ ಅವಕಾಶ ಕೊಟ್ಟಾಯಿತು. ಆಗಲೇ ಮಾತನಾಡಿದ್ದೀರಿ. ಎಷ್ಟು ಸಲ ಕ್ಲಾರಿಫಿಕೇಶನ್ ಕೇಳುವುದು? ಪದೇ ಪದೇ ಕ್ಲಾರಿಫಿಕೇಶನ್ ಕೇಳುತ್ತಿರುವುದೇ? ಎಲ್ಲರೂ ಮಾತನಾಡಿದ್ದೀರಿಲ್ಲಾ. ಈಗ ಅವರು ಏನು ಅಭಿಪ್ರಾಯ ಕೊಡುತ್ತಾರೋ ಕೇಳೋಣ. ಅದಕ್ಕೂ ಅವಕಾಶ ಕೊಡವುದಿಲ್ಲವೆಂದರೆ ಹೇಗೆ?

ಶ್ರೀ ಎ.ಕೃಷ್ಣಪ್ಪ: ಲಿಮಿಟೆಡ್ ಡಿಸ್‌ಕಷನ್ ಮಾಡಬೇಕೆಂದು ನೀವು ಮೊದಲನೇ ಸಲ ಹೇಳುತ್ತಿದ್ದೀರಲ್ಲಾ. ನಾವು Only to Draw the Atetention of the Government. Wherever they have Committed mistakes. ಹೇಳುತ್ತಿದ್ದೇವೆ. ನಮಗೆ ಹೇಳುವುದಕ್ಕೂ ತಾವು ಬಿಡುವುದಿಲ್ಲವೆಂದರೆ ಹೇಗೆ Sorry ಸರ್. ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟಲ್ಲಿ They have committed a big blunder. 80 ಪರ್ಸೆಂಟ್ ಮಾರ್ಕ್ಸ್‌ಗೆ ನಾವು

ರಿಇಂಬರ್ಸ್‌ಮೆಂಟ್ ಕೊಡುತ್ತೇವೆಂದು ಕಾನೂನು ಮಾಡಿದ್ದಾರೆ. ಅದು ಯಾರಿಗೆ ಹೋಗುತ್ತದೆ?

(ಈ ಹಂತದಲ್ಲಿ ಸಚಿವರಾದ ಶ್ರೀ ಆರ್. ಅಶೋಕ್‌ರವರು ಎದ್ದು ನಿಂತು ಮಾತನಾಡಿದ್ದು ಸ್ಪಷ್ಟವಾಗಿ ಕೇಳಿಸಲಿಲ್ಲ)

ಉಪಾಧ್ಯಕ್ಷರು: ಅಶೋಕ್‌ರವರೆ, ನೀವು ಕುಳಿತುಕೊಳ್ಳಿ.

ಶ್ರೀ ಎ.ಕೃಷ್ಣಪ್ಪ: ನೀವು ಯಾವುದೂ ಕೇಳುವುದಿಲ್ಲವೆಂದರೆ, ಹೇಗೆ ಮಾಡುವುದಕ್ಕಾಗುತ್ತದೆ?

(ಈ ಹಂತದಲ್ಲಿ ಸದಸ್ಯರಾದ ಶ್ರೀ ದಿನೇಶ್ ಗುಂಡೂರಾವ್‌ರವರು ಮಾತನಾಡಲು ಎದ್ದು ನಿಂತರು)

ಉಪಾಧ್ಯಕ್ಷರು: ದಿನೇಶ್‌ರವರೆ, ತಾವು ಆಗಲೇ ಮಾತನಾಡಿದ್ದೀರಿ. ಮಾತನಾಡಲು ಅವಕಾಶ ಕೋರಿದವರೆಲ್ಲರಿಗೂ ಆಗಲೇ ಅವಕಾಶ ಕೊಟ್ಟಾಯಿತಲ್ಲ. ಮತ್ತೇಕೆ ಕ್ಲಾರಿಫಿಕೇಶನ್? ನೀವು ಕೇಳುವುದೇ ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಡಿ.ಹೆಚ್. ಶಂಕರಮೂರ್ತಿ: ಮಾನ್ಯ ಉಪಾಧ್ಯಕ್ಷರೆ, ಈಗ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಶ್ರೀ ಶಿವಾನಂದ ಎಸ್ ಪಾಟೀಲ್: ನಿಮಗೆಲ್ಲಾ ತಿಳಿದಿದೆ, ನಾವೂ ಕ್ಲಾರಿಫೀಕೇಶನ್ ಕೇಳುವವರೇ. ಬದಲಾಗಿ ಆ ಬಿಲ್‌ಮೇಲೆ ಎರಡು ತಾಸು ಭಾಷಣ ಮಾಡುವವರೇನಲ್ಲ.

ಉಪಾಧ್ಯಕ್ಷರು: ಹಾಗಲ್ಲ.

ಶ್ರೀ ಎಸ್. ಶಿವಾನಂದ ಪಾಟೀಲ್: ನಾನು ನಿಮಗೆ ಇಷ್ಟೆ ಹೇಳುತ್ತೇನೆ. ನೀವು ಬಹಳ ಚೆನ್ನಾಗಿ ತಿಳಿದುಕೊಂಡಿರತಕ್ಕ ಉಪಾಧ್ಯಕ್ಷರು. ಒಂದು ಸ್ವಲ್ಪ ಹೇಳಿಬಿಡುತ್ತೇನೆ ನಿಮಗೆ ರಿಯಲಿ.

ಉಪಾಧ್ಯಕ್ಷರು: ಈ ಸ್ಥಾನದಲ್ಲಿ ಕುಳಿತಿದ್ದರೆ ಎಲ್ಲರಿಗೂ ಏನೆಂದು ಗೊತ್ತಾಗುತ್ತಿತ್ತು. ಎಲ್ಲರೂ ಒಂದು ಹತ್ತತ್ತು ನಿಮಿಷ ಕುಳಿತು ಎದ್ದು ಹೊಗಿದ್ದರೆ ಗೊತ್ತಾಗುತ್ತಿತ್ತು.

ಶ್ರೀ ಎಸ್.ಶಿವಾನಂದಪಾಟೀಲ್: ಗೊತ್ತಾಗುತ್ತದೆ. ನಾವು ಹೇಳುತ್ತೇವೆ. ನಮಗಿರುವ ಡೌಟ್ಸ್‌ನ್ನು ನಾವು ಕ್ಲಾರಿಫೈ ಮಾಡಿಕೊಳ್ಳುವುದು ಬೇಡವೆಂದರೆ ನಿಮ್ಮಿಷ್ಟ.

ಉಪಾಧ್ಯಕ್ಷರು: ಮಾನ್ಯ ಆಶೋಕ್‌ರವರೆ, ತಾವು ಕುಳಿತುಕೊಳ್ಳಿ, ನೀವು ಕುಳಿತುಕೊಳ್ಳಿ ಅವರು ಮಾತನಾಡುತ್ತಿದ್ದಾರೆ.

(ಗೊಂದಲ)

ಶ್ರೀ ಎಸ್. ಶಿವಾನಂದಪಾಟೀಲ್: ಮಾನ್ಯ ಉಪಾಧ್ಯಕ್ಷರೆ, ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಎರಡೇ ಎರಡು ಪ್ರಶ್ನೆಗಳನ್ನು ಕೇಳಲು ಇಚ್ಚೆಪಡುತ್ತೇನೆ. ಈಗ ನಿಮಗೂ ಗೊತ್ತಿದೆ ಸಿಲಬಸ್ ಬಗ್ಗೆ ನೀವು ಅಟಾನಮಿ ಕೊಡುತ್ತೇವೆಂದು ಮಾತನಾಡುತ್ತಿದ್ದೀರಿ. ಸಿ.ಇ.ಟಿ. ಮತ್ತು ಕಾಮೇಡ್-ಕೆ Exams ನಡೆಯುತ್ತವೆ. ಸಿ.ಇ.ಟಿ. ಯಲ್ಲಿ ಪಾಸಾಗಿರತಕ್ಕಂಥ ಮಕ್ಕಳಿಗೆ ಅಡ್ಮಿಷನ್ ಸಿಗುತ್ತದೆ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಸಿ.ಇ.ಟಿ. ಫೇಲ್ ಆಗಿರತಕ್ಕ ಮಕ್ಕಳಿಗೆ ಕಾಮೇಡ್-ಕೆ ನಲ್ಲಿ ಅಡ್ಮಿಷನ್ ಸಿಗುತ್ತದೆ. ಮೆಡಿಕಲ್ ಕಾಲೇಜಿನವರು. ಮುರಗೋಡು ಕಮಿಟಿಯಿಂದ Fee Fixation ಆಯಿತು. ಇದೇ ಸಿಲಬಸ್‌ನ ಆಧಾರದ ಮೇಲೆ 1 ಲಕ್ಷದ 50 ಸಾವಿರ ರೂಪಾಯಿ ಫೀ ಫಿಕ್ಸ್ ಮಾಡಿದ್ದಾರೆ. ಇದನ್ನು ಯಾವ ಬಡವರ ಮಕ್ಕಳು ಕೊಡುತ್ತಾರೆ ಹೇಳಿ? ಅದಕ್ಕೆ ಉತ್ತರವನ್ನು ನೀವು ಕೊಡಬೇಕಾಗುತ್ತದೆ. ನೀವು ಈಗ ಸಿಲಬಸ್ ಅಟಾನಮಿ ಕೊಡುತ್ತಿರಿ. ನಾಳೆ ಅಡ್ಮಿಷನ್ ಅಟಾನಮಿ ಕೋಡುತ್ತೀರಿ ಅವರಿಗೆ. ಕಾಮೇಡ್-ಕೆ ನಲ್ಲಿ ನಡೆಯತಕ್ಕದೇ ಇದು. ಕಾಮೇಡ್‌ಕೆ ನಲ್ಲಿ ಒಬ್ಬ ಮೆರಿಟೋರಿಯಸ್ ಹುಡುಗ ಸಿ.ಇ.ಟಿ. ರ್‍ಯಾಂಕಿಂಗ್‌ನಲ್ಲಿ 3000 ಇಲ್ಲವೆ 4000 ಸೀಟಿಗೆ ನಿಂತಿರುತ್ತಾನೆ. ಅವನು ಬಂದು ಕಾಮೇಡ್-ಕೆ ಕುಳಿತರೆ ಫೇಲ್ ಆಗುತ್ತಾನೆ. ಕಾಮೇಡ್-ಕೆ ಪೇಪರ್ಸ್‌ನ್ನು ಯಾರು ಸೆಟ್ ಮಾಡಿರುತ್ತಾರೆ ಎಂಬುದನ್ನು ಇವರು ಹೇಳಬೇಕು. One who stands Meritorious in CET, he gets failed in the Comed-K exam. ನೀವು ಇದಕ್ಕೆ ಉತ್ತರ ಹೇಳುತ್ತೀರಾ. ಮಾನ್ಯ ಯಡಿಯೂರಪ್ಪ. ಸಾಹೇಬರಿಗೆ ಏಕೆ ಆತುರವಾಗಿದೆಯೋ ನನಗೆ ಗೊತ್ತಿಲ್ಲ. ನಿಮ್ಮನ್ನು ಬಿಲ್ಲನ್ನು ಮೂವ್ ಮಾಡಿ ಮೂವ್ ಮಾಡಿ ಎಂದು ಹೇಳುತ್ತಿದ್ದಾರೆ. ಇನ್ನೂ ನಾಲ್ಕು ವರ್ಷ ಇದೆ, ಬಹಳ ಇದೆ, ಮೂವ್ ಮಾಡಿ ಬೇಕಾದಷ್ಟು. ನಾವು ಬೇಡವೆಂದು ಹೇಳುವುದಿಲ್ಲ.

ಶ್ರೀ ಆರ್. ಅಶೋಕ್: ನೀವೂ ಕೂಡ ಇದನ್ನೇ ಮಾಡಿದ್ದೀರಿ. ಆದರೆ ಅಲ್ಲಿ ಕುಳಿತ ತಕ್ಷಣ ಬದಲಾವಣೆ ಮಾಡುತ್ತೀರಿ.

ಶ್ರೀ ಎಸ್. ಶಿವಾನಂದಪಾಟೀಲ್: ಆಗ ನಾನು ನಿಮ್ಮ ಜೊತೆ ಇದ್ದೆ. ನಾನು ಆವತ್ತು ಅದೇ ಸ್ಟ್ಯಾಂಡ್‌ನಲ್ಲಿದ್ದೆ ಇವತ್ತು ಅದೇ ಸ್ಟ್ಯಾಂಡ್‌ನಲ್ಲಿದ್ದೇನೆ. ಇವರು ಮಾಡಿದ್ದರೆ ಅದು ತಪ್ಪು ಎಂದು ನಾನೇ ಹೇಳುತ್ತಿದ್ದೇನೆ.

ಉಪಾಧ್ಯಕ್ಷರು: ಮಾನ್ಯ ಶಿವಾನಂದಪಾಟೀಲರೇ ತಮ್ಮದು ಆಯಿತೆ? ಈಗಾಗಲೇ 16 ಜನರು ಇದರ ಬಗ್ಗೆ ಮಾತನಾಡಿದ್ದರೆ. ಇನ್ನು ಮಾತನಾಡುವುದು ಏನಿದೆ?

ಶ್ರೀ ಎಸ್. ಶಿವಾನಂದಪಾಟೀಲ್: ನಮಗೆ ಒಂದು ವಿಚಾರವನ್ನು ಹೇಳಲಿ. ಸಿ.ಇ.ಟಿ.ಯಲ್ಲಿ ಪಾಸಾಗಿರತಕ್ಕ ಮಕ್ಕಳು ಕಾಮೇಡ್-ಕೆ ಯಲ್ಲಿ ಹೇಗೆ ಫೇಲಾಗುತ್ತಾರೆ?

ಶ್ರೀ ಡಿ.ಹೆಚ್. ಶಂಕರಮೂರ್ತಿ: ಮಾನ್ಯ ಉಪಾಧ್ಯಕ್ಷರೆ, ನಾನು ತರುತ್ತಿರತಕ್ಕ ಈ ವಿಧೇಯಕಕ್ಕೂ ಸಿ.ಇ.ಟಿ.ಗೂ ಏನು ಸಂಬಂಧ ಇಲ್ಲ. ನಾನು ಎಲ್ಲಾ ವಿಷಯಗಳನ್ನು ಹೇಳಿದ್ದೇನೆಂದು ಅಂದುಕೊಂಡಿದ್ದೇನೆ. ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ (ತಿದ್ದುಪಡಿ) 2006, ಅಂಗೀಕೃತವಾಗಬೇಕೆಂದು ವಿನಂತಿಸುತ್ತೇನೆ.

ಶ್ರೀ ಎನ್. ಧರ್ಮ್‌ಸಿಂಗ್ (ವಿರೋಧ ಪಕ್ಷದ ನಾಯಕರು): ಸಾಕಷ್ಟು ಜನರು ಇದರಲ್ಲಿ ಭಾಗವಹಿಸಿದ್ದಾರೆ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಇದನ್ನು ಪ್ರಾರಂಭ ಮಾಡಿದ್ದಾರೆ. ಎಲ್ಲರೂ ಕೂಡ ಭಾಗವಹಿಸಿ ಹೇಳಿದ್ದಾರೆ. ಇದು ಬಹಳ ಮಹತ್ವವಾದ ಮಸೂದೆ. ಇದರ ಬಗ್ಗೆ ಸ್ಪಷ್ಟೀಕರಣ ಕೊಟ್ಟಿಲ್ಲ. ಕನ್‌ವಿನ್ಸ್ ಮಾಡಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪಮುಖ್ಯಮಂತ್ರಿಗಳು): ಈ ಬಿಲ್ಲನ್ನು ತಯಾರು ಮಾಡಿದವರೇ ತಾವು. ನೀವು ಇದನ್ನು ತಯಾರು ಮಾಡಿದಾಗ ಅಮೃತವಾಗಿತ್ತು. ನಿಮ್ಮ ಕೈಯಲ್ಲಿ ಅಮೃತವಾಗಿದೆ. ಆದರೆ ಈಗ ವಿಷವಾಗಿದೆ ಅಲ್ಲವೇ? ನೀವೇ ತಂದಿರುವಂಥ ಬಿಲ್ಲನ್ನು ತಂದಾಗ. ನೀವು ತಂದಾಗ ಅದು ಅಮೃತ, ಈಗ ಅದನ್ನು ನಾವು ಮೂವ್ ಮಾಡಿದರೆ ವಿಷ.

ಶ್ರೀ ಎನ್.ಧರ್ಮಸಿಂಗ್: ಹಾಗಲ್ಲ, ಆ ಕಾಲದಲ್ಲಿ ಆಗಿತ್ತು. ಇನ್ನೂ ಆಗತಕ್ಕದ್ದು ಇತ್ತು. ಪರಿಸ್ಥಿತಿ ಏನು ಅದರ ಬಗ್ಗೆ ಈವತ್ತು ಸದನದಲ್ಲಿ ಈ ಒಂದು ಮಸೂದೆ ಮಂಡಿಸಿದ ಮೇಲೆ ಇದರ ಹಿನ್ನಲೆ ಸಾಕಷ್ಟು ವಿಚಾರಗಳನ್ನು ಬೆಳಕು ಚೆಲ್ಲಿದ್ದಾರೆ. ಅದಕ್ಕೆ ತಾವು ಏನು ಸ್ಪಷ್ಟೀಕರಣ ನೀಡಿಲ್ಲ. ಆ ರೀತಿ ಸ್ಪಷ್ಟೀಕರಣ ಮಾಡಲಾರದೆ ಈವತ್ತಿನ ದಿವಸ ಬಹುಮತ ಇದೆಯೆಂದು ತಿಳಿದು ತಾವು ಇದರ ಬಗ್ಗೆ ಮತಕ್ಕೆ ಹಾಕಿದರೆ ನಾವು ಒಪ್ಪುವುದಿಲ್ಲ.

ಶ್ರೀ ಡಿ.ಹೆಚ್.ಶಂಕರಮೂರ್ತಿ (ಉನ್ನತ ಶಿಕ್ಷಣ ಸಚಿವರು): ಮಾನ್ಯ ಅಧ್ಯಕ್ಷರೆ, 2006ರ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ವಿನಂತಿಸುತ್ತೇನೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಇದನ್ನು ಪ್ರತಿಭಟನೆ ಮಾಡಿ ನಾನು ಸಭಾತ್ಯಾಗ ಮಾಡುತ್ತೇನೆ.

(ಈ ಹಂತದಲ್ಲಿ ಜೆ.ಡಿ.ಯು ಪಕ್ಷದ ಸದಸ್ಯರಾದ ಮಾನ್ಯ ಜೆ.ಸಿ. ಮಾಧುಸ್ವಾಮಿಯವರನ್ನು ಹೊರತುಪಡಿಸಿ ಉಳಿದ ವಿರೋಧ ಪಕ್ಷಗಳ ಎಲ್ಲಾ ಸದಸ್ಯರುಗಳು ಸಭಾತ್ಯಾಗ ಮಾಡಿದರು)

ಉಪಾಧ್ಯಕ್ಷರು: ಏನೆಂದರೆ "2006ರ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವದ್ಯಾಲಯ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2

ಪ್ರಸ್ತಾವ ಏನೆಂದರೆ:-

ಉಪಾಧ್ಯಕ್ಷರು: "ಖಂಡ 2 ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ "ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಡಿ.ಹೆಚ್.ಶಂಕರಮೂರ್ತಿ (ಉನ್ನತ ಶಿಕ್ಷಣ ಸಚಿವರು): ಮಾನ್ಯ ಉಪಾಧ್ಯಕ್ಷರೆ, "2006ರ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ "2006ರ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು"

(ಅನುಬಂಧ-2)

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ಉಪಾಧ್ಯಕ್ಷರು: ಈಗ ಸದನವನ್ನು ನಾಳೆ ಬೆಳಿಗ್ಗೆ 10-00ಗಂಟೆವರೆಗೆ ಮುಂದೂಡುತ್ತಿದ್ದೇನೆ.